ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 1 ಶುಕ್ರವಾರ 2023

ಸಂಪುಟ: 44 | ಸಂಚಿಕೆ: 137 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871


ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com


₹4

25 ಸಾವಿರ ಕ್ಯುಸೆಕ್ ನೀರಿಗೆ ತಮಿಳುನಾಡು ಪಟ್ಟು

● ದೆಹಲಿಯಲ್ಲಿ ಕಾನೂನು ತಜ್ಞರ ಜೊತೆ ಡಿ.ಕೆ.ಶಿವಕುಮಾರ್ ಸಭೆ
● ವಸ್ತುಸ್ಥಿತಿ ಅರಿಯಲು ತಜ್ಞರ ತಂಡ ಕಳುಹಿಸಲು ಮನವಿ
● ಜಲಾಶಯಗಳ ಸ್ಥಿತಿಗತಿ ಮನವರಿಕೆ; ಹರಿಸಿದ ನೀರಿನ ಮಾಹಿತಿ

ಸುಪ್ರೀಂಕೋರ್ಟ್‌ನಲ್ಲಿ ಇಂದು ವಿಚಾರಣೆ








ನವದೆಹಲಿ, ಆ.31(ಬಿಎಲ್‌ಯು)– ಕಾವೇರಿ ನದಿಯಿಂದ 25 ಸಾವಿರ ಕ್ಯುಸೆಕ್ ನೀರು ಬಿಡಬೇಕೆಂದು ಪಟ್ಟು ಹಿಡಿದು ತಮಿಳುನಾಡು ಸಲ್ಲಿಸಿರುವ ಅರ್ಜಿ ವಿಚಾರಣೆ ಶುಕ್ರವಾರ ಸುಪ್ರೀಂಕೋರ್ಟ್‌ನಲ್ಲಿ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಜಲಸಂಪನ್ಮೂಲ ಸಚಿವರೂ ಆದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ದೆಹಲಿಯಲ್ಲಿ ಗುರುವಾರ ಕಾನೂನು ತಜ್ಞರು ಹಾಗೂ ಅಧಿಕಾರಿಗಳ ಜೊತೆ ಸಮಾಲೋಚನೆ ನಡೆಸಿದರು.

ನವದೆಹಲಿಯ ಕರ್ನಾಟಕ ಭವನದಲ್ಲಿ ನಡೆದ ಸಭೆಯಲ್ಲಿ ಅಡ್ವೋಕೇಟ್ ಜನರಲ್ ಶಶಿಕಿರಣ್ ಶೆಟ್ಟಿ, ಕರ್ನಾಟಕದ ಪರ ವಕೀಲ ಮೋಹನ್ ಕಾತರಕಿ, ಜಲಸಂಪನ್ಮೂಲ ಅಪರ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್, ತಾಂತ್ರಿಕ ಸಲಹೆಗಾರ ಜಯಪ್ರಕಾಶ್ ಸೇರಿದಂತೆ ಹಲವರು ಭಾಗವಹಿಸಿದ್ದರು. ಸುಮಾರು ಮೂರು ಗಂಟೆಗಳ ಕಾಲ ನಡೆದ ಸಭೆಯಲ್ಲಿ ನೀರಾವರಿ ಇಲಾಖೆಯ ಇಂಜಿನಿಯರ್‌ಗಳು ಕೂಡ ಭಾಗವಹಿಸಿದ್ದರು. ನಾಳೆ ಸುಪ್ರೀಂ ಕೋರ್ಟ್‌ನಲ್ಲಿ ನಡೆಯುವ ವಿಚಾರಣೆ ವೇಳೆ ಕರ್ನಾಟಕ ಕಾವೇರಿ ಜಲಾನಯನ ಪ್ರದೇಶದ ಜಲಾಶಯಗಳಲ್ಲಿನ ನೀರಿನ ಸ್ಥಿತಿಗತಿ, ಬೆಳೆಯ ಸ್ಥಿತಿ, ಕುಡಿಯುವ ನೀರಿನ ಅವಶ್ಯಕತೆ ಸೇರಿದಂತೆ ಹಲವು ವಿಚಾರಗಳನ್ನು ಸುಪ್ರೀಂಕೋರ್ಟ್‌ಗೆ ಮನದಟ್ಟು ಮಾಡಿಕೊಡಲು ತೀರ್ಮಾನಿಸಲಾಯಿತು. ಕರ್ನಾಟಕದ ಪರವಾಗಿ ಸಮರ್ಥ ವಾದ ಮಂಡಿಸುವಂತೆ ಈ ವೇಳೆ ಡಿ.ಕೆ.ಶಿವಕುಮಾರ್ ಕರ್ನಾಟಕದ ವಕೀಲರ ತಂಡಕ್ಕೆ ಸಲಹೆ ನೀಡಿದರು. ತರುವಾಯ ಪತ್ರಕರ್ತರ ಜೊತೆ ಮಾತನಾಡಿದ ಡಿ.ಕೆ.ಶಿವಕುಮಾರ್, 24 ಸಾವಿರ ಕ್ಯೂಸೆಕ್ ನೀರು ಬಿಡುವಂತೆ ತಮಿಳುನಾಡು ಕೇಳುತ್ತಿದೆ. ಈ ಹಿನ್ನೆಲೆಯಲ್ಲಿ ನಮ್ಮ ಜಲಾಶಯಗಳಿಗೆ ಭೇಟಿ ನೀಡಿ ವಾಸ್ತವತೆ ಅರಿಯಲು ತಜ್ಞರ ತಂಡ ಕಳುಹಿಸುವಂತೆ ಸುಪ್ರೀಂಕೋರ್ಟ್‌ಗೆ ● 9ನೇ ಪುಟಕ್ಕೆ

ತಮಿಳುನಾಡು ಕೇಳಿದಂತೆಲ್ಲಾ ನೀರು ಬಿಡುಗಡೆ

ಕೆಆರ್‌ಎಸ್ ಜಲಾಶಯದ ನೀರು 100 ಅಡಿಗೆ ಕುಸಿತ

● ಕಬಿನಿ ಜಲಾಶಯದ ಮಟ್ಟ ಸಾಕಷ್ಟು ಇಳಿಕೆ ● 5 ಸಾವಿರ ಕೇಳಿದರೆ 9 ಸಾವಿರ ಕ್ಯುಸೆಕ್ ನೀರು ಬಿಡುಗಡೆ ● ಇಷ್ಟಕ್ಕೆ ಮುಗಿಯದ ತಮಿಳುನಾಡು ನೀರಿನ ದಾಹ ● ಭತ್ತ ನಾಟಿ ವೇಳೆ ಮತ್ತೆ ನೀರಿಗೆ ಬೇಡಿಕೆ ಸಲ್ಲಿಕೆ ಗ್ಯಾರಂಟಿ



ಮೈಸೂರು, ಆ.31(ಬಿಎಲ್‌ಯು)– ಪ್ರತಿದಿನ ಐದು ಸಾವಿರ ಕ್ಯುಸೆಕ್ ನೀರು ಬಿಡಬೇಕೆಂಬ ತಮಿಳುನಾಡಿನ ಒತ್ತಡಕ್ಕೆ ಕೊನೆಗೂ ರಾಜ್ಯ ಸರ್ಕಾರ ಮಣಿದಿದೆ. ತಮಿಳುನಾಡಿಗೆ ಪ್ರತಿದಿನ ಈ ಪ್ರಮಾಣದ ನೀರು ಬಿಡುವಂತೆ ಕಾವೇರಿ ನಿರ್ವಹಣಾ ಪ್ರಾಧಿಕಾರ ಸೂಚನೆ ನೀಡಿದರೆ, ರಾಜ್ಯ ಸರ್ಕಾರ 9 ಸಾವಿರ ಕ್ಯುಸೆಕ್ ನೀರು ಬಿಡುತ್ತಿದೆ. ಪರಿಣಾಮ ಮಂಡ್ಯದ ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ 100 ಅಡಿಗೆ ಕುಸಿದರೆ, ಮೈಸೂರಿನ ಕಬಿನಿ ಜಲಾಶಯದ ಮಟ್ಟ 2,273 ಅಡಿಗೆ ಇಳಿದಿದೆ.

ಪ್ರತಿದಿನ 25 ಸಾವಿರ ಕ್ಯುಸೆಕ್ ನೀರು ಬಿಡುವಂತೆ ತಮಿಳುನಾಡು ಸರ್ಕಾರ ಪಟ್ಟು ಹಿಡಿದಿತ್ತು. ಆದರೆ ಕರ್ನಾಟಕ ಸರ್ಕಾರ ನೀರು ಬಿಡಲು ಸಾಧ್ಯವಿಲ್ಲ ಎಂದು ಹೇಳಿತ್ತು. ತರುವಾಯ ಎರಡು ಸರ್ಕಾರಗಳ ವಾದ–ಪ್ರತಿವಾದ ಆಲಿಸಿದ ಕಾವೇರಿ ನಿರ್ವಹಣಾ ಮಂಡಳಿ ತಮಿಳುನಾಡಿಗೆ ಪ್ರತಿದಿನ 5 ಸಾವಿರ ಕ್ಯುಸೆಕ್ ಕಾವೇರಿ ನೀರು ಹರಿಸುವಂತೆ ಆದೇಶ ನೀಡಿತ್ತು. ನಮ್ಮ ಜಲಾಶಯದಲ್ಲೇ ನೀರು ಇಲ್ಲದ ಕಾರಣ ಪ್ರಾಧಿಕಾರ ಸೂಚನೆ ನೀಡಿರುವಷ್ಟು ನೀರು ಬಿಡಲು ಸಾಧ್ಯವಿಲ್ಲ ಎಂದು ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಜಲ ಸಂಪನ್ಮೂಲ ಸಚಿವರೂ ಆದ ಡಿ.ಕೆ.ಶಿವಕುಮಾರ್ ಹೇಳಿದ್ದರು. ಹೀಗೆ ಹೇಳಿದ ಒಂದೆರಡು ದಿನ ನೀರು ಬಿಡುಗಡೆ ಸ್ಥಗಿತ ಮಾಡಿದ ರಾಜ್ಯ ಸರ್ಕಾರ, ಈಗ ತಮಿಳುನಾಡು ಕೇಳಿದ್ದಕ್ಕಿಂತ ಹೆಚ್ಚಾಗಿಯೇ ನೀರು ಬಿಡುತ್ತಿದೆ. ಕೆಆರ್‌ಎಸ್ ಜಲಾಶಯದಿಂದ 7,279 ಕ್ಯುಸೆಕ್ ನೀರು ಬಿಡುತ್ತಿದ್ದರೆ, ಕಬಿನಿ ಜಲಾಶಯದಿಂದ 2,000 ಕ್ಯುಸೆಕ್ ನೀರು ಬಿಡಲಾಗುತ್ತಿದೆ. ● 9ನೇ ಪುಟಕ್ಕೆ

ಕಾವೇರಿಯ ಜಲ ವಿವಾದದ ಪುರಾಣ
■ ಪುಟ–4

‘ಲೋಕ’ ಸಮರಕ್ಕೆ ಬಿಜೆಪಿ ವರಿಷ್ಠರ ಸಿದ್ಧತೆ

● ರಾಜ್ಯ ನಾಯಕರ ಒಳಜಗಳಕ್ಕೆ ಬೇಸತ್ತು ಅನ್ಯಮಾರ್ಗದಲ್ಲಿ ಕಾರ್ಯ ಸಾಧನೆಗೆ ನಿರ್ಧಾರ ● ಬಿ.ಎಲ್.ಸಂತೋಷ್ ರಂಗ ಪ್ರವೇಶ; ಎರಡು ದಿನ ರಾಜ್ಯದಲ್ಲಿ ಚುನಾವಣಾ ಸಿದ್ಧತೆ ಸಭೆ



ಬೆಂಗಳೂರು, ಆ.31(ಕೆಎಂಶಿ)–ರಾಜ್ಯ ಬಿಜೆಪಿ ನಾಯಕರನ್ನು ಬದಿಗಿರಿಸಿ ಮುಂಬರುವ ಲೋಕಸಭಾ ಚುನಾವಣೆ ಸಿದ್ಧತೆ ಹಾಗೂ ಸಂಭವನೀಯ ಆಪರೇಷನ್ ಹಸ್ತಕ್ಕೆ ಬ್ರೇಕ್ ಹಾಕಲು ಕೇಂದ್ರ ನಾಯಕರೇ ರಂಗಪ್ರವೇಶ ಮಾಡಿದ್ದಾರೆ. ವಿಧಾನಸಭಾ ಚುನಾವಣಾ ಫಲಿತಾಂಶದ ನಂತರ ರಾಜ್ಯದಲ್ಲಿ ಸೊರಗಿರುವ ಬಿಜೆಪಿಗೆ ಸಂಘಟನಾಕಾರರ ಮೂಲಕ ಚೈತನ್ಯ ತುಂಬಲು ದೆಹಲಿ ನಾಯಕರು ಮುಂದಾಗಿದ್ದಾರೆ.

ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಸೇರಿದಂತೆ ಪ್ರಮುಖ ಮುಖಂಡರನ್ನು ಹೊರಗಿಟ್ಟು, ದೆಹಲಿ ನಾಯಕರು, ಸಂಘಟನೆಯ ಪ್ರಮುಖ ಮುಖಂಡರೊಂದಿಗೆ ಸಮಾಲೋಚನೆ ನಡೆಸಿದ್ದಾರೆ. ಕಳೆದ ಲೋಕಸಭೆ ಚುನಾವಣೆಯ ಫಲಿತಾಂಶವನ್ನೇ 2024ರಲ್ಲೂ ಮರುಕಳಿಸುವಂತೆ ಮಾಡಲು ಕಾರ್ಯಕರ್ತರು ಮತ್ತು ಸಂಘ ಪರಿಹಾರವನ್ನೇ ಮುಂದಿಟ್ಟುಕೊಂಡು ಚುನಾವಣೆ ಎದುರಿಸಲು ವರಿಷ್ಠರು ಚಿಂತನೆ ಮಾಡಿದಂತಿದೆ.

ಬಿಜೆಪಿಯ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಇದರ ನೇತೃತ್ವ ವಹಿಸಿದ್ದು, ಎರಡು ದಿನಗಳ ಕಾಲ ರಾಜ್ಯದಲ್ಲೇ ಉಳಿದು ಚುನಾವಣೆ ಸಿದ್ಧತೆ ಆರಂಭಿಸಿದ್ದಾರೆ. ಸಂತೋಷ್ ಸಲಹೆ ಮೇರೆಗೆ ಬಿಜೆಪಿಯ ವಿವಿಧ ಮೋರ್ಚಾಗಳು ಇಂದು ನಿರಂತರವಾಗಿ ಸಭೆ ನಡೆಸಿ ಚುನಾವಣೆ ಪೂರ್ವ ಸಿದ್ಧತೆ ನಡೆಸಿವೆ. ಮುಖಂಡರನ್ನು ಹೊರಗಿಟ್ಟು ಪ್ರಮುಖ ಮುಖಂಡರು, ಕಾರ್ಯಕರ್ತರೊಂದಿಗೆ ಸುದೀರ್ಘ ಸಮಾಲೋಚನೆ ನಡೆಸಿದ ಸಂತೋಷ್ ಆಯ್ದ ಮುಖಂಡರನ್ನು ಕರೆಸಿಕೊಂಡು ಕೆಲ ಕಾಲ ಚರ್ಚೆ ನಡೆಸಿದರು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪಕ್ಷಕ್ಕಾಗಿರುವ ಹಿನ್ನಡೆಗೆ ಕೆಲವು ● 9ನೇ ಪುಟಕ್ಕೆ

ಡಿಸೆಂಬರ್‌ನಲ್ಲಿ ಮಂಡ್ಯಕ್ಕೆ ಅಮೆರಿಕದ ಮಾಜಿ ಅಧ್ಯಕ್ಷ ಬರಾಕ್ ಒಬಾಮಾ ದಂಪತಿ ಭೇಟಿ

ಚಲುವರಾಯಸ್ವಾಮಿ ನೇತೃತ್ವದ ನಿಯೋಗದಿಂದ ಸಿದ್ದರಾಮಯ್ಯ ಭೇಟಿ; ಸರ್ಕಾರದ ನೆರವಿಗೆ ಮನವಿ





ಬೆಂಗಳೂರು, ಆ.31– ಮಂಡ್ಯದ ಹಲ್ಲೆಗೆರೆಯ ಭೂತಾಯಿ ಟ್ರಸ್ಟ್ ವತಿಯಿಂದ ಹಲ್ಲೆಗೆರೆಯಲ್ಲಿ ನಿರ್ಮಿಸಲಾಗುತ್ತಿರುವ ಅಂತಾರಾಷ್ಟ್ರೀಯ ಯೋಗ ಮತ್ತು ಧ್ಯಾನ ಕೇಂದ್ರ ಶಂಕುಸ್ಥಾಪನೆಗೆ ಅಮೆರಿಕ ಮಾಜಿ ಅಧ್ಯಕ್ಷ ಬರಾಕ್ ಒಬಾಮ ದಂಪತಿ, ಟಿಬೆಟಿಯನ್ ಧರ್ಮಗುರು ದಲೈಲಾಮಾ ಅವರು ಡಿಸೆಂಬರ್ ತಿಂಗಳಲ್ಲಿ ಆಗಮಿಸಲಿದ್ದಾರೆ.

ಈ ಹಿನ್ನೆಲೆಯಲ್ಲಿ ಟ್ರಸ್ಟ್ ಅಧ್ಯಕ್ಷರಾಗಿರುವ ಅಮೆರಿಕದ ವೈದ್ಯ ಡಾ. ಲಕ್ಷ್ಮಿ ನರಸಿಂಹಮೂರ್ತಿ, ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ಶಾಸಕರಾದ ರವಿಕುಮಾರ್ ಗಣಿಗ, ರಮೇಶ್ ಬಾಬು ಬಂಡಿಸಿದ್ದೇಗೌಡ ನೇತೃತ್ವದ ನಿಯೋಗವು ಗುರುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಚರ್ಚೆ ನಡೆಸಿತು. ಒಬಾಮ ದಂಪತಿ ಆಗಮಿಸುತ್ತಿರುವ ಕಾರಣ ಹಲ್ಲೆಗೆರೆಯಲ್ಲಿ ಹೆಲಿಪ್ಯಾಡ್, ರಸ್ತೆ, ಚರಂಡಿ, ವಿದ್ಯುದ್ದೀಪ, ಕುಡಿಯುವ ನೀರು ಮುಂತಾದ ಸೌಕರ್ಯಗಳನ್ನು ಸರ್ಕಾರದ ವತಿಯಿಂದ ಒದಗಿಸಿಕೊಡುವಂತೆ ನಿಯೋಗವು ಮನವಿ ಮಾಡಿತು.

ಅಂತಾರಾಷ್ಟ್ರೀಯ ಯೋಗ ಮತ್ತು ಧ್ಯಾನ ಕೇಂದ್ರವು ಹಲ್ಲೆಗೆರೆ, ಮಂಡ್ಯ ಜಿಲ್ಲೆ ಮಾತ್ರವಲ್ಲ ಇಡೀ ರಾಜ್ಯಕ್ಕೆ ದೊಡ್ಡ ಕೊಡುಗೆಯಾಗಲಿದೆ ಎಂದು ನಿಯೋಗದ ಸದಸ್ಯರು ಕೇಂದ್ರದ ಕಾರ್ಯ ಸ್ವರೂಪವನ್ನು ವಿವರಿಸಿದರು. ಮಾತ್ರವಲ್ಲ ಟ್ರಸ್ಟ್ ಮಾಡುತ್ತಿರುವ ಸಾಮಾಜಿಕ ಕಾರ್ಯವನ್ನು ವಿವರಿಸಿದರು.

ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ ಸಿಎಂ ಸಿದ್ದರಾಮಯ್ಯ ಅವರು, ಒಳ್ಳೆಯ ಕಾರ್ಯಗಳಿಗೆ ನಿಮ್ಮ ಜತೆ ನಾವಿದ್ದೇವೆ. ಬೇಕಾದ ಎಲ್ಲ ಬೆಂಬಲ ನೀಡಲಿದ್ದೇವೆ. ಶೀಘ್ರದಲ್ಲೇ ಅಧಿಕಾರಿಗಳ ಸಭೆ ಕರೆದು ಸಂಬಂಧಪಟ್ಟ ವಿಷಯಗಳ ಬಗ್ಗೆ ಚರ್ಚೆ ನಡೆಸುತ್ತೇನೆ ಎಂದು ಭರವಸೆ ನೀಡಿದರು.

ಅಮೆರಿಕದಿಂದ ಹಲ್ಲೆಗೆರೆಗೆ: ಅಮೆರಿಕ ಹಾಲಿ ಅಧ್ಯಕ್ಷರಾದ ಜೋ ಬೈಡನ್ ಅವರ ವೈದ್ಯಕೀಯ ಸಲಹೆಗಾರ ಡಾ. ವಿವೇಕ್ ಮೂರ್ತಿ ಅಮು ಭಾರತೀಯ ಮೂಲದವರು. ಡಾ.ವಿವೇಕ ಮೂರ್ತಿ ಅಮೆರಿಕದ ಹಿಂದಿನ ಅಧ್ಯಕ್ಷ ಬರಾಕ್ ಒಬಾಮಾ ಅವರಿಗೂ ವೈದ್ಯಕೀಯ ಸಲಹೆಗಾರರಾಗಿದ್ದರು.

ಡಾ.ವಿವೇಕ್ ಮೂರ್ತಿ ಅವರ ತಂದೆ, ಅನಿವಾಸಿ ಭಾರತೀಯ ಡಾ. ಲಕ್ಷ್ಮಿ ನರಸಿಂಹಮೂರ್ತಿ (ಎಲ್.ಎನ್.ಮೂರ್ತಿ) ಅವರು ತಮ್ಮ ಮಾತೃಭೂಮಿಯ ಅಭ್ಯುದಯಕ್ಕೆ ಪಣ ತೊಟ್ಟಿದ್ದಾರೆ. ಅವರ ಸ್ವಂತ ಊರು ಮಂಡ್ಯ ಜಿಲ್ಲೆಯ ಹಲ್ಲೆಗೆರೆಯಾಗಿದ್ದು, ಇಲ್ಲಿ 13 ಎಕರೆ ಪಿತ್ರಾರ್ಜಿತ ಜಮೀನಿದೆ. ಅದರಲ್ಲಿ ಭೂತಾಯಿ ಟ್ರಸ್ಟ್‌ನಿಂದ ಸುಮಾರು 80 ಕೋಟಿ ರೂ. ವೆಚ್ಚದಲ್ಲಿ ಅಂತಾರಾಷ್ಟ್ರೀಯ ಮಟ್ಟದ ಯೋಗ ಮತ್ತು ಧ್ಯಾನ ಕೇಂದ್ರ ತೆರೆಯಲು ಯೋಜಿಸಿ, ಕಾರ್ಯಪ್ರವೃತ್ತರಾಗಿದ್ದಾರೆ.



ಗಜ ಪಯಣಕ್ಕೆ ವೀರನಹೊಸಳ್ಳಿ ಗೇಟ್ ಬಳಿ ಸಿದ್ಧತೆ ಪೂರ್ಣಗೊಂಡಿದೆ.

ಮೈಸೂರು ದಸರಾ ಮಹೋತ್ಸವ-2023

ದಸರಾ ಗಜ ಪಯಣಕ್ಕೆ ಇಂದು ಚಾಲನೆ

● ಹುಣಸೂರು ತಾಲೂಕಿನ ವೀರನಹೊಸಳ್ಳಿ ಗೇಟ್ ಬಳಿ ಗಜಪಯಣ ಆರಂಭ ● ವಿವಿಧ ಸಾಂಸ್ಕೃತಿಕ ಕಲಾತಂಡಗಳ ಮೆರುಗು ● ಮೊದಲ ತಂಡದಲ್ಲಿ ಕ್ಯಾಪ್ಟನ್ ಅಭಿಮನ್ಯುವಿನೊಂದಿಗೆ 9 ಆನೆಗಳ ಆಗಮನ



ದುಬಾರೆ ಕ್ಯಾಂಪ್‌ನಿಂದ ಗಜಪಯಣಕ್ಕೆ ಸಜ್ಜಾಗಿರುವ ಮೂರು ಆನೆಗಳಿಗೆ ಅರಣ್ಯ ಸಿಬ್ಬಂದಿ ಪೂಜೆ ಸಲ್ಲಿಸಿದರು.


ಹುಣಸೂರು,ಆ.31(ಎಂಟಿವೈ,ಕೆಕೆ)– ನಾಡಹಬ್ಬ ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯಾದ ಗಜಪಡೆಯ ಆಗಮನಕ್ಕೆ ಕ್ಷಣಗಣನೆ ಆರಂಭವಾಗಿದ್ದು, ಸೆ.1ರಂದು ಬೆಳಗ್ಗೆ 9.45ರಿಂದ 10.15ರವರೆಗೆ ಸಲ್ಲುವ ಶುಭ ತುಲಾ ಲಗ್ನದಲ್ಲಿ ಪೂಜೆ ಸಲ್ಲಿಸುವ ಮೂಲಕ ಗಜ ಪಯಣಕ್ಕೆ ಚಾಲನೆ ದೊರೆಯಲಿದ್ದು, ಸಂಜೆ ವೇಳೆಗೆ 9 ಆನೆಗಳು ಮೈಸೂರಿನ ಅಶೋಕಪುರಂನಲ್ಲಿರುವ ಅರಣ್ಯ ಭವನದ ಆವರಣ ತಲುಪಲಿವೆ.


ಮೈಸೂರು ಜಿಲ್ಲೆಯ ಹುಣಸೂರು ತಾಲೂಕಿನ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ವೀರನಹೊಸಳ್ಳಿ ಗೇಟ್ ಬಳಿ ಸೆ.1ರಂದು ಬೆಳಗ್ಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹಾದೇವಪ್ಪ ಅಂಬಾರಿ ಆನೆ ಅಭಿಮನ್ಯು ನೇತೃತ್ವದ ಆನೆಗಳಿಗೆ ಗಜಪೂಜೆ ನೆರವೇರಿಸಿ, ಪಯಣಕ್ಕೆ ಚಾಲನೆ ನೀಡಲಿದ್ದಾರೆ. ಬಳಿಕ 15ಕ್ಕೂ ಹೆಚ್ಚು ಜಾನಪದ ಕಲಾತಂಡಗಳೊಂದಿಗೆ ವೀರನಹೊಸಳ್ಳಿ ಗೇಟ್‌ನಿಂದ ಗಿರಿಜನ ಆಶ್ರಮ ಶಾಲೆ ಸಮೀಪದ ಮೈದಾನದವರೆಗೂ ಮೆರವಣಿಗೆಯಲ್ಲಿ ಕರೆತರಲಾಗುತ್ತದೆ. ಬಳಿಕ ಆಶ್ರಮ ಶಾಲೆ ಸಮೀಪ ಆಯೋಜಿಸಿರುವ ಸಭಾ ಕಾರ್ಯಕ್ರಮದಲ್ಲಿ ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರು ಗಜಪಡೆಯ ಮೊದಲ ತಂಡದ 9 ಆನೆ ಹಾಗೂ ಎರಡನೇ ತಂಡದ 5 ಆನೆ ಸೇರಿದಂತೆ ಒಟ್ಟು 14 ಆನೆಗಳ ಪಟ್ಟಿಯನ್ನು ಬಿಡುಗಡೆ ಮಾಡಲಿದ್ದಾರೆ. ಕಾರ್ಯಕ್ರಮದಲ್ಲಿ ಪಶುಸಂಗೋಪನೆ ಇಲಾಖೆ ಮತ್ತು ರೇಷ್ಮೆ ಇಲಾಖೆಯ ಸಚಿವ ಕೆ.ವೆಂಕಟೇಶ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವ ಶಿವರಾಜ ಸಂಗಪ್ಪ ತಂಗಡಗಿ, ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ, ಸಂಸದರಾದ ಪ್ರತಾಪ ಸಿಂಹ, ವಿ.ಶ್ರೀನಿವಾಸ್ ಪ್ರಸಾದ್ ಹಾಗೂ ಸುಮಲತಾ ಅಂಬರೀಶ್, ಮೇಯರ್ ಶಿವಕುಮಾರ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಶಾಸಕರಾದ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ಅನಿಲ್ ಚಿಕ್ಕಮಾದು, ಡಿ.ರವಿಶಂಕರ್, ದರ್ಶನ್ ಧ್ರುವನಾರಾಯಣ್, ಟಿ.ಎಸ್ ಶ್ರೀವತ್ಸ, ಕೆ.ಹರೀಶ್‌ಗೌಡ, ವಿಧಾನ ಪರಿಷತ್ ಸದಸ್ಯರಾದ ಮರಿತಿಬ್ಬೇಗೌಡ, ಅಡಗೂರು ಹೆಚ್.ವಿಶ್ವನಾಥ್, ಡಾ.ಡಿ. ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ.ಮಾದೇಗೌಡ ಹಾಗೂ ದೊಡ್ಡ ಹೆಜ್ಜೂರು ಗ್ರಾಮ ಪಂಚಾಯತಿ ಅಧ್ಯಕ್ಷೆ ಅಂಬಿಕಾ ಲೋಕೇಶ್ ಇನ್ನಿತರರು ಉಪಸ್ಥಿತರಿರುವರು.

ಸ್ಥಳೀಯರಿಗೆ ಹಬ್ಬ: ಗಜಪಯಣಕ್ಕೆ ಸುತ್ತಮುತ್ತಲಿನ ಗ್ರಾಮ ಹಾಗೂ ಹಾಡಿ ಜನರನ್ನು ಆಹ್ವಾನಿಸಿದ್ದು, ಸುಮಾರು 3 ಸಾವಿರ ಜನರು ಗಜಪಯಣದ ಕಾರ್ಯಕ್ರಮಕ್ಕೆ ಸಾಕ್ಷಿಯಾಗುವ ನಿರೀಕ್ಷೆ ಇದೆ. ಕಾರ್ಯಕ್ರಮಕ್ಕೆ ಆಗಮಿಸುವ ಗಣ್ಯರು ಸೇರಿದಂತೆ ಸಾರ್ವಜನಿಕರಿಗೆ ಊಟದ ವ್ಯವಸ್ಥೆಯನ್ನು ಅರಣ್ಯ ಇಲಾಖೆ ಮಾಡಿದೆ. ವಿವಿಧ ವ್ಯಾಪಾರಿಗಳು ರಸ್ತೆಯುದ್ದಕ್ಕೂ ಆಟಿಕೆ ಸೇರಿದಂತೆ ವಿವಿಧ ವಸ್ತುಗಳ ಮಾರಾಟಕ್ಕೆ ಸಿದ್ಧತೆ ನಡೆಸಿದ್ದು, ದಸರಾ ಗಜಪಡೆಯ ಗಜಪಯಣಕ್ಕೆ ಜಾತ್ರಾ ಮೆರಗು ಕಟ್ಟಿಕೊಡಲಿದ್ದಾರೆ.

ಮೊದಲ ತಂಡದಲ್ಲಿ ಬರುವ ಆನೆಗಳು: ಈ ಸಾಲಿನ ದಸರಾ ● 9ನೇ ಪುಟಕ್ಕೆ

ಆನೆ ದಾಳಿಗೆ ಅರವಳಿಕೆ ತಜ್ಞ ವೆಂಕಟೇಶ್ ಬಲಿ





ಹಾಸನ: ಹಾಸನ ಜಿಲ್ಲೆಯ ಆಲೂರು ತಾಲೂಕಿನ ಹುಲಿಯೂರು ಗ್ರಾಮದಲ್ಲಿ ಕಾಡಾನೆ ದಾಳಿಯಲ್ಲಿ ಅರವಳಿಕೆ ತಜ್ಞ ವೆಂಕಟೇಶ್ ಮೃತಪಟ್ಟಿದ್ದಾರೆ.

ವೆಂಕಟೇಶ್ ಶಾರ್ಪ್ ಶೂಟರ್ ಆಗಿದ್ದು, ಆನೆಗೆ ಚಿಕಿತ್ಸೆ ನೀಡುವ ಮೊದಲು ಅರವಳಿಕೆ ನೀಡುವ ವೇಳೆ ಈ ಅವಘಡ ಸಂಭವಿಸಿದೆ. 40 ವರ್ಷದ ಕಾಡಾನೆ ಭೀಮನಿಗೆ ಮತ್ತೊಂದು ಆನೆಯೊಂದಿಗಿನ ಕಾಳಗದಲ್ಲಿ ಬೆನ್ನಿನ ಮೇಲೆ ಗಾಯಗಳಾಗಿತ್ತು. ಗ್ರಾಮಸ್ಥರ ದೂರಿನ ಹಿನ್ನೆಲೆಯಲ್ಲಿ ಗಾಯಗೊಂಡಿದ್ದ ಆನೆಗೆ ಚಿಕಿತ್ಸೆ ನೀಡುವ ಸಲುವಾಗಿ ಅರವಳಿಕೆ ನೀಡಲು ಹಾಸನ ಅರಣ್ಯ ವಿಭಾಗ, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಂದ ಅನುಮತಿ ಪಡೆದಿತ್ತು. ಕಾಡಾನೆ ಚಿಕಿತ್ಸೆಗಾಗಿ ಅರವಳಿಕೆ ಮದ್ದು ನೀಡಲು ಮುಂದಾದಾಗ ವೆಂಕಟೇಶ್ ಮೇಲೆ ಕಾಡಾನೆ ದಾಳಿ ನಡೆಸಿದೆ. ತೀವ್ರವಾಗಿ ಗಾಯಗೊಂಡಿದ್ದ ವೆಂಕಟೇಶ್ ಅವರನ್ನು ಆಸ್ಪತ್ರೆಗೆ ಸೇರಿಸಿದರೂ ಚಿಕಿತ್ಸೆ ಫಲಿಸದೇ ಕೊನೆಯುಸಿರೆಳೆದರು.

ಘಟನೆಯ ಬಗ್ಗೆ ತಿಳಿಯುತ್ತಿದ್ದಂತೆಯೇ ಹಿರಿಯ ಅರಣ್ಯಾಧಿಕಾರಿಗಳು ಸ್ಥಳಕ್ಕೆ ಆಗಮಿಸಿದರು. 50ಕ್ಕೂ ಹೆಚ್ಚು ಕಾಡಾನೆಗಳಿಗೆ ಅರವಳಿಕೆ ನೀಡುವ ಮೂಲಕ ವೆಂಕಟೇಶ್ ಅವರು ತಮ್ಮ ಕಾರ್ಯದಲ್ಲಿ ಖ್ಯಾತಿ ಪಡೆದಿದ್ದರು.

ಅರಣ್ಯ ಸಚಿವರ ಸಂತಾಪ: ನಾಡಿಗೆ ನುಗ್ಗಿದ ಆನೆ ಸೇರಿದಂತೆ ಹಲವಾರು ವನ್ಯಜೀವಿಗಳ ಸೆರೆಗೆ ಅರವಳಿಕೆ ಚುಚ್ಚುಮದ್ದುಗಳನ್ನು ಶೂಟ್ ಮಾಡಲು ಸಹಕರಿಸಿದ ಅರಣ್ಯ ಇಲಾಖೆಯ ಸಿಬ್ಬಂದಿ ವೆಂಕಟೇಶ್ ನಿಧನಕ್ಕೆ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಸಂತಾಪ ಸೂಚಿಸಿದ್ದಾರೆ. ಅರಣ್ಯ ಇಲಾಖೆಯಲ್ಲಿ ಆನೆ ಕ್ಷಿಪ್ರ ಕಾರ್ಯಪಡೆ ಹಾಗೂ ಆನೆಗಳಿಗೆ ಅರವಳಿಕೆ ನೀಡುವಲ್ಲಿ ಸಿದ್ಧಹಸ್ತರಾಗಿ “ಆನೆ ವೆಂಕಟೇಶ್” ಎಂದೇ ● 9ನೇ ಪುಟಕ್ಕೆ

ಮೈಸೂರು ಮಿತ್ರ

ಪೇಜಾವರ ಶ್ರೀಗಳ ಸಾನ್ನಿಧ್ಯದಲ್ಲಿ 'ಮಿತ್ರ'



ಮಂತ್ರಾಲಯ ಶ್ರೀ ರಾಘವೇಂದ್ರ ಸ್ವಾಮಿಗಳವರ 352ನೇ ಆರಾಧನಾ ಮಹೋತ್ಸವದ ಅಂಗವಾಗಿ 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ಪ್ರಕಟವಾದ ಅಂಕಣಕಾರ ನಂ.ಶ್ರೀಕಂಠಕುಮಾರ್ ಅವರ ಕಲಿಯುಗ ಕಲ್ಪತರು ಶ್ರೀ ಗುರುರಾಯರು ವಿಶೇಷ ಲೇಖನವನ್ನು ಪೇಜಾವರ ಶ್ರೀಮಠದ ಶ್ರೀ ವಿಶ್ವ ಪ್ರಸನ್ನ ತೀರ್ಥ ಶ್ರೀಪಾದರು ಅವಲೋಕಿಸಿದರು.

ವಲಯ ಮಟ್ಟದ ಪ್ರತಿಭಾ ಕಾರಂಜಿ: ವಿವಿಧ ಸ್ಪರ್ಧೆಗಳಲ್ಲಿ ಬಹುಮಾನ



ಮೈಸೂರು, ಆ. 31–ಮೈಸೂರು ನಗರ ಉತ್ತರ ವಲಯದ ಆಶ್ರಯದಲ್ಲಿ ಏರ್ಪಡಿಸಿದ್ದ ವಲಯ ಮಟ್ಟದ ಪ್ರತಿಭಾ ಕಾರಂಜಿಯ ವಿವಿಧ ಸ್ಪರ್ಧೆಗಳಲ್ಲಿ ಮೈಸೂರು ನಗರದ ಅನಂತಗೀತ ವಿದ್ಯಾಲಯದ ಮಕ್ಕಳು ಭಾಗವಹಿಸಿ ಬಹುಮಾನಗಳನ್ನು ಪಡೆದಿದ್ದಾರೆ. ಶಿಷಿರ್ ಪಿ ಕಶ್ಯಪ್ ತಿರುಪತಿ ತಿಮ್ಮಪ್ಪನ ವೇಷಧರಿಸಿ ಛದ್ಮವೇಷದಲ್ಲಿ ಪ್ರಥಮ ಸ್ಥಾನ, ತಪಸ್ವಿ ಚಿತ್ರಕಲೆಯಲ್ಲಿ ಪ್ರಥಮ ಸ್ಥಾನ, ಇಂಚರ ಲಘು ಸಂಗೀತದಲ್ಲಿ ಪ್ರಥಮ ಸ್ಥಾನ, ಕೃತಿಕಾ ಭಕ್ತಿಗೀತೆಯಲ್ಲಿ ಪ್ರಥಮ ಸ್ಥಾನ, ಹೃತ್ವಿಕ ಧಾರ್ಮಿಕ ಪಠಣದಲ್ಲಿ ಪ್ರಥಮ ಸ್ಥಾನ, ಸಾನ್ವಿ ಪದ್ಯ ವಾಚನದಲ್ಲಿ ದ್ವಿತೀಯ ಸ್ಥಾನ, ಪೂರ್ವಿ ಅಭಿನಯ ಗೀತೆಯಲ್ಲಿ ದ್ವಿತೀಯ ಸ್ಥಾನ, ಚೈತ್ರ ಧಾರ್ಮಿಕ ಪಠಣದಲ್ಲಿ ದ್ವಿತೀಯ ಸ್ಥಾನ, ಪ್ರಗತಿ ಇಂಗ್ಲಿಷ್ ಕಂಠಪಾಠದಲ್ಲಿ ದ್ವಿತೀಯ ಸ್ಥಾನ, ಓಂಕಾರ್ ಹಾಸ್ಯ ಚಟಾಕಿಯಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ. ಈ ವೇಳೆ ಶಾಲೆ ಅಧ್ಯಕ್ಷ ವೇಣುಗೋಪಾಲ್ ಕಲ್ಲೂರು, ಕಾರ್ಯದರ್ಶಿ ಗೀತಾ ಅನಂತರಾಮಯ್ಯ, ಪ್ರಾಂಶುಪಾಲ ಶ್ರೀಕಾಂತ್ ಅಮರನಾಥ್, ಹರದೂರು ಲೋಕೇಶ್, ನಿರ್ದೇಶಕರಾದ ಮಂಜುಳಾ ಕಲ್ಲೂರು, ಸಂಯೋಜನಾ ಶಿಕ್ಷಕರಾದ ಶ್ರೀಮತಿ ಜಮುನಾ, ವಿನುತಾ ಮತ್ತು ಸುಲೋಚನಾ ಉಪಸ್ಥಿತರಿದ್ದರು.

ನಾಳೆ ಸಂಸಾರದಲ್ಲಿ ಸನಿದಪ ನಾಟಕ ಪ್ರದರ್ಶನ



ಮೈಸೂರು,ಆ.31–ಮೈಸೂರಿನ 'ರಂಗವಲ್ಲಿ' ರಂಗ ತಂಡವು ಸೆ.2ರ ಶನಿವಾರ ಸಂಜೆ 7 ಗಂಟೆಗೆ ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಕೆ.ವಿ.ಅಕ್ಷರ ರಚಿಸಿರುವ 'ಸಂಸಾರದಲ್ಲಿ ಸನಿದಪ' (ಮೂಲ: ನೊಬೆಲ್ ಪ್ರಶಸ್ತಿ ಪುರಸ್ಕೃತ ನಾಟಕಕಾರ ದಾರಿಯೋ ಫೋ ರಚಿಸಿರುವ 'ದಿ ವರ್ಚುವಸ್ ಬರ್ಗ್‌ಲರ್) ನಾಟಕವನ್ನು ಪ್ರದರ್ಶಿಸಲಿದೆ. ಧನ್ಯ ಶ್ರೀಧರ್, ರಶ್ಮಿ ನಾರಾಯಣ್, ಭೂಮಿ, ಮಧುರಾಣಿ, ಮಂಜುನಾಥಶಾಸ್ತ್ರಿ, ರಾಜೇಶ್, ಮಂಜು ವಿ.ನರಸಾಪುರ, ರವಿಪ್ರಸಾದ್ ಅಭಿನಯಿಸಿರುವ, ಒಂದೂವರೆ ತಾಸು ಅವಧಿಯ ಈ ನಗೆನಾಟಕಕ್ಕೆ ಹರಿಪ್ರಸಾದ್ ವಸ್ತ್ರವಿನ್ಯಾಸ, ಕೃಷ್ಣಕುಮಾರ್ ನಾರ್ಣಕಜೆ–ಬೆಳಕಿನ ವಿನ್ಯಾಸ, ಸರಿತಾ ರಾಜೇಶ್, ರಾಘವೇಂದ್ರ ಬೂದನೂರ್–ಪ್ರಸಾದನ, ಮಂಜುಮಂಗಲ–ಸಂಗೀತ ನಿರ್ವಹಣೆ, ರವಿಪ್ರಸಾದ್ ನಿರ್ದೇಶನ ಮಾಡಿದ್ದಾರೆ. ಟಿಕೆಟ್ ದರ ರೂ.100. ವಿವರಗಳಿಗೆ ಮೊ.9590259590/ 9964656482 ಸಂಪರ್ಕಿಸಿ.

ನಾಳೆ ಬ್ರಹ್ಮೀಭೂತ ಶ್ರೀ ವಾಸುದೇವ ಮಹಾರಾಜ್ ಸದ್ಭಾವನಾ ಪ್ರಶಸ್ತಿ ಪ್ರದಾನ



ಮಂಜುಳಾ ಉಮೇಶ್



ಎಂ.ಪಿ.ಪ್ರಭುಸ್ವಾಮಿ



ಸುಪ್ರೀತ್



ಸಾಂಬಮೂರ್ತಿ



ಚಂದನ್‌ಗೌಡ



ಅಂಶಿ ಪ್ರಸನ್ನಕುಮಾರ್




ಎಂ.ಮೋಹನ್

ಮೈಸೂರು,ಆ.31–ಮೈಸೂರಿನ ಬ್ರಹ್ಮೀಭೂತ ಶ್ರೀ ವಾಸುದೇವ ಮಹಾರಾಜ್ ಫೌಂಡೇಷನ್ ವತಿಯಿಂದ ಬ್ರಹ್ಮೀಭೂತ ಶ್ರೀ ವಾಸುದೇವ ಮಹಾರಾಜ್ ಅವರ 16ನೇ ಆರಾಧನೆ ಅಂಗವಾಗಿ ಮೈಸೂರಿನ ಕೃಷ್ಣಮೂರ್ತಿಪುರಂನ ನಮನ ಕಲಾ ಮಂಟಪದಲ್ಲಿ ಸೆ.2ರಂದು ಸಂಜೆ 4.30 ಗಂಟೆಗೆ ವಿವಿಧ ಕ್ಷೇತ್ರಗಳ ಸಾಧಕರಿಗೆ ಶ್ರೀ ವಾಸುದೇವ ಮಹಾರಾಜ್ ಸದ್ಭಾವನಾ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಏರ್ಪಡಿಸಲಾಗಿದೆ. ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಕಾರ್ಯಕ್ರಮ ಉದ್ಘಾಟಿಸಲಿದ್ದು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಲಿದ್ದಾರೆ. ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಸಂಸ್ಕೃತಿ ಚಿಂತಕ ಡಾ.ಗುರುರಾಜ ಪೋಶೆಟ್ಟಿಹಳ್ಳಿ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಎಂ.ಪಿ.ಪ್ರಭುಸ್ವಾಮಿ (ಸಮಾಜಸೇವೆ), ಅಂಶಿ ಪ್ರಸನ್ನಕುಮಾರ್ (ಪತ್ರಿಕಾರಂಗ); ಎಂ.ಮೋಹನ್ (ದತ್ತ ಕ್ರಿಯಾಯೋಗ), ಮಂಜುಳಾ ಉಮೇಶ್ (ಸಾಹಿತ್ಯ), ಸಾಂಬಮೂರ್ತಿ (ಗಾಯನ), ಭೂಮಿಪುತ್ರ ಚಂದನ್‌ಗೌಡ (ಮಣ್ಣಿನ ಸೇವೆ), ಸುಪ್ರೀತ್ (ಚಲನಚಿತ್ರ ರಂಗ) ಅವರಿಗೆ ಶ್ರೀ ವಾಸುದೇವ ಮಹಾರಾಜ್ ಸದ್ಭಾವನಾ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಗುವುದು ಎಂದು ವಾಸುದೇವ ಮಹಾರಾಜ್ ಫೌಂಡೇಷನ್ ಸಂಸ್ಥಾಪಕ ಅಧ್ಯಕ್ಷ ಎಂ.ವಿ.ನಾಗೇಂದ್ರ ಬಾಬು, ಸಂಚಾಲಕ ಎನ್.ಅನಂತ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ವಿವರಗಳಿಗೆ 9845141050 ಸಂಪರ್ಕಿಸಬಹುದು.


ನಿಧನ

ದೇವನಾಯಕರು ಕುರಹಟ್ಟಿ



ನಂಜನಗೂಡು,ಆ.31–ಶ್ರೀ ನಂಜುಂಡೇಶ್ವರ ಬಳಗದ ಸದಸ್ಯರು ವಿಕಾಸ ಸಂಸ್ಥೆ (SBI)ಯ ಅರುಣ್ ಕುರಹಟ್ಟಿ ಅವರ ತಂದೆ ದೇವನಾಯಕರು ಕುರಹಟ್ಟಿ (85) (KEB) ಗುರುವಾರ ಬೆಳಗ್ಗೆ ನಿಧನರಾದರು. ಮೃತರು ಮೂವರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ನಂಜನಗೂಡಿನ ಕುರಹಟ್ಟಿ ಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸೌಭಾಗ್ಯಮ್ಮ



ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕು, ಕಸಬಾ ಹೋಬಳಿ, ಅಗಸನಪುರ ಗ್ರಾಮದ ನಿವಾಸಿ ಕಂಟ್ರಾಕ್ಟರ್ ಶಂಭುಲಿಂಗೇಗೌಡ ಅವರ ಧರ್ಮಪತ್ನಿ ಶ್ರೀಮತಿ ಸೌಭಾಗ್ಯಮ್ಮ (60) ಬುಧವಾರ ನಿಧನರಾದರು. ಮೃತರು ಪತಿ, ಪುತ್ರರು, ಸೊಸೆಯಂದಿರು ಹಾಗೂ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ.

ಸಿದ್ದಲಿಂಗಪುರದಲ್ಲಿ ಕನಕ ಭವನ ಉದ್ಘಾಟನೆ

ಸಂಘಟಿತರಾಗಿ ಹಕ್ಕುಗಳನ್ನು ಪ್ರತಿಪಾದಿಸಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಮತ



ಮೈಸೂರು,ಆ.31– ಡಾ.ಬಿ.ಆರ್. ಅಂಬೇಡ್ಕರ್‌ರವರು ಸಂವಿಧಾನದಲ್ಲಿ ಪ್ರತಿಯೊಬ್ಬರಿಗೂ ಹಕ್ಕುಗಳನ್ನು ನೀಡಿದ್ದಾರೆ. ಆದ್ದರಿಂದ ಎಲ್ಲಾ ಜನಾಂಗದವರು ಕೂಡ ಸಂಘಟಿತರಾಗಿ ಅವರ ಹಕ್ಕುಗಳನ್ನು ಪ್ರತಿಪಾದನೆ ಮಾಡಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದರು.

ಮೈಸೂರು ತಾಲೂಕು, ಸಿದ್ದಲಿಂಗಪುರ ಗ್ರಾಮದಲ್ಲಿ ಶ್ರೀ ಬೀರೇಶ್ವರ ಕುರುಬರ ಸಂಘದ ವತಿಯಿಂದ ನಿರ್ಮಿಸಿರುವ ಕನಕ ಭವನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಚಾಮುಂಡೇಶ್ವರಿ ಕ್ಷೇತ್ರದಲ್ಲಿ ನನ್ನನ್ನು 5 ಬಾರಿ ಗೆಲ್ಲಿಸಿ 3 ಬಾರಿ ಸೋಲಿಸಿದ್ದಾರೆ. ಕಳೆದಬಾರಿ ಚಾಮುಂಡೇಶ್ವರಿಯಲ್ಲಿ ಸೋಲುವ ಸುಳಿವು ಸಿಕ್ಕಿದ್ದರಿಂದ ಬಾದಾಮಿಯಲ್ಲಿ ನಿಲ್ಲಬೇಕಾಯಿತು. ಚಾಮುಂಡೇಶ್ವರಿ ಕ್ಷೇತ್ರಕ್ಕೆ ನಾನು ಮಾಡಿರುವಷ್ಟು ಕೆಲಸ ಬೇರೆ ಯಾರೂ ಮಾಡಿಲ್ಲ. ಈ ಸಮುದಾಯ ಭವನ ಕಟ್ಟಲು ಮಾದೇಗೌಡರು ಜಾಗವನ್ನು ದಾನ ಮಾಡಿದ್ದಾರೆ. ಅದು ಅವರ ದೊಡ್ಡಗುಣ.

ಶಾಲೆ, ಆಸ್ಪತ್ರೆ, ಹಾಸ್ಟೆಲ್‌ಗಳನ್ನು ಕಟ್ಟಲು ಜಾಗವನ್ನು ಹಿಂದೆ ಜನರೇ ದಾನ ಮಾಡುತ್ತಿದ್ದರು. ಇತ್ತೀಚೆಗೆ ದಾನ ಮಾಡುವವರು ಕಡಿಮೆಯಾಗಿದ್ದಾರೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ 5 ಗ್ಯಾರಂಟಿಗಳನ್ನು ಜಾರಿಗೆ ತಂದು ನುಡಿದಂತೆ ನಡೆದಿದ್ದೇವೆ. ಇಂದು ಗೃಹಲಕ್ಷ್ಮಿ ಯೋಜನೆಗೆ ಚಾಲನೆ ನೀಡಿದ್ದೇವೆ. 1 ಕೋಟಿ 10 ಲಕ್ಷ ಜನ ನೊಂದಣಿ ಮಾಡಿಕೊಂಡಿದ್ದಾರೆ. ವರ್ಷಕ್ಕೆ 32 ಸಾವಿರ ಕೋಟಿ ಖರ್ಚಾಗುತ್ತದೆ. 5 ಗ್ಯಾರಂಟಿಗಳಿಂದ ವರ್ಷಕ್ಕೆ 56 ಸಾವಿರ ಕೋಟಿ ಖರ್ಚಾಗುತ್ತದೆ. ಪ್ರತಿ ದಿನ 50 ಲಕ್ಷ ಮಹಿಳೆಯರು ಉಚಿತವಾಗಿ ಬಸ್ಸುಗಳಲ್ಲಿ ಓಡಾಡುತ್ತಿದ್ದಾರೆ. ಬಡವರಿಗೆ ಆರ್ಥಿಕವಾಗಿ ಶಕ್ತಿ ತುಂಬಲು ನೆಮ್ಮದಿಯ ಜೀವನ ನಡೆಸಲು 5 ಗ್ಯಾರಂಟಿ ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ ಎಂದರು.

ವಿಧಾನಪರಿಷತ್ ಸದಸ್ಯ ಅಡಗೂರು ವಿಶ್ವನಾಥ್ ಮಾತನಾಡಿ, ದೇಶದಲ್ಲೇ ಯಾವುದೇ ಸರ್ಕಾರ ಯಾವುದೇ ಮುಖ್ಯಮಂತ್ರಿಯೂ ಮಾಡದಂತಹ 5 ಗ್ಯಾರಂಟಿಗಳನ್ನು ಸಿದ್ದರಾಮಯ್ಯರವರ ನೇತೃತ್ವದ ಕಾಂಗ್ರೆಸ್ ಸರ್ಕಾರ ಜಾರಿಗೆ ತಂದು ಮಹಿಳೆಯರು ಅದರಲ್ಲೂ ಬಡಕುಟುಂಬದವರ ಆರ್ಥಿಕ ಸಬಲೀಕರಣಕ್ಕೆ ಕಾರ್ಯಕ್ರಮವನ್ನು ರೂಪಿಸಿದೆ ಎಂದರು.

ಸಮಾರಂಭದಲ್ಲಿ ಶ್ರೀ ಕಾಗಿನೆಲೆ ಶಾಖಾ ಮಠದ ಶ್ರೀ ಶಿವಾನಂದಪುರಿ ಸ್ವಾಮೀಜಿ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, ಡಾ.ಯತೀಂದ್ರ ಸಿದ್ದರಾಮಯ್ಯ, ಕೆ.ಮರೀಗೌಡ, ರಾಜ್ಯ ಕುರುಬರ ಸಂಘದ ಅಧ್ಯಕ್ಷ ಸುಬ್ರಹ್ಮಣ್ಯ, ರಾಕೇಶ್ ಪಾಪಣ್ಣ, ಲೇಖಾ ವೆಂಕಟೇಶ್, ಜವರೇಗೌಡ, ಸೋಮಣ್ಣ, ಗೋಪಿ, ಶಿವಣ್ಣ, ನಾರಾಯಣ, ಬಿ.ಎಂ.ರಾಮು, ಕಾಡನಹಳ್ಳಿ ಸ್ವಾಮಿಗೌಡ, ಪಾಲಿಕೆ ಉಪಆಯುಕ್ತ ಜಿ.ಎಸ್.ಸೋಮಶೇಖರ್ ಸಂಘದ ಪದಾಧಿಕಾರಿಗಳು ಇದ್ದರು.

ಶ್ರೀ ಗುರು ರಾಘವೇಂದ್ರ ಸ್ವಾಮಿಗಳ 352ನೇ ಆರಾಧನಾ ಮಹೋತ್ಸವದ ಪ್ರಯುಕ್ತ ತುಳಸಿ ಗಿಡ ವಿತರಣೆ



ಮೈಸೂರು, ಆ.31–ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಹಾಗೂ ಶ್ರೀ ಕೃಷ್ಣ ಮಿತ್ರ ಮಂಡಳಿ ವತಿಯಿಂದ ಶ್ರೀ ಗುರು ರಾಘವೇಂದ್ರ ಸ್ವಾಮಿಗಳ 352ನೇ ಆರಾಧನಾ ಮಹೋತ್ಸವದ ಪ್ರಯುಕ್ತ ಭಕ್ತಾದಿಗಳಿಗೆ ತುಳಸಿ ಗಿಡ ವಿತರಣೆ ಕಾರ್ಯಕ್ರಮವನ್ನು ಸರಸ್ವತಿಪುರಂನಲ್ಲಿರುವ ಶ್ರೀ ಕೃಷ್ಣಧಾಮದಲ್ಲಿ ಸೆ.1ರಂದು ಬೆಳಗ್ಗೆ 10.30ಕ್ಕೆ ಆಯೋಜಿಸಲಾಗಿದೆ ಎಂದು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಪ್ರಧಾನ ಕಾರ್ಯದರ್ಶಿ ವಿಕ್ರಮ ಅಯ್ಯಂಗಾರ್ ತಿಳಿಸಿದ್ದಾರೆ

ಶ್ರೀ ವಿಶ್ವ ಪ್ರಸನ್ನತೀರ್ಥ ಶ್ರೀಪಾದಂಗಳವರು ಸಾನ್ನಿಧ್ಯ ವಹಿಸುವರು. ಮುಖ್ಯ ಅತಿಥಿಗಳಾಗಿ ಶಾಸಕ ಟಿ.ಎಸ್. ಶ್ರೀವತ್ಸ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಹಿರಿಯ ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ, ಕೃಷ್ಣ ಮಿತ್ರ ಮಂಡಳಿ ಅಧ್ಯಕ್ಷ ರಮೇಶ್, ಸುಬ್ರಮಣ್ಯ ತಂತ್ರಿ, ರವಿಶಾಸ್ತ್ರಿ, ಎಂ.ಕೆ.ಪುರಾಣಿಕ್, ಕಾಂಗ್ರೆಸ್ ಮುಖಂಡ ಎನ್.ಎಂ.ನವೀನ್‌ಕುಮಾರ್ ಇನ್ನಿತರರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಸೆ.3ರಂದು ರಕ್ಷಾ ಬಂಧನದ ಪಾವನ ಸಂಭ್ರಮಾಚರಣೆ

ಮೈಸೂರು,ಆ.31–ನಗರದ ಪ್ರಜಾಪತಿ ಬ್ರಹ್ಮಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ವತಿಯಿಂದ ಕೆಆರ್‌ಎಸ್ ರಸ್ತೆಯಲ್ಲಿರುವ ಹೊಸಹಳ್ಳಿ ಅಂಚೆ, ಮೊಗರಹಳ್ಳಿಯಲ್ಲಿ ಸೆ.3ರಂದು ಭಾನುವಾರ ಬೆಳಗ್ಗೆ 11 ಗಂಟೆಗೆ ರಕ್ಷಾ ಬಂಧನ ಪಾವನ ಪರ್ವದ ಸಂಭ್ರಮಾಚರಣೆಯನ್ನು ಹಮ್ಮಿಕೊಳ್ಳಲಾಗಿದೆ. ಮುಖ್ಯ ಅತಿಥಿಗಳಾಗಿ ಹೊಸಹಳ್ಳಿ ಗ್ರಾ.ಪಂ.ಅಧ್ಯಕ್ಷ ಚೆಲುವರಾಜು, ನಾಗನಹಳ್ಳಿ ಗ್ರಾ.ಪಂ.ಅಧ್ಯಕ್ಷೆ ಸಿ.ರಶ್ಮಿ, ಕೊಡಗಹಳ್ಳಿ ಸರ್ವಿಸ್ ಸ್ಟೇಷನ್ ಮಾಲೀಕ ಕೆ.ಎನ್.ಮನೋಜ್‌ಕುಮಾರ್, ಜಯದೇವ ಇನ್ಸ್‌ಸ್ಟಿಟ್ಯೂಟ್ ಆಫ್ ಕಾರ್ಡಿಯಾಕ್ ಸೈನ್ಸಸ್ ನರ್ಸಿಂಗ್ ಸೂಪರಿಂಟೆಂಡೆಂಟ್ ಹರೀಶ್‌ಕುಮಾರ್, ವಿಟಿಎಲ್ ಕಾರ್ಮಿಕರ ಗಣಪತಿ ದೇವಸ್ಥಾನದ ಕಾರ್ಯದರ್ಶಿ ಬಿ.ರಾಮಲಿಂಗಯ್ಯ, ನಾಗನಹಳ್ಳಿ ಗ್ರಾ.ಪಂ. ಉಪಾಧ್ಯಕ್ಷ ಮೋಹನ್‌ಕುಮಾರ್, ಶ್ಯಾದನಹಳ್ಳಿ ಗ್ರಾ.ಪಂ.ಸದಸ್ಯ ಟಿ.ನಾರಾಯಣ್ ಹಾಗೂ ಬೆಳವತ್ತ ಗ್ರಾ.ಪಂ.ಸದಸ್ಯೆ ಸರಿತಾ ಭಾಗವಹಿಸಲಿದ್ದಾರೆ. ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಬ್ರಹ್ಮಾಕುಮಾರಿ ರಾಜಯೋಗಿನಿ ಲಕ್ಷ್ಮೀಜಿ ವಹಿಸಲಿದ್ದಾರೆ ಎಂದು ಈ ವಿವಿ ಮೊಗರಹಳ್ಳಿ ಸೇವಾ ಕೇಂದ್ರದ ಸಂಚಾಲಕಿ ಬಿ.ಕೆ. ಜಯಶ್ರೀ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊ. 8660570345 ಸಂಪರ್ಕಿಸಬಹುದು.



ಮೈಸೂರಿನ ವಿಜಯನಗರದಲ್ಲಿರುವ ಶ್ರೀ ಯೋಗನರಸಿಂಹಸ್ವಾಮಿ ದೇವಾಲಯದಲ್ಲಿ ಸಾಮೂಹಿಕ ಯಜುರ್ ಉಪಾಕರ್ಮ ಆಯೋಜಿಸಲಾಗಿತ್ತು. ದೇವಾಲಯದ ಆಡಳಿತಾಧಿಕಾರಿ ಎನ್.ಶ್ರೀನಿವಾಸನ್ ನೇತೃತ್ವದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ತ್ರಿಮತಸ್ಥ ಬ್ರಾಹ್ಮಣ ಸಮುದಾಯದ ಹಲವರು ಭಾಗಿಯಾಗಿದ್ದರು.

ಜೆಎಸ್‌ಎಸ್ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದವರಿಗೆ ಅಭಿನಂದನೆ



ಮೈಸೂರು, ಆ.31– ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಜಗದ್ಗುರು ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಶ್ರೀಗಳ 108ನೇ ಜಯಂತಿ ಮಹೋತ್ಸವದ ಅಂಗವಾಗಿ ಜೆಎಸ್‌ಎಸ್ ಮಹಾವಿದ್ಯಾಪೀಠದ ವಿವಿಧ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ 2022–23ನೇ ಸಾಲಿನಲ್ಲಿ ನಿವೃತ್ತರಾದವರಿಗೆ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸನ್ಮಾನಿಸಿ, ಆಶೀರ್ವದಿಸಿದರು.


ತಮ್ಮ ನೌಕರಿಯ ದಿನಗಳ ಅನುಭವಗಳನ್ನು ಹಂಚಿಕೊಂಡ ಬಿ.ಎಸ್.ಬಸವಣ್ಣ, ಮರಿಸ್ವಾಮಪ್ಪ ಮತ್ತು ದಯಾನಂದಸ್ವಾಮಿ, ಬಡತನದಲ್ಲಿ ಬೆಳೆದು ಬಂದ ನಮಗೆ ರಾಜೇಂದ್ರ ಶ್ರೀಗಳು ಅನ್ನ, ಆಶ್ರಯ, ಅರಿವು ನೀಡಿದರು. ದೇಶಿಕೇಂದ್ರ ಶ್ರೀಗಳು ಜೀವನ ಸಾಗಿಸಲು ಉದ್ಯೋಗವನ್ನು ನೀಡಿದರು. ಸೇವೆ ಸಲ್ಲಿಸಿ ನಿವೃತ್ತರಾದವರನ್ನು ಗೌರವಿಸುವುದು ಒಂದು ಮಾದರಿ ಕಾರ್ಯವಾಗಿದೆ. ಪೂಜ್ಯರ ಮಾತೃವಾತ್ಸಲ್ಯ ನಮ್ಮೆಲ್ಲರ ಭಾವತುಂಬಿ ಬರುವಂತೆ ಮಾಡಿದೆ. ಜೆಎಸ್‌ಎಸ್ ಸಂಸ್ಥೆಯಲ್ಲಿ ಒಂದು ಕುಟುಂಬದ ಸದಸ್ಯರ ರೀತಿಯಲ್ಲಿ ಎಲ್ಲ ನೌಕರರನ್ನು ಪರಿಗಣಿಸಲಾಗುತ್ತದೆ. ಶ್ರೀಮಠದ ಋಣ ತೀರಿಸುವುದು ಅಸಾಧ್ಯ ಎಂದರು.

ಕಾರ್ಯಕ್ರಮದಲ್ಲಿ ಮಹಾವಿದ್ಯಾಪೀಠದ ಸಂಸ್ಥೆಗಳಲ್ಲಿ ಸೇವೆಸಲ್ಲಿಸಿ 2022–ಸೆಪ್ಟೆಂಬರ್‌ನಿಂದ 2023–ಆಗಸ್ಟ್ ಅಂತ್ಯದವರೆಗೆ ನಿವೃತ್ತರಾದವರು ಹಾಗೂ ಸೇವೆಯಿಂದ ಬಿಡುಗಡೆಗೊಂಡವರು ಮತ್ತು ಸೇವೆ ಸಲ್ಲಿಸುತ್ತಿರುವಾಗಲೇ ಅಗಲಿದವರ ಕುಟುಂಬದವರಿಗೆ ಸಾಂತ್ವನ–ಹೀಗೆ ಒಟ್ಟು 223 ನೌಕರರು ಹಾಗೂ ಅವರ ಕುಟುಂಬ ವರ್ಗದವರನ್ನು ಪೂಜ್ಯರು ಆಶೀರ್ವದಿಸಿ ಸನ್ಮಾನಿಸಿದರು. ನಿವೃತ್ತರಾದವರ ನೌಕರರ ಪರಿಚಯದ ತೇರನೆಳೆದವರು ಪುಸ್ತಕವನ್ನು ಇದೇ ವೇಳೆ ಬಿಡುಗಡೆ ಮಾಡಲಾಯಿತು.

ನಿವೃತ್ತರ ಪರಿಚಯವನ್ನು ಲತಾ ಸುಬ್ಬಣ್ಣ, ಶೈಲಜ, ಶಿವಸ್ವಾಮಿ, ಡಾ.ಪ್ರಿಯದರ್ಶಿನಿ, ಡಾ.ಎಚ್.ಎಸ್.ಅಂಬಿಕಾ, ಡಾ.ಭೀಮರಾಜ್, ಡಾ.ಎನ್.ಮಹೇಶ್ವರಿ, ಡಾ.ಮೀನಾಕ್ಷಿ, ಡಾ.ಬಿ.ಎಸ್.ಸುದೀಪ್, ಆರ್.ಎಸ್.ಕುಮಾರ್, ಡಾ.ಪ್ರತಿಭಾ ನಡೆಸಿಕೊಟ್ಟರು.

ಪ್ರೊ.ಆರ್.ಮುರುಗೇಶಪ್ಪ ಸ್ವಾಗತಿಸಿದರು. ಆರ್.ಎಸ್.ಪೂರ್ಣಾನಂದ ಪ್ರತಿಭಾ ಪುರಸ್ಕೃತರ ಹಾಗೂ ಬಹುಮಾನಿತರ ಪಟ್ಟಿಯನ್ನು ವಾಚಿಸಿದರು. ಆರ್.ಕೆಂಪರಾಜು ವಿದ್ಯಾರ್ಥಿವೇತನ ಪಡೆದ ವಿದ್ಯಾರ್ಥಿಗಳ ಹೆಸರನ್ನು ಪ್ರಕಟಿಸಿದರು. ಸಹಾಯಕ ಪ್ರಾಧ್ಯಾಪಕ ಡಾ.ಪಿ.ಶಿವಾನಂದ ಭಾರತಿ ವಂದಿಸಿದರು. ಡಾ.ಎಸ್.ನಟರಾಜು ನಿರೂಪಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

1.9.2023 ಶುಕ್ರವಾರ, ಮಳೆ ನಕ್ಷತ್ರ: ಪುಬ್ಬ 31.08.2023ರಿಂದ 13.09.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ,
ಶುಕ್ಲ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಪೂರ್ವಾಭಾದ್ರ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಜೆಎಸ್‌ಎಸ್ ಕಾಲೇಜ್ ಆಫ್ ಫಿಸಿಯೋಥೆರಪಿ:** ಫಿಸಿಯೋಥೆರಪಿ–ಸಂಭಾವ್ಯ ಅನಿಯಮಿತ ಕುರಿತು ವಿಚಾರ ಸಂಕಿರಣ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ: ಜೆಎಸ್‌ಎಸ್ ಮಹಾವಿದ್ಯಾಪೀಠ ಸಾಮಾನ್ಯ ಅಭಿವೃದ್ಧಿ ವಿಭಾಗದ ನಿರ್ದೇಶಕ ಕೆ.ಎಲ್.ರೇವಣ್ಣಸ್ವಾಮಿ, ಮುಖ್ಯ ಅತಿಥಿಗಳು: ಕರ್ನಾಟಕ ರಾಜ್ಯ ಫಿಸಿಯೋಥೆರಪಿ ಫೆಡರೇಷನ್ ಕಾರ್ಯನಿರ್ವಾಹಕ ಅಧ್ಯಕ್ಷ ಪ್ರೊ.ಯು.ಟಿ. ಇಫ್ತಿಕಾರ್ ಆಲಿ, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಕುಲಸಚಿವ ಡಾ.ಬಿ. ಮಂಜುನಾಥ, ಸ್ಥಳ: ಶ್ರೀ ರಾಜೇಂದ್ರ ಶತಮಾನೋತ್ಸವ ಭವನ, ಬೆಳಗ್ಗೆ 10ಕ್ಕೆ

■ **ಮೈಸೆಮ್ ಇಂಜಿನಿಯರಿಂಗ್ ಕಾಲೇಜು:** ಟೆಕ್ನಾಲಜಿಕಲ್ ಇನ್ನೋವೇಷನ್ ಪಾರ್ಕ್ ಉದ್ಘಾಟನಾ ಸಮಾರಂಭ, ಮುಖ್ಯ ಅತಿಥಿಗಳು: ಶಾಸಕ ದರ್ಶನ್ ಧ್ರುವನಾರಾಯಣ್, ಗೌರವ ಅತಿಥಿಗಳು: ಬಂಯೋಪೆಸ್ಟ್ ಮ್ಯಾನೇಜ್‌ಮೆಂಟ್‌ನ ವ್ಯವಸ್ಥಾಪಕ ನಿರ್ದೇಶಕ ಹೆಚ್.ಕೆ.ಶ್ರೀಕಂಠ, ಅಧ್ಯಕ್ಷತೆ: ಜೆವಿಎಸ್ ಎಸ್‌ಎಂ ಅಧ್ಯಕ್ಷ ಶಿವಪ್ಪ, ಸ್ಥಳ: ಮೈಸೆಮ್ ಕಾಲೇಜು ಆವರಣ, ಬೆಳಗ್ಗೆ 10ಕ್ಕೆ.

■ **ತೋಟಗಾರಿಕೆ ಇಲಾಖೆ, ತೋಟಗಾರಿಕೆ ಮಹಾವಿದ್ಯಾಲಯ, ಆಕಾಶವಾಣಿ :** ಹಣ್ಣು–ಹೊನ್ನು, ತೋಟಗಾರಿಕೆ ಬೆಳೆಗಳಲ್ಲಿ ಸಮಗ್ರ ಬೇಸಾಯ ಕ್ರಮದ ಬಾನುಲಿ ಸರಣಿಯ ಉದ್ಘಾಟನಾ ಸಮಾರಂಭ, ಪ್ರಾಸ್ತಾವಿಕ ನುಡಿ : ಆಕಾಶವಾಣಿ ಕಾರ್ಯಕ್ರಮ ನಿರ್ವಾಹಕ ಎನ್. ಕೇಶವಮೂರ್ತಿ, ಉದ್ಘಾಟನೆ: ತೋಟಗಾರಿಕೆ ನಿರ್ದೇಶಕ ಡಿ.ಎಸ್. ರಮೇಶ್, ಅಧ್ಯಕ್ಷತೆ : ತೋಟಗಾರಿಕೆ ಮಹಾವಿದ್ಯಾಲಯ ಡೀನ್ ಡಾ.ವಿಷ್ಣುವರ್ಧನ್, ಬಿಡುಗಡೆ : ಬಾಗಲಕೋಟೆ ತೋಟಗಾರಿಕೆ ವಿವಿ ಉಪಕುಲಪತಿ ಡಾ.ಎನ್.ಕೆ.ಹೆಗ್ಡೆ, ಮುಖ್ಯ ಅತಿಥಿಗಳು : ತಾಳೆಬೆಳೆ ಹಾಗೂ ಕ್ಷೇತ್ರ ಮತ್ತು ನರ್ಸರಿ ಅಪರ ನಿರ್ದೇಶಕ ಡಾ.ಪಿ.ಎಂ.ಸೊಬರದ್, ಆಕಾಶವಾಣಿ ಸಹಾಯಕ ನಿರ್ದೇಶಕ ಎಸ್.ಎಸ್.ಉಮೇಶ್, ಸ್ಥಳ: ಜಿಲ್ಲಾ ಪಂಚಾಯತ್ ಸಭಾಂಗಣ, ಬೆಳಗ್ಗೆ 10.30ಕ್ಕೆ

■ **ಮಹಾರಾಣಿ ಮಹಿಳಾ ಕಲಾ ಕಾಲೇಜು:** ಜನಪದ ಗೀತೆ–ಮೂಲ ಮಟ್ಟುಗಳ ಕಲಿಕೆ: ಒಂದು ದಿನದ ಕಾರ್ಯಾಗಾರ, ಉದ್ಘಾಟನೆ: ಜಾನಪದ ಹಾಡುಗಾರ್ತಿ ಶ್ರೀಮತಿ ಮುದ್ದಮ್ಮ, ಅಧ್ಯಕ್ಷತೆ: ಕಾಲೇಜು ಪ್ರಾಚಾರ್ಯ ಡಾ.ಬಿ.ವಿ.ವಸಂತಕುಮಾರ್, ಉಪಸ್ಥಿತರು: ಡಾ.ಎಚ್.ಎಂ.ಕಲಾಶ್ರೀ, ಡಾ.ಬಿ.ಪಿ.ಅಶ್ವಿನಿ, ಡಾ.ಎಂ.ಜಯಶಂಕರ, ಸ್ಥಳ: ಸ್ನಾತಕೋತ್ತರ ಸೆಮಿನಾರ್ ಹಾಲ್, ಬೆಳಗ್ಗೆ 11ಕ್ಕೆ

■ **ಮೈಸೂರು ವಿಶ್ವವಿದ್ಯಾನಿಲಯ, ಯುಜಿಸಿ–ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ:** 27ನೇ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಪುನಶ್ಚೇತನ ಶಿಬಿರ, ಮುಖ್ಯ ಅತಿಥಿಗಳು: ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ.ಶಾಲಿನಿ ಆರ್. ಅರಸ್, ಅಧ್ಯಕ್ಷತೆ: ಯುಜಿಸಿ ನಿರ್ದೇಶಕರಾದ ಪ್ರೊ.ಎಸ್.ಎಸ್.ಮಾಲಿನಿ, ಉಪಸ್ಥಿತರು: ಶಿಬಿರದ ಸಂಯೋಜಕ ಪ್ರೊ. ಎಂ.ಚಂದ್ರಶೇಖರ್, ಯುಜಿಸಿ–ಹೆಚ್‌ಆರ್‌ಡಿಸಿ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11.30ಕ್ಕೆ.

■ **ನಂಜನಗೂಡು ಶ್ರೀ ರಾಘವೇಂದ್ರಸ್ವಾಮಿ ಮಠ, ನಾಡಪ್ರಭು ಕೆಂಪೇಗೌಡರ ಯುವ ಬಳಗ :** ಶ್ರೀ ರಾಘವೇಂದ್ರ ಗುರುಸಾರ್ವಭೌಮರ 352ನೇ ಆರಾಧನಾ ಮಹೋತ್ಸವ, ಕಲಾತಂಡಗಳು, ವೀರಗಾಸೆ, ವಾದ್ಯವೃಂದ, ಡೊಳ್ಳು ಕುಣಿತ ಮತ್ತು ವಿದ್ಯುತ್ ದೀಪಗಳೊಂದಿಗೆ ರಾಯರ ರಥೋತ್ಸವ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿ ಮಠ, ಕಿಡಗಣ್ಣಮ್ಮ ಬಡಾವಣೆ, ಕುಂಬಾರಕೊಪ್ಪಲು, ಮಧ್ಯಾಹ್ನ 1ಕ್ಕೆ.

■ **ಗಾನಭಾರತಿ:** ಮಣಿಕೃಷ್ಣಸ್ವಾಮಿ ಅಕಾಡೆಮಿಯವರಿಂದ ಧರ್ಮಸ್ಥಳ ಮತ್ತು ಶ್ರೀ ಮಂಜುನಾಥನ ಕುರಿತ ರಚನೆಗಳ ಗಾಯನ ಕಛೇರಿ, ಕು. ಶ್ರೇಯ ಕೊಳತ್ತಾಯ, ಕು. ಅದಿತಿ ಪ್ರಹ್ಲಾದ್, ಕು. ಸ್ಮೃತಿ ಭಾಸ್ಕರ್, ಉಷಾ ರಾಮಕೃಷ್ಣ, ಅಶ್ವಿಜ ಉಡುಪಿ, ಸುನಾದ ಅವರಿಂದ ಗಾಯನ, ವಿದುಷಿ ಶ್ರುತಿ–ಪಿಟೀಲು, ನಂದನ್ ಕಶ್ಯಪ್–ಮೃದಂಗ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ, ಲಕ್ವ, ಪ್ಯಾರಲಿಸಿಸ್ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 6.30ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಬಣ್ಣದ ಬಾನಾಡಿಗಳು, ರಚನೆ– ಡಾ.ಎಸ್.ವಿ.ನರಸಿಂಹನ್, ಪ್ರಸ್ತುತಿ–ಜಿ.ಶಾಂತಕುಮಾರ್, 6.40 ಪದಸಂಸ್ಕೃತಿ–ಡಾ.ಟಿ.ವಿ.ಸತ್ಯನಾರಾಯಣ, 7.15 ಭಾವಗೀತೆಗಳು, 9.05 ವಸುಧೈವ ಕುಟುಂಬಕಂ–ಭಾರತ ಜಿ20 ಶೃಂಗಸಭೆ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 9.10 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 10.00 ಎಂ.ಎಸ್.ಸುಬ್ಬಲಕ್ಷ್ಮಿ–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 12.45 ಕಾದಂಬರಿ ವಿಹಾರ–ಡಾ.ಎಸ್.ಎಲ್.ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ–ಉಮೇಶ್, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ–ಜಿ.ಕೆ.ರವೀಂದ್ರಕುಮಾರ್, 3.00 ವಿ. ಲಲಿತಾ–ವೀಣಾವಾದನ, 4.00 ಮಹಿಳಾರಂಗ–ಜೀವನ್ಮುಖಿ, 4.30 ವೃತ್ತಿ ಮಾರ್ಗದರ್ಶನ–ಮೈಸೂರಿನ ಸಿ.ಎಸ್.ಐ.ಆರ್–ಸಿ.ಎಫ್.ಟಿ.ಆರ್.ಐ.ನಲ್ಲಿರುವ ಆಹಾರ ಸಂಸ್ಕರಣೆ ಮತ್ತು ತಂತ್ರಜ್ಞಾನದ ಕೋರ್ಸ್‌ಗಳು ಮತ್ತು ವೃತ್ತಿಪರ ಅವಕಾಶಗಳು ಕುರಿತು ಅರುಣ್‌ಕುಮಾರ್ ಅವರೊಂದಿಗೆ ಮಾತುಕತೆಯಲ್ಲಿ ಭಾಗವಹಿಸುತ್ತಾರೆ ಬೇದ್ರ ಮಂಜುನಾಥ್, 6.50 ಕೃಷಿರಂಗ, 8.00 ವಿಜ್ಞಾನ ಭಾರತಿ–2023ಕ್ಕೆ ಹೊಸ ತಂತ್ರಜ್ಞಾನ ಪ್ರವೃತ್ತಿಗಳು ಕುರಿತು ಮಾತನಾಡುತ್ತಾರೆ–ಪಿ.ಚಂದ್ರಶೇಖರ್, ನಿಸರ್ಗದಲ್ಲಿ ಪರಾಗ ಸ್ಪರ್ಶಕಗಳ ಪ್ರಾಮುಖ್ಯತೆ ಕುರಿತು ಮಾತನಾಡುತ್ತಾರೆ ಡಾ.ಎನ್.ನಂದಿನಿ, 9.30 ನಿಲಯದ ಕಲಾವಿದರಿಂದ ವಾದ್ಯವೃಂದ, 10.00 ನಾದಾಂಜಲಿ–ಸಂಯೋಜನೆ–ಮೈಸೂರು ಎಂ. ನಾಗರಾಜ್, 10.30 ಸವಿನೆನಪು

■ **ಶ್ರೀ ಗುರುರಾಘವೇಂದ್ರ ಆರಾಧನಾ ಸಮಿತಿ, ಸೋಮನಾಥಪುರ :** ಶ್ರೀ ಗುರುರಾಘವೇಂದ್ರ ಸ್ವಾಮಿಗಳವರ 352ನೇ ಆರಾಧನಾ ಮಹೋತ್ಸವ, ಸಂಜೆ 7ರಿಂದ ಡಾ.ಪಂಡಿತ್ ಪ್ರಸನ್ನ ಮಾಧವ ಗುಡಿ ಅವರಿಂದ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ವೀರಭದ್ರಯ್ಯ ಹಿರೇಮಠ–ಹಾರ್ಮೋನಿಯಂ, ಭೀಮಾಶಂಕರ್ ಬಿದನೂರು–ತಬಲಾ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿ ದೇವಸ್ಥಾನ, ಸೋಮನಾಥನಗರ.

■ **ಶ್ರೀ ವೀರಭದ್ರೇಶ್ವರಸ್ವಾಮಿ ಹಾಗೂ ಶ್ರೀಚಾಮರಾಜೇಶ್ವರಸ್ವಾಮಿ ದೇವಸ್ಥಾನ:** ಶ್ರೀ ವೀರಭದ್ರೇಶ್ವರಸ್ವಾಮಿಯ ಜನ್ಮೋತ್ಸವ, ಮಹಾ ರಥೋತ್ಸವ ಹಾಗೂ ಶ್ರಾವಣ ಮಾಸದಲ್ಲಿ ನಡೆಯುವ ಪೂಜಾ ಕಾರ್ಯಕ್ರಮ, ಸ್ಥಳ: ದೇವಸ್ಥಾನ ಆವರಣ, ಡಿ. ಬನುಮಯ್ಯ ರಸ್ತೆ, ಕೆಆರ್ ಮೊಹಲ್ಲಾ, ಬೆಳಗ್ಗೆ

■ **ಶ್ರೀ ಮಹಾ ಗಣಪತಿ ನವಗ್ರಹ ದೇವಸ್ಥಾನದ ಅಭಿವೃದ್ಧಿ ಸಮಿತಿ :** 33ನೇ ವಾರ್ಷಿಕೋತ್ಸವ, ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನೆ, ಮ. 12ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಹುಡ್ಕೋ 1ನೇ ಹಂತ, ಬನ್ನಿಮಂಟಪ.

■ **ಶ್ರೀ ಸುತ್ತೂರು ಮಠ (ಮೈಸೂರು), ಚಾಮುಂಡಿಬೆಟ್ಟದ ತಪ್ಪಲು:** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಜೆಎಸ್‌ಎಸ್ ಮಹಾ ವಿದ್ಯಾಪೀಠ, ಪ್ರಕಟಣ ವಿಭಾಗದ ನಿರ್ದೇಶಕ ಪ್ರೊ.ಮೊರಬದ ಮಲ್ಲಿಕಾರ್ಜುನ ಅವರಿಂದ ಪ್ರವಚನ, ವಾಚನ–ಕಾರ್ಯಪಾಲಕ ಅಭಿಯಂತರರಾದ ವಿದ್ವಾನ್ ಕೃ.ರಾಮಚಂದ್ರ, ಸ್ಥಳ: ಮಠದ ಆವರಣ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6.30ಕ್ಕೆ. ಸಾಮೂಹಿಕ ಪ್ರಾರ್ಥನೆ: ಸಂಜೆ 6 ಗಂಟೆಗೆ.

■ **ಶ್ರೀರಾಘವೇಂದ್ರಸ್ವಾಮಿ ಸೇವಾ ಸಮಿತಿ (ಶ್ರೀ ರಾಘವೇಂದ್ರಸ್ವಾಮಿ ಮಠ) :** ಶ್ರೀ ರಾಘವೇಂದ್ರತೀರ್ಥ ಗುರುಸಾರ್ವಭೌಮರ 352ನೇ ಆರಾಧನಾ ಮಹೋತ್ಸವ, ಬೆಳಗ್ಗೆ 5.30ಕ್ಕೆ ಸುಪ್ರಭಾತ, 7 ರಿಂದ ಮಹಾ ಪಂಚಾಮೃತ ಅಭಿಷೇಕ, ಬೆಳಗ್ಗೆ 8ರಿಂದ ಕನಕಾಭಿಷೇಕ, ಸರ್ವಸೇವೆ, ಮ. 12ಕ್ಕೆ ಮಹಾಮಂಗಳಾರತಿ, ಮ. 12.30 ರಿಂದ ಪ್ರಸಾದ ವಿನಿಯೋಗ, ಸಂಜೆ 7ಕ್ಕೆ ಸ್ವಸ್ತಿವಾಚನ, ಶ್ರೇಯಃಪ್ರಾರ್ಥನೆ, ಮಹಾಮಂಗಳಾರತಿ, ಸಂಜೆ 5 ರಿಂದ ಶ್ರೀ ಸತ್ಯಧ್ಯಾನ ಭಜನಾ ಮಂಡಳಿ ಅವರಿಂದ ಭಜನೆ, ಸಂಜೆ 6.30 ರಿಂದ ವಿದ್ವಾನ್ ವಿವೇಕ್ ಮೂಲಿಕುಲಮ್ ಅವರಿಂದ ಗಾಯನ, ವಿದ್ವಾನ್ ವೈಭವ್ ರಮಣಿ–ವಯೋಲಿನ್, ವಿದ್ವಾನ್ ಎ.ರಾಧೇಶ್ – ಮೃದಂಗ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿ ಮಠ, ಜಯಲಕ್ಷ್ಮಿಪುರಂ.

■ **ನಂಜನಗೂಡು ಶ್ರೀರಾಘವೇಂದ್ರಸ್ವಾಮಿಗಳವರ ಮಠ :** ಶ್ರೀ ರಾಘವೇಂದ್ರತೀರ್ಥ ಗುರುಸಾರ್ವಭೌಮರ 352ನೇ ಆರಾಧನಾ ಮಹೋತ್ಸವ, ಬೆಳಗ್ಗೆ 7ಕ್ಕೆ ಉತ್ಸವರಾಯರಿಗೆ ಪಾದಪೂಜೆ, ಪಂಚಾಮೃತ, ಮಧ್ಯಾಹ್ನ 12ಕ್ಕೆ ಹಸ್ತೋದಕ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 5ಕ್ಕೆ ಉಪನ್ಯಾಸ, 7ಕ್ಕೆ ರಥೋತ್ಸವ, ಸ್ವಸ್ತಿವಾಚನ, ಮಹಾಮಂಗಳಾರತಿ, ಸಂಜೆ 6 ರಿಂದ ಕು. ಶ್ರೀ ಧನ್ಯ ಗುರುರಾಜ್ ಅವರಿಂದ ದೇವರನಾಮ, ಸಂಜೆ 8 ರಿಂದ ಶ್ರೀಮತಿ ದೀಪಿಕಾ ಪಾಂಡುರಂಗಿ ಅವರಿಂದ ದಾಸವಾಣಿ, ಸ್ಥಳ: ಶ್ರೀರಾಘವೇಂದ್ರಸ್ವಾಮಿಗಳವರ ಮಠ, ನಾರಾಯಣಶಾಸ್ತ್ರಿ ರಸ್ತೆ.

■ **ಸಂಚಲನ ಮೈಸೂರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ:** ಯುವ ರಂಗ ತರಬೇತಿ ಶಿಬಿರ ಉದ್ಘಾಟನಾ ಸಮಾರಂಭ, ಉಪಸ್ಥಿತರು: ಹಿರಿಯ ರಂಗ ನಿರ್ದೇಶಕ ವೆಂಕಟರಮಣ ಐತಾಳ, ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪುರಸ್ಕೃತ ಪ್ರವೀಣ್ ಕೃಪಾಕರ್, ಯುವರಂಗ ನಿರ್ದೇಶಕ ತ್ಯಾಗರಾಜು ದೇವರಹಳ್ಳಿ, ಪ್ರಾಸ್ತಾವಿಕ ನುಡಿ: ಶಿಬಿರದ ನಿರ್ದೇಶಕ ದೀಪಕ್ ಮೈಸೂರು, ಸ್ಥಳ: ಸಂಚಲನ ರಂಗ ಮನೆ, ಸಂಜೆ 6ಕ್ಕೆ.

ಇಂದಿನಿಂದ ಮಂಗಳೂರಿನಲ್ಲಿ ದಕ್ಷಿಣ ಭಾರತದ ಮೂಳೆ ಶಸ್ತ್ರಚಿಕಿತ್ಸಕರ ವಾರ್ಷಿಕ ಸಮ್ಮೇಳನ

ಓಯಸೀಸ್ ಅಧ್ಯಕ್ಷರಾಗಿ ಮೈಸೂರಿನ ಡಾ.ಎನ್.ನಿತ್ಯಾನಂದರಾವ್ ಇಂದು ಅಧಿಕಾರ ಸ್ವೀಕಾರ

ಮೈಸೂರು: ದಕ್ಷಿಣ ಭಾರತದ ಮೂಳೆ ಶಸ್ತ್ರಚಿಕಿತ್ಸಕರ 22ನೇ ವಾರ್ಷಿಕ ಸಮ್ಮೇಳನ ಓಯಸೀಸ್ (OASIS) ಮಂಗಳೂರಿನ ಇಂಡಿಯಾನಾ ಕನ್ವೆನ್ಷನ್ ಹಾಲ್‌ನಲ್ಲಿ ಸೆಪ್ಟೆಂಬರ್ 1ರಿಂದ 3ನೇ ತಾರೀಖಿನವರೆಗೆ ನಡೆಯಲಿದೆ. ಸೆ.1ರಂದು ನಡೆಯುವ ಉದ್ಘಾಟನಾ ಸಮಾರಂಭದಲ್ಲಿ ಡಾ.ಎನ್. ನಿತ್ಯಾನಂದರಾವ್ ಅವರು ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಈ ಸಮಾವೇಶ ಒಂದು ವರ್ಷ ಕಾಲ ನಡೆಯಲಿದೆ.

ನಿಟ್ಟೆ ವಿಶ್ವವಿದ್ಯಾನಿಲಯದ ಪ್ರೊ.ಎಂ. ಶಾಂತಾರಾಮ ಶೆಟ್ಟಿ ಮುಖ್ಯ ಅತಿಥಿಗಳಾಗಿ, ಓಯಸೀಸ್ ಅಧ್ಯಕ್ಷ ಡಾ.ಶ್ರೀನಿವಾಸರೆಡ್ಡಿ, ಪ್ರಧಾನ ಕಾರ್ಯದರ್ಶಿ ಡಾ.ಅನೀನ್ ಕುಟ್ಟಿ ಗೌರವ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಐಒಎ ಅಧ್ಯಕ್ಷ ಡಾ.ರಾಮ್ ಚಂದಾ, ಐಒಎ ಪ್ರಧಾನ ಕಾರ್ಯದರ್ಶಿ ಡಾ. ನವೀನ್ ಠಕ್ಕರ್, ಪಶ್ಚಿಮ ವಲಯ ಐಪಿಎಸ್ ಐಜಿ ಚಂದ್ರಗುಪ್ತ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ಸಂಜೆ 5 ಗಂಟೆಗೆ ಉದ್ಘಾಟನಾ ಸಮಾರಂಭ ನಡೆಯಲಿದೆ. ಸೆಪ್ಟೆಂಬರ್ 1ರಂದು ನೇರ ಶಸ್ತ್ರಚಿಕಿತ್ಸೆಗಳು ಮತ್ತು ಸಿಎಂಇ ಏರ್ಪಡಿಸಲಾಗಿದೆ.

ಕರ್ನಾಟಕದ ಹಿರಿಯ ಶಸ್ತ್ರಚಿಕಿತ್ಸಕ ಮೈಸೂರಿನ ಡಾ.ಬಿ.ಜಿ.ಸಾಗರ್ ಸೇರಿದಂತೆ ಆರು ರಾಜ್ಯಗಳ ತಲಾ ಒಬ್ಬ ಹಿರಿಯ ಶಸ್ತ್ರಚಿಕಿತ್ಸಕರನ್ನು ಸನ್ಮಾನಿಸಲಾಗುವುದು. ಮೈಸೂರಿನ ಡಾ.ಜೆ.ಎಸ್.ಹೆಗಡೆ ಅವರು ಸಂಘಕ್ಕೆ ಮತ್ತು ಮೂಳೆಚಿಕಿತ್ಸೆಗೆ ನೀಡಿದ ಕೊಡುಗೆಗಾಗಿ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುವುದು. ಡಾ.ಬಾಲಕೃಷ್ಣಗೌಡ, ಡಾ.ಶೇಷಗಿರಿ, ಡಾ.ವಿಜಯ್, ಡಾ.ಗಿರೀಶ್ ಚಂದ್ರ ಮತ್ತು ಡಾ.ಮಾರುತಿ ಸಿ.ವಿ. ಅವರು ಸಮಾರಂಭದಲ್ಲಿ ಶಸ್ತ್ರಚಿಕಿತ್ಸೆ ಸಂಬಂಧ ವಿಚಾರ ಮಂಡಿಸಲಿದ್ದಾರೆ.

ನಿತ್ಯಾನಂದರಾವ್ ಸಾಧನೆಯ ಹೆಜ್ಜೆಗಳು: ಮೈಸೂರು ಯಾದವಗಿರಿಯ ನಿವಾಸಿ ಡಾ.ಎನ್.ನಿತ್ಯಾನಂದರಾವ್ ಅವರು 1979–1984ರ ಅವಧಿಯಲ್ಲಿ ಕಸ್ತೂರಬಾ ಮೆಡಿಕಲ್ ಕಾಲೇಜಿನಲ್ಲಿ ವೈದ್ಯಕೀಯ ಶಿಕ್ಷಣದಲ್ಲಿ 10ನೇ ರ್‍ಯಾಂಕ್ ಪಡೆದಿದ್ದರು. 1985–88ರಲ್ಲಿ ಬೆಂಗಳೂರು ಮೆಡಿಕಲ್ ಕಾಲೇಜಿನಲ್ಲಿ ಆರ್ಥೋಪಿಡಿಕ್ಸ್‌ನಲ್ಲಿ ಎಂ.ಎಸ್. ಪದವಿ ಪಡೆದರು.

ಶಾಲಾ–ಕಾಲೇಜು ದಿನಗಳಲ್ಲಿ ಟೇಬಲ್ ಟೆನಿಸ್, ಟೆನಿಸ್ ಆಟಗಾರರಾಗಿ ಶಾಲಾ ದಿನಗಳಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದ್ದರು. 1989ರಿಂದ ವೈದ್ಯಕೀಯ ವೃತ್ತಿ ಆರಂಭಿಸಿದ ರಾವ್ ಅವರು, ಬಸಪ್ಪ ಮೆಮೋರಿಯಲ್ ಆಸ್ಪತ್ರೆಯಲ್ಲಿ ಆರ್ಥೋಪೇಡಿಕ್ಸ್ ವಿಭಾಗದ ಮುಖ್ಯಸ್ಥರಾಗಿ 2009ರವರೆಗೆ ಸೇವೆ ಸಲ್ಲಿಸಿದರು. 2009ರಿಂದ ವಿಕ್ರಮ್ ಜೀವ್ ಆಸ್ಪತ್ರೆಯಲ್ಲಿ ಆರ್ಥೋಪಿಡಿಕ್ಸ್ ವಿಭಾಗದ ಮುಖ್ಯಸ್ಥರಾದರು. ಮಂಗಳೂರಿನ ಕ್ಷೇಮದಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಆಗಿಯೂ ಸೇವೆ ಸಲ್ಲಿಸಿದ್ದಾರೆ.

ನಿತ್ಯಾನಂದರಾವ್ ಅವರು ವಿವಿಧ ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿಭಾಯಿಸುವುದರೊಂದಿಗೆ ಹತ್ತು ಹಲವು ಪ್ರಶಸ್ತಿಗಳಿಗೂ ಭಾಜರಾಗಿದ್ದಾರೆ.



ಡಾ.ಎನ್.ನಿತ್ಯಾನಂದ ರಾವ್

ಫೆಲೋಶಿಪ್‌ಗಳು

1998ರಲ್ಲಿ ಜರ್ಮನಿಯ ಪ್ರೊ. ಗೆಕ್ಲರ್ ಅವರೊಂದಿಗೆ ಸಿನ್‌ಡಫೆನ್‌ಜೆನ್‌ನಲ್ಲಿ ನಡೆದ ಮೊಣಕಾಲು ಮತ್ತು ಸೊಂಟ ಮರು ಜೋಡಣೆಗೆ ಸಂಬಂಧಿಸಿದಂತೆ ಇಂಡೋ ಜರ್ಮನ್ ಆರ್ಥೋಪಿಡಿಕ್ ಫೌಂಡೇಷನ್ ಫೆಲೋಶಿಪ್, 1999ರಲ್ಲಿ ಜರ್ಮನಿಯ ಸ್ಟುಟ್‌ಗರ್ಟ್‌ನಲ್ಲಿ ಅಡ್ವಾನ್ಸ್ ಟ್ರಾಮ್ ಕೇರ್‌ಗಾಗಿ ಫೆಲೋಶಿಪ್, 2002ರಲ್ಲಿ ಅಮೆರಿಕದ ಯುಟಾದ ಸಾಲ್ಟ್‌ಲೇಕ್ ಸಿಟಿಯ ಎಲ್‌ಡಿಎಸ್ ಆಸ್ಪತ್ರೆಯ ಟೋಟಲ್ ಜಾಯಿಂಟ್ ಸೆಂಟರ್‌ನಲ್ಲಿ ಜಾಯಿಂಟ್ ರಿಪ್ಲೇಸ್‌ಮೆಂಟ್‌ಗಾಗಿ ಸುಲ್ಜರ್ ಫೆಲೋಶಿಪ್, 2008ರಲ್ಲಿ ಸ್ವಿರ್ಜಲೆಂಡ್‌ನಲ್ಲಿ ಡಾವೋಸ್‌ನಲ್ಲಿ ಆಪರೇಟಿವ್ ಫ್ರಾಕ್ಚರ್ ಮ್ಯಾನೇಜ್‌ಮೆಂಟ್‌ನಲ್ಲಿ ಫೆಲೋಶಿಪ್, 2011ರಲ್ಲಿ ಆಸ್ಟ್ರಿಯಾದ ಗ್ರಾಜ್‌ನಲ್ಲಿ ಪೆಲ್ವಿಸ್ ಮತ್ತು ಅಸೆಟಾಬ್ಯುಲಮ್ ಟ್ರಾಮಾ ಕೋರ್ಸ್‌ಗಾಗಿ ಫೆಲೋಶಿಪ್, 2012ರಲ್ಲಿ ಅಮೆರಿಕದ ನ್ಯೂಯಾರ್ಕ್‌ನ ಎಚ್‌ಎಸ್‌ಎಸ್ ಆಸ್ಪತ್ರೆಯಲ್ಲಿ ಡಾ. ಡೇವಿಡ್ ಹೆಲ್ಪೆಟ್ ಜತೆ ಪೆಲ್ವಿಸ್ ಮತ್ತು ಅಸೆಟಾಬ್ಯುಲಮ್ಸ್‌ಗಾಗಿ ಫೆಲೋಶಿಪ್ ಪಡೆದಿದ್ದಾರೆ.

ಮಹಾ ರಕ್ತದಾನ ಅಭಿಯಾನದ ಯಶಸ್ಸಿನ ರೂವಾರಿಗಳಿಗೆ
ರೋಟರಿ ಸಂಸ್ಥೆ ವತಿಯಿಂದ ಅಭಿನಂದನೆ
ಸಮಾಜಮುಖಿ ಕಾರ್ಯಗಳು ಕೆಲವರಿಗಾದರೂ ಪ್ರೇರಣೆ ನೀಡುತ್ತವೆ: ಕೆಬಿಜಿ

ಮೈಸೂರು, ಆ.31(ಸಿಎನ್)– ಕೊಡುವುದರಲ್ಲಿ ಆತ್ಮ ಸಮಾಧಾನ, ಸಂತೋಷ ಅಡಗಿದೆ. ಅಂತಹ ಮಹತ್ತರ ಕೆಲಸವನ್ನು ರೋಟರಿ ಮೈಸೂರು ನಿರಂತರವಾಗಿ ಮಾಡಿಕೊಂಡು ಬಂದಿದೆ. ಇದು ಸಮಾಜಕ್ಕಾಗಿ ಸದಾ ತುಡಿಯುವ ಸಾಮಾಜಿಕ ಸಂಸ್ಥೆಯಾಗಿ ಮಾರ್ಪಟ್ಟಿರುವುದು ಶ್ಲಾಘನೀಯ ಎಂದು 'ಸ್ಟಾರ್ ಆಫ್ ಮೈಸೂರ್' ಹಾಗೂ 'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ (ಕೆಬಿಜಿ) ಅವರು ತಿಳಿಸಿದರು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ರೋಟರಿ ಕ್ಲಬ್ ಆಫ್ ಮೈಸೂರು ಸೌತ್ ಈಸ್ಟ್, ರೋಟರಿ ಮೈಸೂರು ಹಾಗೂ ವಿಜಯನಗರ ರೋಟರಿ ಕ್ಲಬ್ ಸಹಯೋಗದಲ್ಲಿ ಗುರುವಾರ ಆಯೋಜಿಸಲಾಗಿದ್ದ 'ಮಹಾ ರಕ್ತದಾನ ಅಭಿಯಾನ' ಯಶಸ್ವಿ ಮತ್ತು ಅಭಿನಂದನಾ ಕಾರ್ಯಕ್ರಮ ಉದ್ಘಾಟಿಸಿ, ಅವರು ಮಾತನಾಡಿದರು.

ರಕ್ತದಾನ ಮಾಡಿ ಪ್ರಮಾಣ ಪತ್ರ, ಸ್ಮರಣಿಕೆ ಪಡೆದ ರೊಟೇರಿಯನ್ಸ್‌ಗೆ ಅಭಿನಂದನೆಗಳು. ಕೊಡುವುದರಲ್ಲಿರುವ ಸುಖ ಬೇರೆ ಯಾವ ಕೆಲಸದಲ್ಲೂ ಸಿಗಲಾರದು. ಅತ್ಯಂತ ಸಮಾಧಾನ ಹಾಗೂ ಸಂತೋಷ ಹೊಂದಬೇಕಾದರೆ ಕೊಡುಗೈ ದಾನಿಯಾಗಿರಬೇಕು ಎಂದರು.

ಇಂದು ರೋಟರಿ ಸಂಸ್ಥೆಗಳು 953 ಯೂನಿಟ್ ರಕ್ತ ಸಂಗ್ರಹ ಮಾಡುವ ಮೂಲಕ ದಾಖಲೆ ಮಾಡಿವೆ. ಮೊದಲಿಗೆ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಯಾರು ಈ ಯೋಜನೆ ರೂಪಿಸಿದ್ದಾರೋ, ರಕ್ತದಾನ ಮಾಡಿದ್ದಾರೋ ಅವರು ನಿಜವಾದ ಹೀರೋಗಳು. ಇಂತಹ ಸಮಾಜಮುಖಿ ಕಾರ್ಯಗಳು ಕೆಲವರಿಗಾದರೂ ಪ್ರೇರಣೆ ನೀಡುತ್ತವೆ.

ನೇತಾಜಿ ಸುಭಾಷ್ ಚಂದ್ರ ಭೋಸ್ ಅವರು ಸದಾ ತಮ್ಮ ಸೈನಿಕರಿಗೆ ದೇಶ ಪ್ರೇಮವನ್ನು ಬೋಧಿಸುತ್ತಿದ್ದರು. ಸೈನಿಕರಿಗೆ ಅವರು ಹೇಳುತ್ತಿದ್ದದ್ದು, 'ನೀವು ನಮಗೆ ರಕ್ತ ಕೊಡಿ, ನಾನು ನಿಮಗೆ ಸ್ವಾತಂತ್ರ್ಯ ಕೊಡುತ್ತೇನೆ' ಎಂದು. ಆದರೆ ಈಗ ನಾವು ಹೇಳಬೇಕಿರುವುದು 'ನಾನು ರಕ್ತ ನೀಡುತ್ತೇನೆ, ಇದರಿಂದ ಹಲವರ ಜೀವ ಉಳಿಯುತ್ತದೆ' ಎಂದು. ಇದೂ ಸಾರ್ಥಕ ಕಾರ್ಯ ಎಂದು ಅವರು ಹೇಳಿದರು.

ಎಲ್ಲರೂ ವಿಶ್ವದ ಮಾನವೀಯತೆಯನ್ನು ಪ್ರೀತಿಸಬೇಕು. ವಸುದೈವ ಕುಟುಂಬಕಂ ರೀತಿ ನಾವೆಲ್ಲರೂ ಒಟ್ಟಾಗಿ ಬಾಳಬೇಕು. ನಮ್ಮ ಹೃದಯ ವೈಶಾಲ್ಯತೆ ಇಮ್ಮಡಿಗೊಳಿಸಿಕೊಳ್ಳಬೇಕು. ಪ್ರೀತಿಯಲ್ಲಿ ಎರಡು ರೀತಿ ಇರುತ್ತದೆ. ಮೊದಲನೆಯದಾಗಿ ತ್ಯಾಗ. ಎರಡನೆಯದು ಸೇವೆ. ಎಲ್ಲಿ ಸೇವೆ ಇರುತ್ತದೆಯೋ ಅಲ್ಲಿ ತ್ಯಾಗ ಇದ್ದೇ ಇರುತ್ತದೆ. ಇದಕ್ಕೆ ಉತ್ತಮ ಉದಾಹರಣೆ ಎಂದರೆ ತಾಯಿ. ತನ್ನ ಕುಟುಂಬದ ಸೇವೆ ಮಾಡುತ್ತಾ ಸದಾ ತ್ಯಾಗಮಯಿ ಆಗಿರುತ್ತಾಳೆ. ಇಂತಹ ಪ್ರೀತಿ ಎಂದಿಗೂ ಸಮಾಜದಲ್ಲಿ ಅಜರಾಮರವಾಗಿ ಉಳಿಯುತ್ತದೆ. ರಕ್ತದಾನ ಕೂಡ ಒಂದು ಸೇವಾಕಾರ್ಯವಾಗಿದ್ದು, ತಪ್ಪದೇ ನೀವೂ ರಕ್ತದಾನ ಮಾಡಿ, ಇತರರನ್ನು ಪ್ರೋತ್ಸಾಹಿಸಿ ಎಂದು ಕರೆ ನೀಡಿದರು.

ದಾನಿಗಳಿಗೆ ಅಭಿನಂದನೆ: ಮೂರು ದಿನಗಳ ಕಾಲ 19 ಸಂಸ್ಥೆಗಳು, 12 ವಿವಿಧ ಸ್ಥಳಗಳಲ್ಲಿ ನಡೆದ ರಕ್ತದಾನ ಶಿಬಿರಗಳಲ್ಲಿ ಬರೋಬ್ಬರಿ 953 ಯೂನಿಟ್ ರಕ್ತ ಸಂಗ್ರಹವಾಗಿದೆ. ಶಿಬಿರ ಯಶಸ್ವಿಯಾಗಲು ಸಹಕರಿಸಿದ ಎಲ್ಲಾ ಸಂಸ್ಥೆಯವರಿಗೆ ಸ್ಮರಣಿಕೆ, ಹಾಗೂ ಪ್ರಮಾಣ ಪತ್ರ ನೀಡಿ ಗೌರವಿಸಲಾಯಿತು.

ನೆರವು: ಇದೇ ವೇಳೆ ಇಂಜಿನಿಯರ್ ವಿದ್ಯಾರ್ಥಿನಿ ಶಿಲ್ಪಾಶ್ರೀಗೆ ರೋಟರಿ ಸಂಸ್ಥೆಯಿಂದ ಒಂದು ಲಕ್ಷದ ನೆರವಿನ ಚೆಕ್ ವಿತರಿಸಿ, ಪ್ರೋತ್ಸಾಹಿಸಲಾಯಿತು. ಕಾರ್ಯಕ್ರಮದಲ್ಲಿ ವಿಜಯನಗರ ರೋಟರಿ ಅಧ್ಯಕ್ಷ ಹರೀಶ್ ಹೆಚ್.ಎಂ, ಕಾರ್ಯದರ್ಶಿ ರಾಘವೇಂದ್ರ, ರೋಟರಿ ಮೈಸೂರು ಉಪಾಧ್ಯಕ್ಷೆ ರೂಪಾ, ಜಂಟಿ ಕಾರ್ಯದರ್ಶಿ ಅಶೋಕ್, ರೋಟರಿ ಮೈಸೂರು ಸೌತ್ ಈಸ್ಟ್ ಅಧ್ಯಕ್ಷ ಗಿರೀಶ್ ಎನ್.ಟಿ. ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ರೋಟರಿ ಕ್ಲಬ್ ಆಫ್ ಮೈಸೂರು ಸೌತ್ ಈಸ್ಟ್, ರೋಟರಿ ಮೈಸೂರು ಹಾಗೂ ವಿಜಯನಗರ ರೋಟರಿ ಕ್ಲಬ್ ಸಹಯೋಗದಲ್ಲಿ ಗುರುವಾರ ಆಯೋಜಿಸಲಾಗಿದ್ದ 'ಮಹಾ ರಕ್ತದಾನ ಅಭಿಯಾನ' ಯಶಸ್ವಿ ಮತ್ತು ಅಭಿನಂದನಾ ಕಾರ್ಯಕ್ರಮದಲ್ಲಿ 'ಸ್ಟಾರ್ ಆಫ್ ಮೈಸೂರ್' ಹಾಗೂ 'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಅವರು ರಕ್ತದಾನ ಯಶಸ್ಸಿನ ರೂವಾರಿಗಳನ್ನು ಸ್ಮರಣಿಕೆ ಹಾಗೂ ಪ್ರಮಾಣ ಪತ್ರ ನೀಡಿ ಅಭಿನಂದಿಸಿದರು. ಚಿತ್ರದಲ್ಲಿ ಎನ್‌ಪಿಎಸ್ ಇಂಟರ್‌ನ್ಯಾಷನಲ್ ಶಾಲೆಯ ಮುಖ್ಯೋಪಾಧ್ಯಾಯಿನಿ ಅಖಿಲ ದಿನೇಶ್, ಜ್ಯೋತ್ಸ್ನಾ ಇರಾನಿ, ರೋಟರಿ ಯೂತ್ ಸರ್ವಿಸ್ ಡೈರೆಕ್ಟರ್ ಸಮೀರ್ ಕಶ್ಯಪ್, ರೋಟರಿ ಸಂಸ್ಥೆ ಪದಾಧಿಕಾರಿಗಳನ್ನು ಕಾಣಬಹುದು.

ಮೈಸೂರು ಆನಂದ್ ಕಾಮಿಡಿ ಕಚಗುಳಿ...

ತನ್ನ ವಿಶಿಷ್ಟ ಮ್ಯಾನರಿಸಂನಿಂದ ಸಮಾರಂಭದಲ್ಲಿದ್ದ ಎಲ್ಲರನ್ನು ತಮ್ಮ ಕಂಗ್ಲಿಷ್ ಹಾಗೂ ಗ್ರಾಮೀಣ ಸೊಗಡಿನ ಭಾಷೆಯಲ್ಲಿ ಮಾತನಾಡುವ ಮೂಲಕ ಮೈಸೂರ್ ಆನಂದ್ ರಂಜಿಸಿದರು. 90ರ ದಶಕದ ಗೀತೆಗಳಿಗೂ ಈಗಿನ ಸಾಹಿತ್ಯಕ್ಕೂ ಇರುವ ವ್ಯತ್ಯಾಸದ ಪರಿಗೆ ನೆರೆದಿದ್ದವರಲ್ಲಿ ನಗೆಬುಗ್ಗೆ ಎದ್ದಿತು.

5 ವರ್ಷದಿಂದ ಟೆಂಡರ್ ಕರೆಯದೆ ಒಬ್ಬರಿಗೇ ಪಾಲಿಕೆ ವಾಹನ ದುರಸ್ತಿ ಕಾರ್ಯ; 15 ದಿನದಲ್ಲಿ ವರದಿ ನೀಡಿ

ಮೈಸೂರು ಮಹಾನಗರಪಾಲಿಕೆ ಆಯುಕ್ತರಿಗೆ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಸೂಚನೆ

ಮೈಸೂರು,ಆ.31(ಆರ್‌ಕೆ)–ವಾಹನಗಳ ವಾರ್ಷಿಕ ದುರಸ್ತಿಗೆ ಟೆಂಡರ್ ಕರೆಯದೇ ಕಳೆದ ಐದು ವರ್ಷಗಳಿಂದ ಒಬ್ಬ ವ್ಯಕ್ತಿಗೇ ನೀಡಿರುವುದರ ಬಗ್ಗೆ 15 ದಿನದಲ್ಲಿ ವರದಿ ನೀಡುವಂತೆ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಅವರು ಮೈಸೂರು ಮಹಾನಗರ ಪಾಲಿಕೆ ಆಯುಕ್ತರಿಗೆ ಸೂಚನೆ ನೀಡಿದ್ದಾರೆ.

ಬೆಂಗಳೂರಿನ ವಿಧಾನಸೌಧದಲ್ಲಿ ಇಂದು ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ಪಾಲಿಕೆಯಲ್ಲಿರುವ ವಾಹನಗಳ ದುರಸ್ತಿಗೆ ಟೆಂಡರ್ ಪ್ರಕ್ರಿಯೆ ನಡೆಸದೇ ಒಬ್ಬ ವ್ಯಕ್ತಿಯಿಂದ ದುರಸ್ತಿ ಮಾಡಿಸಿ, ಮನಸ್ಸೋ–ಇಚ್ಛೆ ಬಿಲ್ ಪಾವತಿ ಮಾಡಿ ಲೋಪವೆಸಗಿರುವುದು ನನ್ನ ಗಮನಕ್ಕೆ ಬಂದಿದೆ ಎಂದರು.

ನಿಯಮಾನುಸಾರ ಟೆಂಡರ್ ಮೂಲಕ ವಾಹನಗಳ ದುರಸ್ತಿ ಮಾಡಿಸಬೇಕೇ ಹೊರತು, ನಿಮಗೆ ಬೇಕಾದವರಿಂದ ಕೆಲಸ ಮಾಡಿಸಲು ನಿಮಗೆ ಯಾರು ಹೇಳಿದರು ಎಂದು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಸಚಿವರು, ಈ ಕುರಿತು 15 ದಿನದೊಳಗೆ ವರದಿ ನೀಡುವಂತೆ ತಾಕೀತು ಮಾಡಿದರು.

ಪ್ರಸ್ತಾವನೆ ಸಲ್ಲಿಸಿ: ನೀರಿನ ತೆರಿಗೆ ಬಾಕಿ ಪಾವತಿಸುವ ಸಲುವಾಗಿ ಒಂದು ಬಾರಿ ಪರಿಹಾರ (ಒನ್ ಟೈಂ ಸೆಟಲ್‌ಮೆಂಟ್) ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಿದ ಅವರು, ಅಸಲು, ಬಡ್ಡಿ ಸೇರಿ ಪಾಲಿಕೆಗೆ 200 ಕೋಟಿ ರೂ. ನೀರಿನ ತೆರಿಗೆ ಬಾಕಿ ಇದೆ. ಬಡವರು, ಮಧ್ಯಮ ವರ್ಗದವರೇ ಬಹುಪಾಲು ಬಾಕಿ ಉಳಿಸಿಕೊಂಡಿರುವುದರಿಂದ ಬಡ್ಡಿ ಮನ್ನಾ ಮಾಡಿ ಅಸಲು ಪಾವತಿಸಿಕೊಳ್ಳಲು ಸರ್ಕಾರದ ಅನುಮತಿ ಪಡೆಯಲು ಪ್ರಸ್ತಾವನೆ ಸಲ್ಲಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಪೌರಕಾರ್ಮಿಕರಿಗೆ ಮನೆ ನೀಡಿ: ಪೌರಕಾರ್ಮಿಕರಿಗಾಗಿ ನಿರ್ಮಿಸುತ್ತಿರುವ ಮನೆಗಳ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಿ ಅರ್ಹ ಫಲಾನುಭವಿಗಳಿಗೆ ಮನೆ ನೀಡಬೇಕು. ಅನರ್ಹರು ಈ ಯೋಜನೆಯ ಅನುಕೂಲ ಪಡೆಯದಂತೆ ಎಚ್ಚರ ವಹಿಸಬೇಕೆಂದು ಸಚಿವರು ಮೈಸೂರು ನಗರ ಪಾಲಿಕೆ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಜಾಹೀರಾತು ಆದಾಯ ಹೆಚ್ಚಿಸಿ: ಮೈಸೂರಿನಂತಹ ವೇಗವಾಗಿ ಬೆಳೆಯುತ್ತಿರುವ ನಗರದಲ್ಲಿ ಪ್ರಸಕ್ತ ವರ್ಷ ಜಾಹೀರಾತು ಶುಲ್ಕದಿಂದ ಕೇವಲ 70 ಕೋಟಿ ರೂ. ಆದಾಯ ನಿರೀಕ್ಷಿಸಿರುವುದು ಸರಿಯಲ್ಲ. ಮೈಸೂರಲ್ಲಿ ಎಲ್ಲಿ ನೋಡಿದರೂ ಜಾಹೀರಾತು ಫಲಕಗಳೇ ಕಾಣಿಸುತ್ತಿವೆ. ಅದರ ಆದಾಯ ಹೆಚ್ಚಿಸಬೇಕು. ಬೇರೆ ಬೇರೆ ಜಾಹೀರಾತು ಏಜೆನ್ಸಿಗಳಿಗೂ ಟೆಂಡರ್ ಮೂಲಕವೇ ಜಾಹೀರಾತು ಪಡೆಯುವಂತೆ ಕ್ರಮ ವಹಿಸಿ ಎಂದು ಸಚಿವರು ಸಲಹೆ ನೀಡಿದರು.

ಇಂದಿರಾ ಕ್ಯಾಂಟಿನ್ ಹೆಚ್ಚಿಸಿ: ಕಡಿಮೆ ದರದಲ್ಲಿ ಆಹಾರ ಪೂರೈಸುತ್ತಿರುವ ಪ್ರಸ್ತುತ 11 ಇಂದಿರಾ ಕ್ಯಾಂಟಿನ್‌ಗಳ ಜೊತೆಗೆ ಬೇಡಿಕೆಗನುಸಾರ ಮತ್ತಷ್ಟು ಕ್ಯಾಂಟಿನ್‌ಗಳನ್ನು ನಿರ್ಮಿಸುವಂತೆ ತಿಳಿಸಿದ ಸಚಿವರು, ನಮ್ಮ ಸರ್ಕಾರ ಬಡವರ ಹಸಿವು ನೀಗಿಸಲು ಒತ್ತು ನೀಡುತ್ತದೆ. ಇನ್ನು 2 ಇಂದಿರಾ ಕ್ಯಾಂಟಿನ್ ಆರಂಭಿಸಲು ಕ್ರಮ ಕೈಗೊಳ್ಳಿ ಎಂದು ಹೇಳಿದರು.

ಅಭಿವೃದ್ಧಿ ಕಾಮಗಾರಿಗಳಿಗೆ ಟೆಂಡರ್ ಪ್ರಕ್ರಿಯೆ ಚುರುಕುಗೊಳಿಸಿ, ಬೀದಿದೀಪಗಳ ಸಮರ್ಪಕ ನಿರ್ವಹಣೆಯಾಗಬೇಕು. ಲೋಪ ಕಂಡು ಬಂದಲ್ಲಿ ಸಂಬಂಧಪಟ್ಟ ಗುತ್ತಿಗೆದಾರನ ವಿರುದ್ಧ ನಿರ್ದಾಕ್ಷಿಣ್ಯ ಕ್ರಮವಾಗಲಿ. ಇ–ಆಫೀಸ್ ಅನುಷ್ಠಾನಗೊಳಿಸಬೇಕು. ಸಾರ್ವಜನಿಕರ ಕುಂದು–ಕೊರತೆ, ಅರ್ಜಿಗಳನ್ನು ತ್ವರಿತಗತಿಯಲ್ಲಿ ಇತ್ಯರ್ಥಗೊಳಿಸುವಂತೆಯೂ ತಾಕೀತು ಮಾಡಿದ ಭೈರತಿ ಸುರೇಶ್ ಅವರು, ತೆರಿಗೆ ಬಾಕಿಯನ್ನು ಸಂಗ್ರಹಿಸಿ ಪಾಲಿಕೆಗೆ ಹೆಚ್ಚು ಸಂಪನ್ಮೂಲ ಕ್ರೋಢೀಕರಿಸುವಂತೆಯೂ ಇದೇ ಸಂದರ್ಭ ಸಚಿವರು ತಾಕೀತು ಮಾಡಿದರು.

ಸಭೆಯಲ್ಲಿ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ಡಾ.ಎಂ.ಎನ್.ಅಜಯ ನಾಗಭೂಷಣ್, ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕಿ ಎನ್.ಮಂಜುಶ್ರೀ, ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಅಶಾದ್ ರೆಹಮಾನ್ ಷರೀಫ್, ಹೆಚ್ಚುವರಿ ಆಯುಕ್ತರಾದ ರೂಪಾ, ಸೂಪರಿಂಟೆಂಡಿಂಗ್ ಇಂಜಿನಿಯರ್ ಸಿಂಧೂ, ಎಲ್ಲಾ ಒಂಭತ್ತು ವಲಯ ಕಚೇರಿಗಳ ವಲಯಾಧಿಕಾರಿಗಳು, ಅಭಿವೃದ್ಧಿ ಅಧಿಕಾರಿಗಳು, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳು, ಕಂದಾಯಾಧಿಕಾರಿಗಳು, ನಗರ ಯೋಜನಾ ಶಾಖೆ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.



ಬೆಂಗಳೂರಿನ ವಿಧಾನ ಸೌಧದಲ್ಲಿ ಮೈಸೂರು ಪಾಲಿಕೆ ಅಧಿಕಾರಿಗಳೊಂದಿಗೆ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಪ್ರಗತಿ ಪರಿಶೀಲನಾ ಸಭೆ ನಡೆಸಿದರು. ಪಾಲಿಕೆ ಆಯುಕ್ತ ಅಶಾದ್ ರೆಹಮಾನ್ ಷರೀಫ್ ಇನ್ನಿತರರಿದ್ದಾರೆ.



ಗುರುವಾರ ಹುಟ್ಟುಹಬ್ಬ ಆಚರಿಸಿಕೊಂಡ ಕಾಂಗ್ರೆಸ್ ಮುಖಂಡರೂ ಆದ ಕೆಡಿಪಿ ಸದಸ್ಯ ಸುನಿಲ್ ಬೋಸ್ ಅವರನ್ನು ಹುಯಿಲಾಳು ಗ್ರಾಮದ ಶ್ರೀ ಮನೆ ಮಂಚಮ್ಮ ದೇವಸ್ಥಾನ ಸೇವಾ ಟ್ರಸ್ಟ್ ವತಿಯಿಂದ ಹಾರ ಹಾಕಿ, ಅಭಿನಂದಿಸಲಾಯಿತು. ಈ ವೇಳೆ ಟ್ರಸ್ಟ್ ಅಧ್ಯಕ್ಷ ಹುಯಿಲಾಳು ರಾಮಸ್ವಾಮಿ, ಹಿನಕಲ್ ನಂಜುಂಡ, ಮಾವಿನಹಳ್ಳಿ ರವಿ, ಕಡಕೊಳ ಭರತ್, ಹುಯಿಲಾಳು ಜಯರಾಮು ಇನ್ನಿತರರಿದ್ದಾರೆ.

ವಿವಿಧ ತರಬೇತಿಗೆ ಅರ್ಜಿ ಆಹ್ವಾನ

ಮೈಸೂರು,ಆ.31– ಮೈಸೂರಿನ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ SSLC, ITI, DIPLOMA, BE (EC,E&C,ME,E&E,SC,IP) ಪಾಸಾದ ಪರಿಶಿಷ್ಟ ಜಾತಿ ಹಾಗೂ ಪಂಗಡದ ವಿದ್ಯಾರ್ಥಿಗಳಿಗೆ ಅಲ್ಪಾವಧಿ ತರಬೇತಿ ಹಾಗೂ 1 ವರ್ಷದ ಪೋಸ್ಟ್ ಇನ್ ಟೂಲ್ ಡಿಸೈನ್ ತರಬೇತಿಯನ್ನು ಉಚಿತವಾಗಿ ನೀಡಲು ಅರ್ಜಿ ಆಹ್ವಾನಿಸಿದೆ. ಅರ್ಜಿ ಸಲ್ಲಿಸಲು ಸೆ.3 ಕೊನೇ ದಿನ. ಮಾಹಿತಿಗೆ ಮೊ.ಸಂ: 9945442654, 9945349638, 9945479700, 9449929667 ಸಂಪರ್ಕಿಸಬಹುದು

ಸಮ ಸಮಾಜಕ್ಕೆ ಶ್ರಮಿಸಿದವರು ಬ್ರಹ್ಮಶ್ರೀ ನಾರಾಯಣ ಗುರುಗಳು

● ಮೈಸೂರಲ್ಲಿ ಮಹನೀಯರ ಜಯಂತಿ ಆಚರಣೆ ● ತಳ ಸಮುದಾಯದಲ್ಲಿ ಆತ್ಮಗೌರವ ತುಂಬಿದ ಮಹಾಚೇತನ; ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಬಣ್ಣನೆ

ಮೈಸೂರು,ಆ.31(ಎಸ್‌ಬಿಡಿ)–ಬ್ರಹ್ಮಶ್ರೀ ನಾರಾಯಣ ಗುರು ತಳ ಸಮುದಾಯದವರಲ್ಲಿ ಆತ್ಮಗೌರವ ತುಂಬಿ, ಸಮ ಸಮಾಜದ ನಿರ್ಮಾಣಕ್ಕೆ ಶ್ರಮಿಸಿದ್ದರು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹೇಳಿದರು.

ಮೈಸೂರು ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಬ್ರಹ್ಮಶ್ರೀ ನಾರಾಯಣ ಗುರು ಜಯಂತಿ ಆಚರಣೆ ಸಮಿತಿ ಸಹಯೋಗದಲ್ಲಿ ಕಲಾಮಂದಿರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಬ್ರಹ್ಮಶ್ರೀ ನಾರಾಯಣ ಗುರುಗಳ 169ನೇ ಜಯಂತ್ಯುತ್ಸವವನ್ನು ಉದ್ಘಾಟಿಸಿ, ಮಾತನಾಡಿದರು.

ನಾರಾಯಣಗುರುವಿನ ಸಾಮಾಜಿಕ ಪರಿವರ್ತನೆ ಚಳವಳಿ ಕೇರಳಕ್ಕೆ ಮಾತ್ರ ಸೀಮಿತವಲ್ಲ. ದೇಶ ಸೇವೆಯೇ ಈಶ ಸೇವೆ ಎಂಬ ನಂಬಿಕೆಯೊಂದಿಗೆ ಸಮಾಜ ಸುಧಾರಣೆಯ ನೇತೃತ್ವ ವಹಿಸಿ, ದೇಶದೆಲ್ಲೆಡೆ ತಳವೂರಿದ್ದ ಸಾಮಾಜಿಕ ಪಿಡುಗುಗಳನ್ನು ಹೋಗಲಾಡಿಸಲು ದುಡಿದರು. ಈ ನಿಟ್ಟಿನಲ್ಲಿ ತಳ ಸಮುದಾಯದವರಲ್ಲಿ ಆತ್ಮಗೌರವ ತುಂಬಿದರು. ಸಾರ್ವಜನಿಕವಾಗಿ ಮಹಿಳೆಯರು ಮೈತುಂಬಾ ಬಟ್ಟೆ ಧರಿಸದಂತಹ ಕೊಳಕು ಸಂಪ್ರದಾಯದ ವಿರುದ್ಧ ಧ್ವನಿ ಎತ್ತಿದರು. ಇಂತಹ ಶೋಷಣೆಗಳ ವಿರುದ್ಧ ಹೋರಾಡುವಂತೆ ಜನರನ್ನು ಪ್ರೇರೇಪಿಸಿದರು ಎಂದು ಸ್ಮರಿಸಿದರು.

ಪ್ರತಿಯೊಬ್ಬರಿಗೂ ಶಿಕ್ಷಣ ದೊರಕುವುದರ ಜೊತೆಗೆ ಆರ್ಥಿಕವಾಗಿ ಸಬಲರಾಗಬೇಕು ಎನ್ನುವುದು ನಾರಾಯಣ ಗುರುವಿನ ಆಶಯವಾಗಿತ್ತು. ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರೂ ಇದನ್ನೇ ವಾದಿಸಿದ್ದು. ಶಿಕ್ಷಣ, ಸಂಘಟನೆ, ಹೋರಾಟ ನಮ್ಮನ್ನು ಬಲಗೊಳಿಸುವ ಪ್ರೇರಣಾ ಶಕ್ತಿಗಳಾಗಿವೆ. ಉತ್ತಮ ಸಾಮಾಜಿಕ ವ್ಯವಸ್ಥೆಯನ್ನು ಬಂಧಮುಕ್ತಗೊಳಿಸುವಲ್ಲಿ ಮಹತ್ತರ ಪಾತ್ರ ವಹಿಸಿದ್ದ ಬ್ರಹ್ಮಶ್ರೀ ನಾರಾಯಣ ಗುರುಗಳ 169ನೇ ಜಯಂತ್ಯುತ್ಸವದಲ್ಲಿ ನಾನೂ ಭಾಗಿಯಾಗಿದ್ದು ಸಂತಸದ ತಂದಿದೆ. ಪ್ರತಿಯೊಬ್ಬರು ನಾರಾಯಣಗುರು ವಿಚಾರಧಾರೆಗಳನ್ನು ಅರಿತು, ಅವರ ಮಾರ್ಗದಲ್ಲಿ ಮುನ್ನಡೆದಾಗ ಮಾತ್ರ ಅವರ ಜಯಂತ್ಯುತ್ಸವ ಅರ್ಥಪೂರ್ಣವಾಗುತ್ತದೆ ಎಂದರು.

ಸಮಾಜ ಒಂದು ಕುಟುಂಬವೆಂದಿದ್ದರು: ಮೇಯರ್ ಶಿವಕುಮಾರ್ ಮಾತನಾಡಿ, ಕೇರಳದಲ್ಲಿ ಮಹಿಳೆಯರ ಸ್ಥಿತಿ ಶೋಚನೀಯವಾಗಿತ್ತು. ದೇವರಲ್ಲೂ ಭಿನ್ನತೆ ಮಾಡಿ ಕೆಳವರ್ಗದವರನ್ನು ಶೋಷಣೆ ಮಾಡಲಾಗುತ್ತಿತ್ತು. ಆ ಪರಿಸ್ಥಿತಿಯಲ್ಲಿ ನಾರಾಯಣ ಗುರುಗಳು ನೊಂದವರಲ್ಲಿ ಆತ್ಮಸ್ಥೈರ್ಯ ತುಂಬಿದರು. ಶೋಷಿತರ ಪರ ಧ್ವನಿ ಎತ್ತಿದರು. ಸಾಮಾಜಿಕ ಪಿಡುಗುಗಳ ನಿವಾರಣೆಗೆ ಅವಿರತವಾಗಿ ಶ್ರಮಿಸಿದರು. ವಸುದೈವ ಕುಟುಂಬಕಂ ಎನ್ನುವಂತೆ ಸಮಾಜ ಒಂದೇ ಕುಟುಂಬ ಎಂಬ ಸಂದೇಶ ಸಾರಿದರು. ದೇಶದ ಸುರಕ್ಷತೆಗೆ ಸಾಮಾಜಿಕ ಹಾಗೂ ಆಧ್ಯಾತ್ಮಿಕ ಸ್ವಾತಂತ್ರ್ಯ ಬಹಳ ಮುಖ್ಯ ಎಂದಿದ್ದರು. ಕೇರಳದಲ್ಲಿ ನಾರಾಯಣ ಗುರುಗಳನ್ನು ಬಸವಣ್ಣರಂತೆ ಕಾಣುತ್ತಿದ್ದರು ಎಂದರು.

ಶಾಲಾ–ಕಾಲೇಜಲ್ಲಿ ಬೋಧಿಸಬೇಕು: ಲೇಖಕ ಮಮತೇಶ್ ಕಡೂರು ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೊದಲ ಬಾರಿಗೆ ಮುಖ್ಯಮಂತ್ರಿ ಆಗಿದ್ದಾಗ ನಾರಾಯಣ ಗುರುವಂತಹ ತಳಸಮುದಾಯದ ವಿಮೋಚಕರ ಜಯಂತಿಯನ್ನು ಸರ್ಕಾರವೇ ಆಚರಣೆ ಮಾಡಬೇಕು ಎಂದು ಆದೇಶಿಸಿದ್ದನ್ನು ಸ್ಮರಿಸಬೇಕು. ಬ್ರಹ್ಮಶ್ರೀ ನಾರಾಯಣ ಗುರುಗಳ ಕುರಿತ 19 ಕೃತಿಗಳು ಈಗಾಗಲೇ ಬಿಡುಗಡೆಯಾಗಿವೆ. ಗುರುಗಳ ಕೆಲವು ಆಶಯಗಳನ್ನು ಸಂವಿಧಾನದಲ್ಲೂ ಕಾಣಬಹುದು. ನಾರಾಯಣ ಗುರುಗಳ ವಿಚಾರಗಳನ್ನು ಶಾಲಾ ಕಾಲೇಜುಗಳಲ್ಲಿ ಬೋಧಿಸಬೇಕು. ಅವರ ತತ್ವ, ಸಿದ್ಧಾಂತಗಳನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಆಗ ಮಾತ್ರ ಜಯಂತ್ಯುತ್ಸವ ಸಾರ್ಥಕವಾಗುತ್ತದೆ ಎಂದರು.

ಸಮಾರಂಭದಲ್ಲಿ ಉಪಮೇಯರ್ ಡಾ.ಜಿ.ರೂಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಈಡಿಗ ಸಂಘದ ಅಧ್ಯಕ್ಷ ಎಂ.ಕೆ.ಪೋತರಾಜು, ಉಪಾಧ್ಯಕ್ಷ ರಾಜಶೇಖರ ಕದಂಬ, ಪ್ರಧಾನ ಕಾರ್ಯದರ್ಶಿ ಕೆ.ಎಸ್.ಕೃಷ್ಣಮೂರ್ತಿ, ಸಹಕಾರ್ಯದರ್ಶಿ ಎಚ್.ಟಿ. ಗೋವಿಂದರಾಜು, ಮಹಿಳಾ ಘಟಕದ ಅಧ್ಯಕ್ಷೆ ಸರೋಜಮ್ಮ, ಜಿಲ್ಲಾ ಆರ್ಯ ಈಡಿಗ ಯುವ ವೇದಿಕೆ ಅಧ್ಯಕ್ಷ ಎಸ್.ಪಿ.ಸೋಮಶೇಖರ್ ಮತ್ತಿತರರು ಉಪಸ್ಥಿತರಿದ್ದರು.



ಕಲಾಮಂದಿರದಲ್ಲಿ ನೆರವೇರಿದ ಬ್ರಹ್ಮಶ್ರೀ ನಾರಾಯಣ ಗುರುಗಳ 169ನೇ ಜಯಂತ್ಯುತ್ಸವದಲ್ಲಿ ಗುರುಗಳ ಭಾವಚಿತ್ರಕ್ಕೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಮೇಯರ್ ಶಿವಕುಮಾರ್ ಹಾಗೂ ಗಣ್ಯರು ಪುಷ್ಪ ನಮನ ಸಲ್ಲಿಸಿದರು.

ಕೇರಳದ ತಿರುವನಂತಪುರಂನಿಂದ 12 ಕಿ.ಮೀ. ದೂರದಲ್ಲಿರುವ ಒಂದು ಹಳ್ಳಿಯಲ್ಲಿ ಕೃಷಿಕ ಕುಟುಂಬದಲ್ಲಿ ಜನಿಸಿದ ನಾರಾಯಣ ಗುರು, ತಂದೆಯವರು ಹೇಳುತ್ತಿದ್ದ ಪುರಾಣ, ರಾಮಾಯಣ, ಮಹಾಭಾರತ ಕತೆಗಳನ್ನು ಕೇಳಿ ಹಾಗೂ ಸ್ವಂತ ಅಧ್ಯಯನದಿಂದ ಪಾಂಡಿತ್ಯ ಗಳಿಸಿಕೊಂಡರು. ಆ ಕಾಲದಲ್ಲಿ ಕೇರಳದಲ್ಲಿ ಜಾತಿ ವ್ಯವಸ್ಥೆ ಗಟ್ಟಿಯಾಗಿ ಬೇರೂರಿತ್ತು. ಅಸ್ಪೃಶ್ಯರು, ಹಿಂದುಳಿದವರು ದೇವಸ್ಥಾನ ಪ್ರವೇಶಿಸುವಂತಿರಲಿಲ್ಲ. ದೇವರ ಹೆಸರಿನಲ್ಲಿ ಪ್ರಾಣಿ ಬಲಿ ನಡೆಸಲಾಗುತ್ತಿತ್ತು. ತಪ್ಪು ಎನ್ನುವುದನ್ನು ತೀವ್ರವಾಗಿ ಖಂಡಿಸಿದ್ದಲ್ಲದೆ, ಸ್ವತಃ 60 ದೇವಾಲಯಗಳನ್ನು ನಿರ್ಮಿಸಿ, ಎಲ್ಲರಿಗೂ ಮುಕ್ತ ಅವಕಾಶ ಕಲ್ಪಿಸುವ ಮೂಲಕ ಹಿಂದುಳಿದವರ ಆತ್ಮಗೌರವ ಹೆಚ್ಚಿಸಿದರು. ಮದುವೆ ಆದರೂ ಸಾಂಸಾರಿಕ ಜೀವನಕ್ಕೆ ಜೋತು ಬೀಳದೆ ಸಮ ಸಮಾಜದ ನಿರ್ಮಾಣ ಹಾಗೂ ಮಹಿಳೆಯರ ಘನತೆ ರಕ್ಷಣೆಗಾಗಿ ಸಂಚರಿಸಿ, ಸಮಾಜದ ಸುಧಾರಕರಾದರು. **–ಡಾ.ಹೆಚ್.ಸಿ.ಮಹದೇವಪ್ಪ**

ನಕ್ಕರೆ ಅದೇ ಸ್ವರ್ಗ

ಡಾಕ್ಟರ್ : "ಒಂದೇ ಸಲ ನಾಲ್ಕು ಹಲ್ಲು ಹೇಗೆ ಹೋಯ್ತು?"
ಆತ : "ನನ್ನ ಹೆಂಡತಿ ಚಕ್ಕುಲಿ ಮಾಡಿದ್ಲು"
ಡಾಕ್ಟರ್ : "ಬೇಡಾ ಅನ್ಬೇಕಾಗಿತ್ತು"
ಆತ : "ತಿಂದಿದ್ದಕ್ಕೆ ಒಂದು ಹೋಯ್ತು. ಬೇಡ ಅಂದಿದ್ದಕ್ಕೆ ಮೂರು ಹೋಯ್ತು!"

ಮೈಸೂರು ಮಿತ್ರ

ಶುಕ್ರವಾರ, 1 ಸೆಪ್ಟೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಕೇಳಿರಿ, ನೋಡಿರಿ, ಬೇಕಾದಷ್ಟು ವಿಚಾರ ಮಾಡಿ.
ಆದರೆ ಬಹಳ ಯೋಚಿಸಿ ಬೇಕಾದಷ್ಟೇ ಮಾತನಾಡಿರಿ. –ಷೇಕ್ಸ್‌ಪಿಯರ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕೊಟ್ಟು ಕುದೀಬೇಡ, ಇಟ್ಟು ಹಂಗಿಸಬೇಡ

ನಿಮ್ಮ ಪತ್ರಗಳು

■ ಅಪಘಾತವನ್ನು ತಪ್ಪಿಸಿ ಜನತೆಗೆ ಒಳಿತು ಮಾಡಿ



ಮಾನ್ಯರೆ,

ಕುಕ್ಕರಹಳ್ಳಿ ಕೆರೆಯ ಗೇಟಿನ ಮುಂಭಾಗ ಹಾಗೂ ವಿಶ್ವಮಾನವ ಜೋಡಿ ರಸ್ತೆಯ ಅಂತ್ಯದ ಸಿಗ್ನಲ್ ಇರುವ ವೃತ್ತದಲ್ಲಿರುವ ಲೈಟಿನ ಕಂಬ ಆತಂಕ ಹುಟ್ಟಿಸುತ್ತಿದೆ. ಈ ಕಂಬದಲ್ಲಿ ಒಂದಷ್ಟು ವೈರುಗಳು ಸುತ್ತಿಕೊಂಡು ಅತ್ಯಂತ ಕೆಳಭಾಗ ಅಂದರೆ ಮಾನವರು ಅದರ ಪಕ್ಕದಲ್ಲಿ ಓಡಾಡುವಾಗ ತಲೆಗೆ ತಗುಲುವುದರಲ್ಲಿ ಯಾವುದೇ ಅನುಮಾನ ಇಲ್ಲ. ಇಂತಹ ಅಪಘಾತ ಉಂಟುಮಾಡುವ ಕಂಬ ವೊಂದು ಹಲವಾರು ತಿಂಗಳುಗಳಿಂದ ಜನತೆಯಲ್ಲಿ ಅತಂಕವನ್ನು ಉಂಟು ಮಾಡುತ್ತಿದೆ.

ಈ ಸಂಗತಿಯ ಬಗ್ಗೆ ಆ ವೃತ್ತದಲ್ಲಿ ಕಾರ್ಯನಿರ್ವಹಿಸುವ ಪೊಲೀಸರಾಗಲೀ, ಇಲ್ಲವೇ ಆ ಗೇಟಿನಲ್ಲಿ ಕಾರ್ಯ ನಿರ್ವಹಿಸುವ ಸೆಕ್ಯೂರಿಟಿ ಸಿಬ್ಬಂದಿಗಳಾಗಲೀ ಇಲ್ಲವೇ ಆ ಕ್ಷೇತ್ರದ ಮುಖಂಡರುಗಳು ಇದರ ಕಡೆ ಗಮನ ಹರಿಸದೇ ಇರುವುದು ಒಂದು ವಿಪರ್ಯಾಸದ ಸಂಗತಿಯಾಗಿದೆ. ಮುಂದಿನ ದಿನಗಳಲ್ಲಿ ಜನತೆಗೆ ಯಾವುದೇ ಆತಂಕ ಸೃಷ್ಟಿಯಾಗದಂತೆ ತಡೆಯಲು ನಾವೆಲ್ಲರೂ ಸಹಕರಿಸೋಣವಲ್ಲವೇ? ಇನ್ನಾದರೂ ಜನತೆಯ ಜೊತೆ ಚೆಲ್ಲಾಟ ವಾಡದೇ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಎಚ್ಚೆತ್ತು ಜನತೆಗೆ ಸಹಕಾರಿಯಾಗುವಂತೆ ಆ ಕಂಬದಲ್ಲಿ ಕಂಡುಬಂದಿರುವ ದೋಷವನ್ನು ಸರಿಪಡಿಸಿ ಮುಂದಾಗುವ ಅಪಘಾತವನ್ನು ತಪ್ಪಿಸಬೇಕಾಗಿ ಮನವಿ.

–ಅನಿಲ್ ರಾಜ, ಸಹ ಶಿಕ್ಷಕರು, ಮೈಸೂರು

■ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆ ಸುಸೂತ್ರವಾಗಿ ನಡೆಯಲಿ

ಮಾನ್ಯರೆ,

ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆ(ಕೆ–ಸೆಟ್)ಯನ್ನು ಇದುವರೆಗೂ ಮೈಸೂರು ವಿಶ್ವವಿದ್ಯಾನಿಲಯ ನಡೆಸುತ್ತಿತ್ತು. ಈ ಸಂದರ್ಭಗಳಲ್ಲಿ ಪರೀಕ್ಷೆಯಲ್ಲಿ ಕೆಲ ಅಭ್ಯರ್ಥಿಗಳು ಹಣ ನೀಡಿ ಉತ್ತೀರ್ಣರಾಗಿದ್ದಾರೆ ಮತ್ತು ಪರೀಕ್ಷೆಯಲ್ಲಿ ನಕಲು ನಡೆಯುತ್ತಿತ್ತು ಎಂಬ ಕೂಗಿನೊಂದಿಗೆ ಕಳೆದ ಎರಡು ವರ್ಷಗಳಿಂದ ಈ ಪರೀಕ್ಷೆಯು ನಡೆದಿರಲಿಲ್ಲ. ಈ ಬಾರಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಈಗಾಗಲೇ ಅಧಿಸೂಚನೆ ಹೊರಡಿಸುವ ಬಗ್ಗೆ ಮಾಹಿತಿಯನ್ನು ನೀಡುವುದರ ಮೂಲಕ ಅಭ್ಯರ್ಥಿಗಳಿಗೆ ಸಿಹಿ ಸುದ್ದಿ ನೀಡಿದೆ. ಎರಡು ವರ್ಷಗಳಿಂದ ನಡೆಯದ ಈ ಪರೀಕ್ಷೆಗೆ ಈ ಬಾರಿ ಹೆಚ್ಚಿನ ನಿರೀಕ್ಷೆಯನ್ನು ಇಟ್ಟು ಹೆಚ್ಚಿನ ಅಭ್ಯರ್ಥಿಗಳು ಕೆ–ಸೆಟ್ ಪರೀಕ್ಷೆಯನ್ನು ಎದುರಿಸಲು ಸಿದ್ಧಗೊಳ್ಳುವವರಿಗೆ ಯಾವುದೇ ಅಡೆ–ತಡೆಗಳಿಲ್ಲದೆ, ಪರೀಕ್ಷೆಯಲ್ಲಿ ನಕಲು ಉಂಟಾಗದೆ ಸುಸೂತ್ರವಾಗಿ ನಡೆಯಬೇಕು ಎಂಬುದು ಈ ಬಾರಿ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆಗೆ ತಯಾರಿ ನಡೆಸುತ್ತಿರುವ ಅಭ್ಯರ್ಥಿಗಳ ಮಾತಾಗಿದೆ. ಇದರಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಕಟ್ಟುನಿಟ್ಟಿನ ಕಠಿಣ ನಿಯಮಗಳನ್ನು ಜಾರಿಗೊಳಿಸಿ ಈ ಪರೀಕ್ಷೆ ನಡೆಸುವುದರ ಮೂಲಕ ಮಾದರಿಯಾಗಬೇಕು.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು

■ ಸುಬ್ರಮಣಿಯನ್‌ಸ್ವಾಮಿಯವರ ಸಲಹೆ ಸ್ವಾಗತಾರ್ಹ

ಮಾನ್ಯರೆ,

ಮಧ್ಯಮ ವರ್ಗದವರಿಗೆ ಆದಾಯ ತೆರಿಗೆ ರದ್ದುಪಡಿಸಿ ಹಾಗೂ ಬ್ಯಾಂಕ್‌ಗಳಲ್ಲಿ ಠೇವಣಿ ಬಡ್ಡಿದರವನ್ನು ಶೇ. 9ಕ್ಕಿಂತ ಹೆಚ್ಚು ಮಾಡಬೇಕೆಂಬ ಸಲಹೆಯನ್ನು ಅರ್ಥಶಾಸ್ತ್ರಜ್ಞ ಹಾಗೂ ಮಾಜಿ ಕೇಂದ್ರ ಸಚಿವ ಸುಬ್ರಮಣಿಯನ್‌ಸ್ವಾಮಿಯವರು ನೀಡಿದ್ದಾರೆ.

ಇದೊಂದು ಸ್ವಾಗತಾರ್ಹ ಸಲಹೆ. ಸಂಬಳದಾರರು ಯಾವುದೇ ಕಾರಣಕ್ಕೂ ತೆರಿಗೆ ವಂಚನೆ ಮಾಡಲಾರರು ಹಾಗೂ ಅದು ಅವರೆಲ್ಲರ ಸಾಮಾಜಿಕ ಜವಾಬ್ದಾರಿಯೂ ಹೌದು. ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದಾಗ TDS ವ್ಯವಸ್ಥೆ ಜಾರಿಗೆ ತಂದು ಮಧ್ಯಮವರ್ಗದವರಿಗೆ ಎಳೆದ ಬರೆ ಇನ್ನೂ ಮಾಸಿಲ್ಲ.

ಎಲ್ಲಾ ಕಡೆಯಿಂದಲೂ ಬೆಲೆ ಏರಿಕೆ, ತೆರಿಗೆ ಪಾವತಿ, ಸರ್ಕಾರಿ ಯೋಜನೆಗಳಿಂದ ವಂಚಿತರಾಗಿರುವುದು ಮಾಧ್ಯಮವರ್ಗದವರೇ. ಇವೆಲ್ಲವೂ ಮಧ್ಯಮ ವರ್ಗದವರಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ನಿರಂತರವಾಗಿ ಮಾಡಲಾಗುತ್ತಿರುವ ಅನ್ಯಾಯ.

ಮಧ್ಯಮ ವರ್ಗದವರ ಬವಣೆ ಬಗ್ಗೆ ಯಾವ ಸರ್ಕಾರಕ್ಕೂ ಕಾಳಜಿ ಇಲ್ಲದಿರುವುದು ದುರದೃಷ್ಟಕರ. ಅದರಲ್ಲೂ ದುಡಿದು ತಿನ್ನುವ ಮಂದಿಗೆ ಚಾಟಿ ಏಟಾದರೆ ಹೊಡೆದು ತಿನ್ನುವ (ಬಹುತೇಕ ಎಲ್ಲಾ ಪಕ್ಷಾತೀತ ರಾಜಕಾರಣಿಗಳಿಗೆ) ಸೊಗಲಾಡಿ ಮಂದಿಗೆ ತೆರಿಗೆ ವಂಚನೆ ಮಾಡುವ ಚಾಣಕ್ಯರಿಗೆ ಯಾವುದೇ ಕಟ್ಟುಪಾಡುಗಳಿಲ್ಲದಿರುವುದು ಅವರೆಲ್ಲಾ ತೆರಿಗೆ ವಂಚನೆ ಮಾಡುತ್ತಿದ್ದರೂ ಸರ್ಕಾರಗಳ ಕಣ್ಣಿಗೆ ಕಾಣದಿರುವುದು ಸರಿಯಲ್ಲ.

ಸುಬ್ರಮಣಿಯನ್ ಸ್ವಾಮಿಯವರ ಸಲಹೆಯನ್ನು ಗಮನಿಸುವತ್ತ ಕೇಂದ್ರ, ರಾಜ್ಯ ಸರ್ಕಾರ ಯೋಚಿಸಲಿ. ಆದಾಯ ತೆರಿಗೆ, ವೃತ್ತಿ ತೆರಿಗೆ ಬಗ್ಗೆ ಪುನರ್ ವಿಮರ್ಶೆ ಮಾಡಲಿ ಎಂಬುದು ನಮ್ಮ ಮನವಿ.

–ಶಿವಮೊಗ್ಗ ನಾ. ದಿನೇಶ್ ಅಡಿಗ, ಮೈಸೂರು

ಕಾವೇರಿಯ ಜಲ ವಿವಾದದ ಪುರಾಣ



ನಾಲ್ವಡಿ ಕೃಷ್ಣರಾಜ ಒಡೆಯರ್



ಸರ್ ಕೆ.ಶೇಷಾದ್ರಿ ಐಯ್ಯರ್



ಸರ್ ಎಂ.ವಿಶ್ವೇಶ್ವರಯ್ಯ



ಸು.ಬಸವರಾಜ ದೊಡ್ಡಟ್ಟಿ
ನಂ.1317, ನಾರಾಯಣರಾಯರ ಅಗ್ರಹಾರ, ನಂಜನಗೂಡು, ಮೊ.ನಂ.9986357124

"29ರ ಆಗಸ್ಟ್ 23ರ ಮಂಗಳವಾರದಂದು ಕಾವೇರಿ ನದಿ ನೀರಿನ ನಿಯಂತ್ರಣ ಮಂಡಳಿಯು (CWRC) 15 ದಿನಗಳ ಕಾಲ ದಿನಕ್ಕೆ 5 ಸಾವಿರ ಕ್ಯೂಸೆಕ್ ನೀರನ್ನು ಹರಿಸಬೇಕೆಂದು ನೀಡಿರುವ ತೀರ್ಪಿನವರೆಗೆ, ಕರ್ನಾಟಕದಲ್ಲಿನ ವಾಸ್ತವಾಂಶದ (ಕಾವೇರಿ ನದಿ ಕೊಳ್ಳದ) ಸತ್ಯ ಸಂಗತಿಯ ಅರಿವು ಕಂಡಿರಲು ಸಾಧ್ಯವಿಲ್ಲ. ಕನ್ನಡಿಗರ ಉದಾರತೆಯು ನ್ಯಾಯ ದೇವತೆಯ ಕೈಯ್ಯಲ್ಲಿ ಸಿಲುಕಿ, ಬೇಲಿಯೇ ಎದ್ದು ಹೊಲ ಮೇಯ್ದಂತೆ ಎಂಬ ಗಾದೆಯಂತಾಗಿದೆ. ಇದಕ್ಕೆ 2016ರಲ್ಲಿ ಸರ್ವೋಚ್ಛ ನ್ಯಾಯಾಲಯವು ಹೊರಡಿಸಿರುವ ತೀರ್ಪು ಕರ್ನಾಟಕದ ರಾಜಕಾರಣಿಗಳ ಬೇಜವಾಬ್ದಾರಿತನದ ಫಲವಾಗಿದೆ. ಆದರೆ 1889ರ ಸೆಪ್ಟೆಂಬರ್ 7ರಲ್ಲಿ ಮೈಸೂರಿನ ದಿವಾನರಾಗಿದ್ದ ಸರ್ ಕೆ.ಶೇಷಾದ್ರಿ ಐಯ್ಯರ್ ಹಾಗೂ ಮುಖ್ಯ ಶಿಲ್ಪಿಗಳಾಗಿದ್ದ ಸರ್ ಎಂ.ವಿಶ್ವೇಶ್ವರಯ್ಯನವರು ಮತ್ತು ಅಂದಿನ ಮೈಸೂರು ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಡಳಿತ ಬದ್ಧತೆಯು ಪುನರಾವರ್ತನೆ ಆಗಲು ಇನ್ನೆಷ್ಟು ದಿನಗಳು ಕನ್ನಡಿಗರು ಕಾಯಬೇಕಿದೆಯೋ?**

ಈ ನಾಡಿನ ಜೀವ ನದಿಯಾಗಿರುವ ಕಾವೇರಿಯ ಜಲ ವಿವಾದವನ್ನು ಈ ದೇಶವನ್ನಾಳಿದ ಬ್ರಿಟಿಷರು ಕರ್ನಾಟಕದವರಿಗೆ ಪ್ರೀತಿಯ ಬಳುವಳಿಯಾಗಿ ನೀಡಿ ಹೋಗಿದ್ದಾರೆ! ಆ ಮಹನೀಯರನ್ನು ಈ ನಾಡಿನ ಜನ ಅನೇಕ ಶತಮಾನಗಳು ಕಳೆದರೂ ಮರೆಯಲಾಗದಂತಾಗಿದೆ. ಅಭಿಮಾನ ಶೂನ್ಯರಾದ ಆಡಳಿತಗಾರರಿಗೆ ಬ್ರಿಟಿಷರ ಈ ಕೊಡುಗೆ ಒಂದು ರಾಜಮುಕುಟವೇ ಸರಿ.

ಕವಿರಾಜ ಮಾರ್ಗದ ಕನ್ನಡ ನಾಡು **'ಕಾವೇರಿಯಿಂದಮಾಗೋದಾವರಿವರಮಿರ್ಪ ನಾಡದಾ ಕನ್ನಡದೊಳ್'** ಇತ್ತು. 2016ರ ಈ ಹೊತ್ತಿಗೆ ಕುವೆಂಪು ಅವರು ಹಾಡಿದಂತೆ **'ನೀ ಕುಡಿಯುವ ನೀರ್ ಕಾವೇರಿ ಆಗಿದ್ದರೂ'** ಅದಾಗದಂತೆ, ನಾವೆಲ್ಲರೂ ಕುಡಿಯಲು ಮುಂದೆ ಯಾವ ಏರಿಯನ್ನು (ಕೆರೆ) ಹುಡುಕಬೇಕಾದೀತೋ ಕಾಣೆಯಾಗಿದೆ ಎಂಬ ಪ್ರಶ್ನೆಗೆ ಇಂದು ಉತ್ತರಿಸಬೇಕಾದವರು ನಮ್ಮ ರಾಜ್ಯ ಸರ್ಕಾರದವರು.

ತಜ್ಞರು ಹೇಳುತ್ತಾರೆ, ನಮ್ಮ ಕೊಡಗಿನಲ್ಲಿ ಹುಟ್ಟಿ, 75 ಭಾಗ ಕರ್ನಾಟಕದಲ್ಲಿಯೇ 400 ಕಿ.ಮೀ. ಹರಿದು, ಕೊನೆಗೆ ತಮಿಳುನಾಡಿನ ಪೂಂಪುಗಾರ್ ಹತ್ತಿರ ಬಂಗಾಳಕೊಲ್ಲಿ ಸಮುದ್ರದಲ್ಲಿ ಐಕ್ಯವಾಗುವ ಕಾವೇರಿ ನಾನಾ ರೀತಿಯ ಜೀವಜಾಲವನ್ನು ನಡೆಯಿಸಿ ತಮಿಳುನಾಡಿನಲ್ಲಿ ಅಂತ್ಯವನ್ನು ಕಾಣುತ್ತಿದ್ದಾಳೆ.

ಈ ನಯವಂಚಕ ಆಡಳಿತದವರೊಂದಿಗೆ ಕುಟಿಲಪ್ರಾಯರಾದ ಕೆಲ ಆಡಳಿತ ವರ್ಗದವರೂ ಸೇರಿ **'ವ್ಯಾಪಾರಂ ದ್ರೋಹಚಿಂತನಂ'** ಎಂಬ ಉಕ್ತಿಗೆ ಇನ್ನೊಂದು ರೂಪಾಗಿ ಅಧಿಕಾರ ನಡೆಸುತ್ತಿದ್ದಾರೆ. ಆದರೆ ಈ ನಾಡಿಗರ ನಾಡಿ ಮಿಡಿತವನ್ನು ನಿಜಕ್ಕೂ ಅರ್ಥೈಸಿಕೊಂಡು ಅವರ ಧಾರ್ಮಿಕ, ಭಾವನಾತ್ಮಕ ಮತ್ತು ನಾಡಿನ ಆರ್ಥಿಕಾತ್ಮಕ ಅಭಿವೃದ್ಧಿಯ ಹಾಗೂ ಕೃಷಿ ಮತ್ತು ಕೈಗಾರಿಕಾ ಪ್ರಗತಿಗಾಗಿ ಈ ಕಾವೇರಿ ಪುಣ್ಯನದಿಯ ನೀರನ್ನು ಸಮರ್ಥವಾಗಿ ಬಳಸಿ ಮೈಸೂರನ್ನು ಬೆಳಗಿಸಿದ ಆಡಳಿತಗಾರರೆಂದರೆ ಹಳೆಯ ಮೈಸೂರು ಸಂಸ್ಥಾನದ ಅರಸರಾದ ನಾಲ್ವಡಿ ಕೃಷ್ಣರಾಜ ಒಡೆಯರು ಹಾಗೂ ಅವರ ಮುಖ್ಯ ಇಂಜಿನಿಯರ್ ಆಗಿದ್ದ ಸರ್ ಎಂ.ವಿಶ್ವೇಶ್ವರಯ್ಯನವರು ಮಾತ್ರವೇ.

ಕಾವೇರಿಗೆ ಸಾವಿರಾರು ವರ್ಷಗಳ ವಯಸ್ಸಾಗಿದೆ. ಆದರೆ ನಿರಭಿಮಾನಿಗಳಾದ ಹಾಗೂ ಅಯೋಗ್ಯರಾದ ಆಡಳಿತಗಾರರಿಂದ (ಆಡಳಿತದಿಂದ) ಈ ಸಹಸ್ರ ವರ್ಷಗಳ ಇತಿಹಾಸ ಹೊಂದಿರುವ ಈ ಜಲವಾಹಿನಿಗೆ ನೂರಾರು ವರ್ಷಗಳಿಂದ ಜಲ ವಿವಾದವೂ ಹತ್ತಿಕೊಂಡು ಹೊತ್ತಿ ಉರಿಯುತ್ತಾ ನಲುಗಿ ಕರ್ನಾಟಕದ ತವರಿಗೆ ಸಂಕಟ ಹರಿಸಲಾರದವಳಾಗಿ ಹರಿಯುತ್ತಿದ್ದಾಳೆ.

ಒಂದೆಡೆ ಅವಿವೇಕಿಗಳ ರಾಜ್ಯಾಡಳಿತ, ಮತ್ತೊಂದೆಡೆ ಕೇಂದ್ರ ಸರ್ಕಾರದ ನಿಸ್ಸೀಮ ನಿರ್ಲಕ್ಷ್ಯತಾ ಭಾವ ಹಾಗೂ ಸಮಯಕ್ಕೆ ತಕ್ಕಂತೆ ತಮಿಳು ಆಡಳಿತಗಾರರ ತಂತ್ರಗಾರಿಕೆಯಲ್ಲಿ ಈ ವಿವಾದ ಸತ್ತು–ಸತ್ತು, ಮತ್ತೆ–ಮತ್ತೆ ಹುಟ್ಟಿ–ಹುಟ್ಟಿ ಬರುತ್ತಿರುವ ರಕ್ತಬೀಜಾಸುರನಾಗಿದೆ.

1889ರ ಮೈಸೂರು ಸಂಸ್ಥಾನದಲ್ಲಿ ಸರ್ ಎಂ.ವಿಶ್ವೇಶ್ವರಯ್ಯನವರ ಮೇಲುಸ್ತುವಾರಿಕೆಯಲ್ಲಿ ನೀರಾವರಿ ಯೋಜನೆಗಳನ್ನು ಆರಂಭಿಸಲು ಕರ್ನಾಟಕವು ಮುಂದಾದಾಗ, ತನಗೆ ಹಕ್ಕಿಲ್ಲದಿದ್ದರೂ ತಂಟೆ ತೆಗೆದಿದ್ದೇ ಮದರಾಸು ಸರ್ಕಾರ. ಅಂದಿನ ಮೈಸೂರು ಪ್ರಾಂತ್ಯದಲ್ಲಿ ಕೃಷಿ ಅಭಿವೃದ್ಧಿ ಯೋಜನೆಗಳನ್ನು ಕೈಗೊಂಡರೆ ತನ್ನ ರಾಜ್ಯದಲ್ಲಿರುವ ಕೃಷಿ ಯೋಜನೆಗಳಿಗೆ ತೊಂದರೆಯಾಗುತ್ತದೆ ಎಂಬ ಸ್ವಾರ್ಥದಿಂದ ತಮಿಳುನಾಡಿನ ಸರ್ಕಾರವೂ ಬೇಕಂತಲೇ ಕರ್ನಾಟಕದ ನೀರಾವರಿ ಯೋಜನೆಗಳಿಗೆ ತಡೆ ಒಡ್ಡುತ್ತದೆ. ಇದರಲ್ಲಿ ಮುಖ್ಯ ಕಾರಣ ತಂಜಾವೂರಿನ ಹತ್ತಿರದಲ್ಲಿ ಚೋಳರಾಜರ ಆಡಳಿತಾವಧಿಯಲ್ಲಿ ಕಲ್ಲಣೈ ಎಂಬ ಜಲಾಶಯವನ್ನು ನಿರ್ಮಿಸಿಕೊಂಡಿದ್ದು. ಅದರಿಂದ ತಲತಲಾಂತರದ ಪ್ರಯೋಜನವನ್ನು ತಮಿಳುನಾಡು ಕಂಡುಕೊಂಡಿತ್ತು. ಈ ಕಾರಣ ಕರ್ನಾಟಕದ ಕಾವೇರಿಯ ನದಿಕೊಳ್ಳದಲ್ಲಿ ಅಣೆಕಟ್ಟೆ ಕಟ್ಟಿದರೆ ಈ ಕಲ್ಲಣೈ ಪ್ರದೇಶಕ್ಕೆ ನೀರು ಹರಿಸುವುದರಲ್ಲಿ ಅನ್ಯಾಯವಾಗುತ್ತದೆ ಎಂಬ ಮೊಂಡುವಾದವನ್ನು ತಮಿಳುನಾಡು ಸರ್ಕಾರ ಅಂದಿನ ಬ್ರಿಟಿಷ್ ಆಡಳಿತಗಾರರಿಗೆ ವರದಿ ಒಪ್ಪಿಸಿತ್ತು. ಆದರೆ ಈ ವಾದಕ್ಕೆ ನ್ಯಾಯ ಪರವಾಗಿ ಉತ್ತರಿಸಿದ್ದ ಆಡಳಿತಗಾರರೆಂದರೆ ಅಂದಿನ ಮೈಸೂರು ಸಂಸ್ಥಾನದ, ದಿವಾನರಾಗಿದ್ದ ಕೆ.ಶೇಷಾದ್ರಿ ಐಯ್ಯರ್. ಅವರು ಮಂಡಿಸಿದ ಸರ್ವ ಸಮ್ಮತ ಹಾಗೂ ನ್ಯಾಯಯುತ ಮತ್ತು ಕಾರಣಬದ್ಧ ಅಂಕಿ–ಅಂಶಗಳು ಸೂಕ್ತವಾದವುಗಳಾಗಿದ್ದರೂ, ಅವರ ವಾದಕ್ಕೆ ಮನ್ನಣೆ ಸಿಗಲಿಲ್ಲ. ಕಾರಣ ಅಂದು ನಮ್ಮ ಮೈಸೂರು ಸಂಸ್ಥಾನವು ಮದ್ರಾಸ್ ಪ್ರಾಂತ್ಯದ ಒಂದು ಅಧೀನ ರಾಜ್ಯವಾಗಿತ್ತು. ಮದ್ರಾಸ್ ಪ್ರಾಂತ್ಯದಲ್ಲಿ ಗವರ್ನರ್ ಆಡಳಿತವಿದ್ದು, ಮೈಸೂರಿನಲ್ಲಿ ಆತನ ಕೈಕೆಳಗಿನ ರೆಸಿಡೆನ್ಸಿ ಸ್ಥಾನಮಾನದ ಆಡಳಿತ ಇದ್ದುದ್ದರಿಂದ ತನ್ನ ಕೈಕೆಳಗಿನವರ ವಾದಕ್ಕೆ ತಲೆ ಬಾಗಬೇಕಾಗುತ್ತದೆ ಎಂಬ ಕಾರಣದಿಂದ ಕರ್ನಾಟಕದ ಹಕ್ಕಿಗೆ ಚ್ಯುತಿಯಾದರೂ ಸತ್ಯವನ್ನು ಮರೆಮಾಚಿ ಮದ್ರಾಸ್ ಪ್ರಾಂತ್ಯದವರಿಗೆ ಇಷ್ಟವಾಗುವಂತೆ ತೀರ್ಮಾನವನ್ನು ನೀಡಿತು.

ಇದರಲ್ಲಿ ಮಾಡಿದ ತಪ್ಪನ್ನು ಸರಿಪಡಿಸಿಕೊಳ್ಳಲಿಕ್ಕಾಗಿ ಎಂಬಂತೆ 1892ರಲ್ಲಿ ಕಾವೇರಿ ಜಲಾನಯನ ಪ್ರದೇಶದ ಕರಾರನ್ನು ಎರಡು ರಾಜ್ಯಗಳ ಮಧ್ಯೆ ಬಗೆಹರಿಸಿಕೊಳ್ಳಲು ಬ್ರಿಟಿಷ್ ಸರ್ಕಾರ ಅನುಮತಿ ನೀಡಿತ್ತು. ಈ ಕರಾರಿನಂತೆ ಎರಡೂ ರಾಜ್ಯಗಳೂ ಯಾವುದೇ ಒಂದು ನೀರಾವರಿ ಯೋಜನೆಗಳನ್ನು ಆರಂಭಿಸುವ ಪೂರ್ವಭಾವಿಯಲ್ಲಿ ಪರಸ್ಪರವಾಗಿ ಕೊಟ್ಟುಕೊಳ್ಳುವ ಅನುಮತಿ ಸಿದ್ಧಾಂತದಂತೆ ನಡೆದುಕೊಳ್ಳುವುದು ಕಡ್ಡಾಯವಾಗಿತ್ತು. ಇದರಂತೆ ಮದ್ರಾಸಿನ ಸರ್ಕಾರವು ತನ್ನ ನಮೂದಿತ ಹಕ್ಕಿನ ಹೊರತಾಗಿ ಯಾವುದೇ ಕಾರಣಕ್ಕೂ ಅನುಮತಿ ನೀಡಲು ನಿರಾಕರಿಸಬಾರದೆಂಬ ಒಪ್ಪಂದದಲ್ಲಿ ಕರಾರನ್ನು ಹೊರಡಿಸಲಾಗಿತ್ತು.

ಅಂತಾರಾಷ್ಟ್ರೀಯ ನದಿ ವಿವಾದದ ನಿಯಮಗಳ ದೃಷ್ಟಿಯಂತೆ ನದಿ ಹರಿವ ಮೇಗಣ ರಾಜ್ಯಕ್ಕೆ ಆ ನದಿಯ ನೀರಿನಲ್ಲಿರುವ ಹೆಚ್ಚು ಹಕ್ಕು, ನದಿ ಹರಿವ ಕೆಳಗಿನ ರಾಜ್ಯಕ್ಕೆ ಹೆಚ್ಚಿನ ಹಕ್ಕು ಇರುವುದಿಲ್ಲ ಆದೂ ಅಂದಿನ ಬ್ರಿಟಿಷ್ ಸರ್ಕಾರ, ಮದ್ರಾಸಿಗಿಲ್ಲದಿದ್ದರೂ ಹೆಚ್ಚಿನ ಹಕ್ಕನ್ನು ಕರ್ನಾಟಕದಿಂದ ಕಿತ್ತು ತಮಿಳುನಾಡಿಗೆ ನೀಡಿ ಸತ್ಯದ ಮೇಲೆ ಬರೆ ಎಳೆಯಿತು. ಕುಟಿಲರಾದ ಬ್ರಿಟಿಷರ ತಂತ್ರಗಾರಿಕೆ ಇದೇ ತಾನೆ?

ಈ ಕರಾರಿನಂತೆ ಎರಡೂ ರಾಜ್ಯಗಳ ನೀರಾವರಿ ಯೋಜನೆಗಳ ಕಾರ್ಯವೈಖರಿಗಳ ಪರಿಶೀಲನೆಗಾಗಿ ಆಗಿಂದಾಗ್ಯೆ ಮೇಲುಸ್ತುವಾರಿಕೆಗಾಗಿಯೇ ಸಮಿತಿಯನ್ನು ನೇಮಿಸುವ ಅನಿವಾರ್ಯತೆಯೂ ಒದಗಿ ಬಂದಿತು.

1914ರಲ್ಲಿ ಸರ್ ಎಂ.ವಿಶ್ವೇಶ್ವರಯ್ಯನವರು ಮೈಸೂರು ಸಂಸ್ಥಾನದ ಮುಖ್ಯ ಇಂಜಿನಿಯರ್ ಆದ ನಂತರ ಕನ್ನಂಬಾಡಿಯ ಹತ್ತಿರ ಕೃಷ್ಣರಾಜ ಸಾಗರ ಎಂಬ ಅಣೆಕಟ್ಟೆ ಕಟ್ಟುವ ಯೋಜನೆಯ ತಯಾರಿಯನ್ನು ನಡೆಸಿದ್ದರು. ಆದರೆ 1892ರ ಒಪ್ಪಂದದಲ್ಲಿನ ಮೂರನೆಯ ಅನುಚ್ಛೇದದಲ್ಲಿ ಸೇರಿಸಲಾಗಿದ್ದ ಪ್ರಕಾರವನ್ನು ಆಧಾರವಾಗಿರಿಸಿಕೊಂಡು ತಮಿಳುನಾಡು ಈ ಯೋಜನೆಗೆ ತಡೆ ಒಡ್ಡಿತು. ಆದರೆ ಅದೇ ಕರಾರಿನ ಅನುಚ್ಛೇದದ ನಾಲ್ಕರಲ್ಲಿ ಕಾಣಿಸಿರುವ ಹಕ್ಕಿನ ಆಧಾರವನ್ನು ಅಂದಿನ ಉಸ್ತುವಾರಿ ಮುಖ್ಯಸ್ಥರಾಗಿದ್ದ ಹೆಚ್.ಡಿ.ಗ್ರಿಫನ್ ಎಂಬುವರಿಗೆ ವಿಶ್ವೇಶ್ವರಯ್ಯನವರು ಮನವರಿಕೆ ಮಾಡಿ, ಒಪ್ಪಿಸಿದರು. ಅವರು ನೀಡಿದ ಸತ್ಯಪೂರ್ಣ ಪ್ರಮಾಣದ ಅಂಕಿ–ಅಂಶಗಳ ಆಧಾರದಿಂದ ಕರ್ನಾಟಕಕ್ಕೆ 1,50,000 ಎಕರೆಗಳು ಮದ್ರಾಸಿಗೆ 3,20,000 ಎಕರೆಗಳ ಸಾಗುವಳಿ ಭೂಮಿಗೆ ನೀರು ಒದಗುತ್ತದೆ ಎಂಬ ಸತ್ಯ ತಿಳಿದಿದ್ದ ಅಂದಿನ ಕೇಂದ್ರ ಸರ್ಕಾರ ಕನ್ನಂಬಾಡಿಯ ಅಣೆಕಟ್ಟೆ ಕಟ್ಟಲು ಅನುಮತಿಯನ್ನು ನೀಡಿತ್ತು.

ಅಂದು ಈ ಅಣೆಕಟ್ಟೆಯನ್ನು ಕಟ್ಟುವುದಕ್ಕೆ ಮೈಸೂರು ಸಂಸ್ಥಾನಕ್ಕೆ 225 ಲಕ್ಷ ರೂಪಾಯಿಗಳು ಖರ್ಚಾದವು. ಅಂದು ಮೈಸೂರು ಸಂಸ್ಥಾನದ ಒಟ್ಟು ಆದಾಯವೇ 250 ಲಕ್ಷ ರೂಪಾಯಿಗಳು ಆಗಿತ್ತು. ಇಷ್ಟೂ ಹಣವನ್ನು ಈ ನೀರಾವರಿ ಯೋಜನೆಗಾಗಿ ಬಳಸಿಕೊಂಡರೆ ಮೈಸೂರು ರಾಜ್ಯವು ಆರ್ಥಿಕವಾಗಿ ದಿವಾಳಿಯಾಗುತ್ತದೆ ಎಂಬ ಕಟು ಬರವಣಿಗೆಯನ್ನು ಅಂದಿನ ಆರ್ಥಿಕ ವಿಭಾಗದ ಕಾರ್ಯದರ್ಶಿಗಳಾಗಿದ್ದವರೂ ಮಹಾರಾಜರಿಗೆ ಬರೆದುಕೊಂಡು ಆಕ್ಷೇಪಿಸಿದ್ದರು. (ಹೇಗಾದರೂ ಮಾಡಿ ಈ ಯೋಜನೆಯನ್ನು ಕಾರ್ಯಗತಗೊಳಿಸಬಾರದೆಂಬ ಕುಬುದ್ಧಿಗೆ ತಮಿಳುನಾಡು ಸರ್ಕಾರ ಕಾರ್ಯ ರೂಪಿಸಿತ್ತು) ಆದರೆ ಹಠ ಬಿಡದ ಸರ್ ಎಂ.ವಿಶ್ವೇಶ್ವಯ್ಯನವರು ಮೈಸೂರು ಮಹಾರಾಜರ ಹಾಗೂ ದಿವಾನರ ಸಂತೈಕೆಗಳಿಂದ ತಾವು ಹಿಡಿದ ಕಾರ್ಯವನ್ನು ಆರಂಭಿಸಿಯೇ ಬಿಟ್ಟರು. ಕರ್ನಾಟಕದ ಹಣದಿಂದ ಪರೋಕ್ಷವಾಗಿ ಭರಪೂರ ಸೌಕರ್ಯವನ್ನು ಪಡೆದವರು ತಮಿಳುನಾಡಿನವರೇ ವಿನಃ ಕರ್ನಾಟಕದವರಲ್ಲ. ಇದರಿಂದ ಕರ್ನಾಟಕಕ್ಕೆ ಆದ ಅನುಕೂಲ 25% ಭಾಗ, ತಮಿಳುನಾಡಿಗೆ ಆದ ಅನುಕೂಲ 75% ಭಾಗ. 1924ರಿಂದ 1971ರ ತನಕ ತಮಿಳುನಾಡು 14.54 ರಿಂದ 28.20 ಲಕ್ಷ ಎಕರೆ ಪ್ರದೇಶಕ್ಕೆ ನೀರು ಪಡೆದರೆ, ಕರ್ನಾಟಕ 1924–71ರವರೆಗೆ 3.15 ರಿಂದ 6.6 ಲಕ್ಷ ಎಕರೆ ಪ್ರದೇಶಕ್ಕೆ ಮಾತ್ರ ನೀರಾವರಿ ಸೌಕರ್ಯ ಪಡೆಯಿತು. ಆದರೂ ತಮಿಳುನಾಡಿನ ಕ್ಯಾತೆ ನಿಂತಿಲ್ಲ. ನಮ್ಮ ರಾಜ್ಯದಲ್ಲಿರುವ ಕಾವೇರಿ ಕೊಳ್ಳದ ಬರಗಾಲ ಪ್ರದೇಶ ಮೂರನೇ ಎರಡು ಭಾಗವಾದರೆ ತಮಿಳುನಾಡಿನ ಕಾವೇರಿ ಕೊಳ್ಳದ ಮೂರನೇ ಒಂದು ಭಾಗ.

ಕರ್ನಾಟಕದ ಕಾವೇರಿ ಕೊಳ್ಳದ ವ್ಯವಸಾಯ ಯೋಗ್ಯ ಭೂಮಿ 11% ವಿಸ್ತೀರ್ಣವಾಗಿದ್ದರೆ, ತಮಿಳುನಾಡಿನ ಕಾವೇರಿ ಕೊಳ್ಳದ ವ್ಯವಸಾಯ ಭೂಮಿ 34% ವಿಸ್ತೀರ್ಣ ಪಡೆದಿದೆ. ಹೀಗೆ ತಮಿಳುನಾಡು 1892 ರಿಂದ 1924ರವರೆಗೆ ನಡೆದ ಎಲ್ಲಾ ಒಪ್ಪಂದಗಳಿಂದ ಕಾವೇರಿ ನದಿಯ ನೀರಿನಲ್ಲಿ ಇಂದಿಗೂ ಸಿಂಹಪಾಲನ್ನು ಪಡೆದರೂ (ಪಡೆಯುತ್ತಿದ್ದರೂ) ತನ್ನ ಕುತಂತ್ರದಿಂದ ಕೇಂದ್ರ ಸರ್ಕಾರ ಹಾಗೂ ನ್ಯಾಯ ಪೀಠಗಳ ಮರ್ಜಿಗಳಿಂದ ಕರ್ನಾಟಕಕ್ಕೆ ತೊಂದರೆಯನ್ನು ಕೊಡುತ್ತಲೇ ಬಂದಿದೆ.

1924ರಲ್ಲಾದ ಒಪ್ಪಂದವು 1974ರ ನಂತರ ಊರ್ಜಿತವಾಗಿರುವುದಿಲ್ಲ ಎಂಬ ಕರಾರು ಕಾರಣ ಗೊತ್ತಿದ್ದರೂ ಬ್ರಿಟಿಷರ ಕಾಲದಿಂದಲೂ ನಮಗೆ ಅನ್ಯಾಯ ಮಾಡಿ ಸವಲತ್ತನ್ನು ಉಂಡು, ಕಂಡಿರುವ ಪರಿಣಾಮವಾಗಿ ತಮಿಳುನಾಡು ಇಂದಿಗೂ ತನ್ನ ಕುತಂತ್ರದಲ್ಲಿ ರಾಜಕೀಯ ದಾಳದ ಪ್ರಾಬಲ್ಯದಿಂದ ಸುಳ್ಳು ಅಂಕಿ–ಅಂಶಗಳ ಮೂಲಕವಾಗಿ ಕರ್ನಾಟಕ ರಾಜ್ಯಕ್ಕೆ ತೊಂದರೆಯನ್ನು ನೀಡುತ್ತಲೇ ಬಂದಿದೆ. ಸ್ವಾತಂತ್ರ್ಯ ನಂತರ ಕರ್ನಾಟಕವೂ ಸಹ ತಮಿಳುನಾಡಿನಂತೆ ಸ್ವತಂತ್ರ ರಾಜ್ಯವಾಗಿ ರೂಪು ತಾಳಿದ್ದರೂ ಈ ರಾಜ್ಯದ ಮೇಲೆ ತನ್ನ ಕುಟಿಲ ಹಕ್ಕನ್ನು ಇಂದಿಗೂ ಚಲಾಯಿಸುತ್ತಲೇ ಇದೆ.

ತಮಿಳುನಾಡು ಭವಾನಿ ಮತ್ತು ಅಮರಾವತಿ ಉಪ ನದಿಗಳಿಗೆ ನೀರಾವರಿ ಯೋಜನೆಗಳನ್ನು ರೂಪಿಸಿತ್ತು. ಈ ಯೋಜನೆಗಳಿಗೆ ನಿಯಮಬದ್ಧವಾಗಿ ಕರ್ನಾಟಕಕ್ಕೆ ತಿಳಿಸದೆಯೇ ಕಾರ್ಯರೂಪ ಮಾಡಿತ್ತು ಆದರೆ ಕರ್ನಾಟಕವೂ ಕಬಿನಿ, ಹೇಮಾವತಿ, ಹಾರಂಗಿ ಕೊಳ್ಳಗಳ ಯೋಜನೆಯನ್ನು ರೂಪಿಸಿದಾಗ ಮಾತ್ರ ತಮಿಳುನಾಡು ಕರ್ನಾಟಕವು 1924ರ ಒಪ್ಪಂದದ ಉಲ್ಲಂಘನೆ ಮಾಡುತ್ತಿದೆ ಎಂದು ಆರೋಪಿಸಿ ತಂಜಾವೂರಿನ ರೈತರ ಹೆಸರಿನಲ್ಲಿ ಸುಪ್ರೀಂಕೋರ್ಟಿಗೆ ದೂರು ನೀಡಿತು. ಇದು ತಮಿಳುನಾಡಿನ ನರಿ ಬುದ್ಧಿ ಅಲ್ಲವೇ?

1892 ರಿಂದ 1947ರ ತನಕ ಮೈಸೂರು ಸಂಸ್ಥಾನ ತನ್ನ ಅಧೀನದಲ್ಲಿತ್ತೆಂಬ ಭ್ರಮೆಯಿಂದಲೇ ಇಂದಿಗೂ ತಮಿಳುನಾಡು ಅಧಿಪತ್ಯವನ್ನು ಸ್ಥಾಪಿಸಲು ಪ್ರಯತ್ನಿಸುತ್ತಿರುವಂತೆ ಕಾಣುತ್ತಿದೆ. ರಾಜ್ಯವು ಸ್ವತಂತ್ರವಾದಾಗ ಕೊಡಗು, ಕೇರಳ, ಪಾಂಡಿಚೇರಿಗಳು ಒಪ್ಪಂದದಲ್ಲಿರಲಿಲ್ಲ. ಇಂದು ಈ ಎರಡು ರಾಜ್ಯಗಳು ಈ ತಕರಾರಿನಲ್ಲಿ ಸೇರಿಕೊಂಡಿವೆ. ಹೀಗಾಗಿ ತಮಿಳುನಾಡಿನ ಮೊಂಡುತನದ ಅಧಿಪತ್ಯವು 1973ರ ನಂತರ ತನ್ನ ಸ್ಥಾನಮಾನವನ್ನು ಕಳೆದುಕೊಳ್ಳುವುದನ್ನು ಕಂಡ ಈ ರಾಜ್ಯ, ಮತ್ತೆ 1973ರಲ್ಲಿಯೂ ಕ್ಯಾತೆಯನ್ನು ತೆಗೆದು ಕೇಂದ್ರ ಸರ್ಕಾರಕ್ಕೆ ಮನವಿ ಅರ್ಪಿಸಿತು. ಆಗ ಕೇಂದ್ರ ಸರ್ಕಾರವು 1973ರಲ್ಲಿ ಗುಜರಾತಿನವರಾದ ಸಿ.ಸಿ.ಪಾಟೀಲರ ನೇತೃತ್ವದಲ್ಲಿ ಅಧ್ಯಯನ ತಂಡವನ್ನು ನೇಮಿಸಿತು. ಮತ್ತೆ ಇದಾದ ಹತ್ತು ವರ್ಷಗಳ ನಂತರ ಇದಕ್ಕೆ ಪೂರಕವಾಗಿ 1983ರಲ್ಲಿ ಮತ್ತೆ ತಮಿಳುನಾಡು ಸರ್ಕಾರವೂ ತಂಜಾವೂರು ರೈತರ ಮೂಲಕವಾಗಿ ಭಾರತದ ಸರ್ವೋಚ್ಛ ನ್ಯಾಯಾಲಯಕ್ಕೆ ದೂರನ್ನು ಸಲ್ಲಿಸಿತು. ಇದಕ್ಕೆ ಸರಿಯಾಗಿ 1990ರಲ್ಲಿ ರಾಷ್ಟ್ರೀಯ ರಂಗ ಸರ್ಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದು 1991ರ ಜೂನ್ ತಿಂಗಳಲ್ಲಿ ಜಲ ನ್ಯಾಯ ಮಂಡಳಿಯನ್ನು ರಚಿಸಿತು. ಈ ಮಂಡಳಿಯು ಸರ್ಕಾರದ ಆದೇಶದಂತೆ ಆಯಾ ವರ್ಷದಲ್ಲಿನ ಜೂನ್ ತಿಂಗಳಿಂದ ಮೇ ತಿಂಗಳ ತನಕ ತಮಿಳುನಾಡಿಗೆ 205 ಟಿಎಂಸಿ ನೀರನ್ನು ಕೊಡುವಂತೆ ತನ್ನ ತೀರ್ಪಿನಲ್ಲಿ ಆದೇಶವನ್ನು ನೀಡಿತು. ಅಲ್ಲದೇ ಕೇಂದ್ರ ಸರ್ಕಾರವೂ ಸಹ ತನ್ನ ಗೆಜೆಟ್‌ನಲ್ಲಿ ಈ ಆದೇಶವನ್ನು ಪ್ರಕಟಿಸಿತು. ಇದರಿಂದ ಅಂದಿನ ಕರ್ನಾಟಕದ ಸುಮಾರು ಮೂರು ಕೋಟಿ ರೈತರ ಬದುಕನ್ನೇ ಸಂಪೂರ್ಣವಾಗಿ ಬರಡಾಗಿಸಿತು.

ಜಮ್ಮು–ಕಾಶ್ಮೀರದಲ್ಲಿ ಚುನಾವಣೆ ನಡೆಸಲು ಸಿದ್ಧ: ಕೇಂದ್ರ ಸರ್ಕಾರ

ನವದೆಹಲಿ: ಜಮ್ಮು–ಕಾಶ್ಮೀರಕ್ಕೆ ಸಂಪೂರ್ಣ ರಾಜ್ಯ ಸ್ಥಾನಮಾನವನ್ನು ಮರುಸ್ಥಾಪಿಸಲು ಕೆಲ ಸಮಯ ಹಿಡಿಯುತ್ತದೆ. ಆದರೆ, ಯಾವ ಕ್ಷಣದಲ್ಲಿ ಬೇಕಾದರೂ ಚುನಾವಣೆ ನಡೆಸಲು ಸಿದ್ಧವಿರುವುದಾಗಿ ಕೇಂದ್ರ ಸರ್ಕಾರ ಸುಪ್ರೀಂಕೋರ್ಟ್‌ಗೆ ತಿಳಿಸಿದೆ.

ಸಂವಿಧಾನದ 370ನೇ ವಿಧಿ ಅಡಿ ಜಮ್ಮು–ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇಷ ಸ್ಥಾನಮಾನ ರದ್ದತಿ ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಐದು ಸದಸ್ಯರ ಸಾಂವಿಧಾನಿಕ ಪೀಠ ಗುರುವಾರವೂ ವಿಚಾರಣೆಯನ್ನು ಮುಂದುವರೆಸಿದೆ.

ಕೇಂದ್ರ ಸರ್ಕಾರದ ಪರ ವಾದ ಮಂಡಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಜಮ್ಮು–ಕಾಶ್ಮೀರದಲ್ಲಿ ಪಂಚಾಯತ್, ಪುರಸಭೆ ಹಾಗೂ ವಿಧಾನಸಭೆ ಚುನಾವಣೆಗಳು ನಡೆಯಬೇಕಾಗಿದೆ. ಜಮ್ಮು–ಕಾಶ್ಮೀರದಲ್ಲಿ ಚುನಾವಣೆ ನಡೆಸುವ ಬಗ್ಗೆ ರಾಷ್ಟ್ರೀಯ ಹಾಗೂ ರಾಜ್ಯ ಚುನಾವಣಾ ಆಯೋಗ ನಿರ್ಧರಿಸಬೇಕು ಎಂದು ನ್ಯಾಯಾಲಯಕ್ಕೆ ತಿಳಿಸಿದ್ದಾರೆ.

ಹೇಳಲು ಸಾಧ್ಯವಿಲ್ಲ: ಜಮ್ಮು–ಕಾಶ್ಮೀರಕ್ಕೆ ರಾಜ್ಯ ಸ್ಥಾನಮಾನವನ್ನು ಕಲ್ಪಿಸಲು ಕೆಲ ಸಮಯ ಹಿಡಯುತ್ತದೆ. ನಿರ್ದಿಷ್ಟ ಅವಧಿಯಲ್ಲಿ ಆಗುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಕೇಂದ್ರಾಡಳಿತ ಪ್ರದೇಶದ ಸ್ಥಾನಮಾನ ತಾತ್ಕಾಲಿಕವಾಗಿದ್ದು, ಸಂಪೂರ್ಣ ರಾಜ್ಯವನ್ನಾಗಿಸಲು ಕೆಲಸಗಳು ನಡೆಯುತ್ತಿದೆ. ಜಮ್ಮು–ಕಾಶ್ಮೀರದಲ್ಲಿ ಬಂಡವಾಳ ಹೂಡಿಕೆ, ಅಭಿವೃದ್ಧಿ ಸೇರಿದಂತೆ ಅನೇಕ ಕಾರ್ಯಗಳಿಗೆ ಒತ್ತು ನೀಡಲಾಗಿದೆ. ಪ್ರವಾಸಿಗಳ ಸಂಖ್ಯೆಯೂ ಹೆಚ್ಚಳವಾಗಿದ್ದು, ರಾಜ್ಯ ಸ್ಥಾನಮಾನ ಮರುಸ್ಥಾಪಿಸುವುದರ ಭಾಗವಾಗಿದೆ.

2018ರಲ್ಲಿ 1761 ಕಲ್ಲು ತೂರಾಟ ಪ್ರಕರಣಗಳು ದಾಖಲಾಗಿದ್ದವು. ಆದರೆ, 2023ರಲ್ಲಿ ಶೂನ್ಯ ಪ್ರಕರಣಗಳು ದಾಖಲಾಗಿದ್ದು, ಪೊಲೀಸ್ ಹಾಗೂ ಭದ್ರತಾ ಪಡೆಗಳಷ್ಟೇ ಅಲ್ಲದೇ ಕೇಂದ್ರ ಸರ್ಕಾರದ ನಿರ್ದಿಷ್ಟ ಕ್ರಮಗಳಿಂದ. 2023ರಲ್ಲಿ ಒಂದು ಕೋಟಿಗೂ ಅಧಿಕ ಪ್ರವಾಸಿಗರು ಜಮ್ಮು–ಕಾಶ್ಮೀರಕ್ಕೆ ಭೇಟಿ ನೀಡಿರುವುದಾಗಿ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಸುಪ್ರೀಂ ಕೋರ್ಟ್‌ಗೆ ತಿಳಿಸಿದ್ದಾರೆ.

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ಎಸ್.ಕೆ.ಕೌಲ್, ಸಂಜೀವ್ ಖನ್ನಾ, ಬಿ.ಆರ್.ಗವಾಯಿ ಮತ್ತು ಸೂರ್ಯ ಕಾಂತ್ ಅವರಿದ್ದ ಪೀಠವು ಕೇಂದ್ರ ಸರ್ಕಾರದ ಹೇಳಿಕೆಯನ್ನು ದಾಖಲಿಸಿಕೊಂಡಿದೆ.

ಮಮತಾ ಬ್ಯಾನರ್ಜಿ, ಸಿದ್ದರಾಮಯ್ಯ ವಿರುದ್ಧ ನಿಂದನಾತ್ಮಕ ಪೋಸ್ಟ್

ವ್ಯಕ್ತಿ ವಿರುದ್ಧ ಎಫ್‌ಐಆರ್

ಬೆಂಗಳೂರು: ಪಶ್ಚಿಮ ಬಂಗಾಳ ಸಿಎಂ ಮಮತಾ ಬ್ಯಾನರ್ಜಿ ಹಾಗೂ ಸಿಎಂ ಸಿದ್ದರಾಮಯ್ಯ ವಿರುದ್ಧ ನಿಂದನಾತ್ಮಕ ಪೋಸ್ಟ್ ಹಾಕಿದ್ದ ವ್ಯಕ್ತಿಯೋರ್ವನ ವಿರುದ್ಧ ಸೈಬರ್ ಕ್ರೈಮ್ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ. ಆರೋಪಿಯನ್ನು ಈಶ್ವರಪ್ಪ ಮುನಿಯಪ್ಪ ಎಂದು ಗುರುತು ಮಾಡಲಾಗಿದ್ದು, ಆತನಿಗಾಗಿ ಶೋಧಕಾರ್ಯಾಚರಣೆ ನಡೆದಿದೆ.

ಈ ಆರೋಪಿ ಗಣ್ಯರ ವಿರುದ್ಧ ಸರಣಿ ನಿಂದನಾತ್ಮಕ ಹಾಗೂ ಆಕ್ಷೇಪಾರ್ಹ ಪೋಸ್ಟ್‌ಗಳನ್ನು ಹಾಕುತ್ತಿದ್ದ. ಸಿಎಂ ಅಷ್ಟೇ ಅಲ್ಲದೇ ಡಿಕೆ ಶಿವಕುಮಾರ್, ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ಸಚಿವ ಪ್ರಿಯಾಂಕ್ ಖರ್ಗೆ, ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರ ಬಗ್ಗೆಯೂ ಆಕ್ಷೇಪಾರ್ಹ ಪೋಸ್ಟ್‌ಗಳನ್ನು ಹಾಕುತ್ತಿದ್ದ ಎಂದು ತಿಳಿದುಬಂದಿದೆ. ಆರೋಪಿಯು ಸಿಎಂ ಸಿದ್ದರಾಮಯ್ಯ, ಶಿವಕುಮಾರ್ ಮಾಡಿದ ಪೋಸ್ಟ್‌ಗಳನ್ನು ಹಂಚಿಕೊಂಡಿದ್ದಾರೆ ಮತ್ತು ಅವರ ಮೇಲೆ ಅವಮಾನಕಾರಿ ಕಾಮೆಂಟ್‌ಗಳನ್ನು ಮಾಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ವೈಟ್‌ಫೀಲ್ಡ್ ಸೈಬರ್ ಎಕನಾಮಿಕ್ ಆಂಡ್ ನಾರ್ಕೋಟಿಕ್ಸ್ ಕ್ರೈಮ್ (ಸಿಇಎನ್) ಪೊಲೀಸ್ ಠಾಣೆ ಪೊಲೀಸರು ಆತನ ವಿರುದ್ಧ ದೂರು ದಾಖಲಿಸಿಕೊಂಡು ಆತನಿಗಾಗಿ ಹುಡುಕಾಟ ನಡೆಸಿದ್ದಾರೆ.

ಬೆಂಬಲಿಗರಿಂದ ಅನಧಿಕೃತ ಬ್ಯಾನರ್: ಪ್ರಿಯಾಂಕ್ ಖರ್ಗೆಗೆ 5000 ರೂ. ದಂಡ ವಿಧಿಸಿದ ಕಲಬುರಗಿ ಪಾಲಿಕೆ

ಕಲಬುರಗಿ: ಕಲಬುರಗಿ ಮಹಾನಗರ ಪಾಲಿಕೆಯ ಅನುಮತಿ ಪಡೆಯದೇ ಬ್ಯಾನರ್ ಹಾಕಿದ್ದ ಹಿನ್ನೆಲೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಪಾಲಿಕೆಯಿಂದ 5,000 ರೂ. ದಂಡ ವಿಧಿಸಲಾಗಿದೆ.

ಅನಧಿಕೃತವಾಗಿ ಬ್ಯಾನರ್ ಹಾಕುವವರ ವಿರುದ್ಧ ಕ್ರಮಕ್ಕೆ ಮುಂದಾಗುವಂತೆ ಕೆಲವು ದಿನಗಳ ಹಿಂದೆ ಅಧಿಕಾರಿಗಳಿಗೆ ಪ್ರಿಯಾಂಕ್ ಸೂಚಿಸಿದ್ದರು. ಬೆಂಬಲಿಗರು ಪಾಲಿಕೆಯ ಅನುಮತಿ ಪಡೆಯದೇ ಬ್ಯಾನರ್ ಹಾಕಿದ್ದರಿಂದ ಈಗ ಸಚಿವರು ದಂಡ ಪಾವತಿಸಬೇಕಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರ ಬೆಂಬಲಿಗರು ಪಾಲಿಕೆಯ ಅನುಮತಿ ಪಡೆಯದೆ ನಗರದ ಸಾರ್ವಜನಿಕ ಸ್ಥಳದಲ್ಲಿ ಬ್ಯಾನರ್ ಹಾಕಿದ್ದು ಕಂಡುಬಂದಿದೆ. ಹೀಗಾಗಿ, ಪಾಲಿಕೆಯಿಂದ ಸಚಿವರಿಗೆ 5,000 ದಂಡ ವಿಧಿಸಲಾಗಿದೆ ಎಂದು ಪಾಲಿಕೆಯ ಅಧಿಕಾರಿ ಹೇಳಿದ್ದಾರೆ. ಈ ವಿಷಯವನ್ನು ಮನಗಂಡ ಸಚಿವರು, ಪಾಲಿಕೆಯ ಕ್ರಮವನ್ನು ಬೆಂಬಲಿಸಿ ದಂಡದ ಮೊತ್ತವನ್ನು ಪಾವತಿಸಲು ಒಪ್ಪಿಕೊಂಡಿದ್ದಾರೆ ಎಂದಿದ್ದಾರೆ. ಕಲಬುರಗಿ ನಗರದ ಹೊರವಲಯದ ಬಂಗರಗಾ ಕಲ್ಯಾಣ ಮಂಟಪದಲ್ಲಿ ಗೃಹಲಕ್ಷ್ಮೀ ಯೋಜನೆಗೆ ಚಾಲನೆ ನೀಡಲು ಆಗಮಿಸುತ್ತಿದ್ದ ಸಂದರ್ಭದಲ್ಲಿ ಖರ್ಗೆ ಬೆಂಬಲಿಗರು ಸ್ವಾಗತ ಕೋರುವ ಹಿನ್ನೆಲೆಯಲ್ಲಿ ಬ್ಯಾನರ್ ಹಾಕಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರಿನಿಂದ ಶಿವಮೊಗ್ಗ, ಮಂಗಳೂರಿಗೆ ವಿಮಾನ ಸೇವೆ ಕಲ್ಪಿಸಿ

ಸಂಸದ ಪ್ರತಾಪಸಿಂಹಗೆ ಎಫ್‌ಕೆಸಿಸಿಐ ಮಾಜಿ ಅಧ್ಯಕ್ಷ ಸುಧಾಕರಶೆಟ್ಟಿ ಮನವಿ




ಮೈಸೂರು, ಆ.31(ಆರ್‌ಕೆ)– ಮೈಸೂರಿನಿಂದ ಶಿವಮೊಗ್ಗ ಮತ್ತು ಮಂಗಳೂರು ನಗರಗಳಿಗೆ ವಿಮಾನ ಸೇವೆ ಕಲ್ಪಿಸುವಂತೆ ಎಫ್‌ಕೆಸಿಸಿಐ ಮಾಜಿ ಅಧ್ಯಕ್ಷ ಸುಧಾಕರ ಎಸ್. ಶೆಟ್ಟಿ, ಸಂಸದ ಪ್ರತಾಪ್ ಸಿಂಹ ಅವರನ್ನು ಕೋರಿದ್ದಾರೆ.

ಈ ಕುರಿತು ಇಂದು ಪತ್ರ ಬರೆದಿರುವ ಅವರು, ಪ್ರವಾಸಿತಾಣವಾಗಿರುವ ಮೈಸೂರು ಕೈಗಾರಿಕಾ ಕ್ಷೇತ್ರದಲ್ಲೂ ಮುಂಚೂಣಿಯಲ್ಲಿದ್ದು, ಮಲೆನಾಡು ಪ್ರದೇಶಗಳಿಂದ ನಿತ್ಯ ಹಲವರು ಬರುತ್ತಿದ್ದಾರೆ. ಈ ಹಿಂದೆ ಮೈಸೂರು–ಮಂಗಳೂರು ನಡುವೆ ನಿತ್ಯ ವಿಮಾನ ಹಾರಾಡುತ್ತಿದ್ದವು. ಈಗ ಈ ಸೌಲಭ್ಯವಿಲ್ಲದಿರುವುದರಿಂದ ತೊಂದರೆಯಾಗುತ್ತಿದೆ ಎಂದು ತಿಳಿಸಿದ್ದಾರೆ.

ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಿಂದ ಮೈಸೂರಿಗೆ ಹೆಚ್ಚಿನ ಸಂಖ್ಯೆಯ ಪ್ರವಾಸಿಗರು ಬರುತ್ತಿದ್ದಾರೆ. ಅಲ್ಲದೆ, ಮಂಗಳೂರು, ಶಿವಮೊಗ್ಗದ ಸಾವಿರಾರು ಮಂದಿ ಮೈಸೂರಲ್ಲಿ ನೆಲೆಯೂರಿದ್ದಾರೆ. ಅವರು ತವರು ಸ್ಥಳಗಳಿಗೆ ಹೋಗಿ ಬರಲು ವಿಮಾನ ಸೇವೆ ಒದಗಿಸಿ ಅನುಕೂಲ ಮಾಡಿಕೊಡುವಂತೆಯೂ ಅವರು ಪತ್ರದಲ್ಲಿ ಕೋರಿದ್ದಾರೆ.

ಹೆಚ್.ಡಿ.ಕುಮಾರಸ್ವಾಮಿ ಶೀಘ್ರವೇ ಆಸ್ಪತ್ರೆಯಿಂದ ಡಿಸ್ಚಾರ್ಜ್: ನಿಖಿಲ್



ಬೆಂಗಳೂರು, ಆ.31(ಬಿಎಲ್‌ಯು)– ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಚೇತರಿಸಿಕೊಳ್ಳುತ್ತಿದ್ದು, ಶೀಘ್ರವೇ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಲಿದ್ದಾರೆ ಎಂದು ಅವರ ಪುತ್ರ ನಿಖಿಲ್ ಕುಮಾರಸ್ವಾಮಿ ತಿಳಿಸಿದ್ದಾರೆ.

ಈ ಸಂಬಂಧ ಮಾಧ್ಯಮಗಳಿಗೆ ಹೇಳಿಕೆ ನೀಡಿರುವ ಅವರು, ನಮ್ಮ ತಂದೆಯವರ ಆರೋಗ್ಯ ಸುಧಾರಿಸಿದೆ. ಈಗ ಚೇತರಿಸಿಕೊಂಡಿದ್ದಾರೆ. ಐಸಿಯುನಿಂದ ವಾರ್ಡ್‌ಗೆ ಶಿಫ್ಟ್ ಮಾಡಲಾಗಿದೆ. ಶೀಘ್ರವೇ ಆಸ್ಪತ್ರೆಯಿಂದ ಮನೆಗೆ ತೆರಳಲಿದ್ದಾರೆ.

ಪಕ್ಷದ ಕಾರ್ಯಕರ್ತರು, ಅಭಿಮಾನಿಗಳು ಯಾರೂ ಆತಂಕಪಡಬೇಕಿಲ್ಲ. ತಂದೆಯವರು ಕ್ಷೇಮವಾಗಿದ್ದು, ಕೆಲ ದಿನಗಳಲ್ಲೇ ಪಕ್ಷದ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲಿದ್ದಾರೆ ಎಂದು ಹೇಳಿದ್ದಾರೆ. ನಮ್ಮ ತಂದೆಯವರ ಆರೋಗ್ಯ ಚೇತರಿಕೆಗಾಗಿ ಪ್ರೀತಿ, ವಾತ್ಸಲ್ಯದಿಂದ ಪ್ರಾರ್ಥನೆ ಮಾಡಿದ ಎಲ್ಲಾ ಕಾರ್ಯಕರ್ತ ಬಂಧುಗಳಿಗೆ ಹಾಗೂ ನಾಡಿನ ಜನತೆಗೆ, ಆರೋಗ್ಯ ವಿಚಾರಿಸಿದ ಮಠಾಧೀಶರು ಮತ್ತು ರಾಜಕೀಯ ನಾಯಕರಿಗೆ ನಿಖಿಲ್ ಕುಮಾರಸ್ವಾಮಿ ಕೃತಜ್ಞತೆ ಸಲ್ಲಿಸಿದ್ದಾರೆ.

ತಕ್ಷಣ ನೀರು ನಿಲ್ಲಿಸಿ; ಸುಪ್ರೀಂಕೋರ್ಟ್‌ಗೆ ವಸ್ತುಸ್ಥಿತಿ ಮನವರಿಕೆ ಮಾಡಿಕೊಡಿ

ರಾಜ್ಯ ಸರ್ಕಾರಕ್ಕೆ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಆಗ್ರಹ



ಬೆಂಗಳೂರು, ಆ.31(ಕೆಎಂಶಿ)–ರಾಜ್ಯ ಸರ್ಕಾರ ಕೂಡಲೇ ತಮಿಳುನಾಡಿಗೆ ಕಾವೇರಿ ನೀರು ಹರಿಸುವುದನ್ನು ನಿಲ್ಲಿಸಿ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿ, ವಸ್ತುಸ್ಥಿತಿ ಮನವರಿಕೆ ಮಾಡುವ ಮೂಲಕ ಕಾನೂನು ಹೋರಾಟ ಮಾಡಬೇಕೆಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಗ್ರಹಿಸಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, ರಾಜ್ಯ ಸರ್ಕಾರ ಕಾವೇರಿ ವಿಷಯದಲ್ಲಿ ಮೊದಲಿನಿಂದಲೂ ಎಡವುತ್ತ ಬಂದಿದೆ. ಈಗಾಗಲೇ ಸಿಡಬ್ಲ್ಯೂಎಂಎ ಆದೇಶದಂತೆ 10 ಸಾವಿರ ಕ್ಯೂಸೆಕ್‌ನಂತೆ ಸುಮಾರು 15 ಟಿಎಂಸಿ ನೀರು ಬಿಟ್ಟಿದೆ. ಆದರೂ, ಅದರ ವಿರುದ್ಧ ಯಾವುದೇ ಕಾನೂನಾತ್ಮಕ ಕ್ರಮ ತೆಗೆದುಕೊಳ್ಳಲಿಲ್ಲ ಎಂದು ಆರೋಪಿಸಿದರು. ಈಗ ಸಿಡಬ್ಲ್ಯೂಎಂಎ ಸೂಚನೆ ಮೇರೆಗೆ 5000 ಕ್ಯುಸೆಕ್ ನೀರು ಬಿಡಲು ಪ್ರಾರಂಭ ಮಾಡಿದ ಮೇಲೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕಾನೂನು ತಜ್ಞರ ಜೊತೆ ಚರ್ಚೆ ಮಾಡುವುದರಲ್ಲಿ ಯಾವ ಅರ್ಥ ಇದೆ ಎಂದು ಪ್ರಶ್ನಿಸಿದ್ದಾರೆ.

ಹಿಂದಿನ ಆದೇಶದ ವಿರುದ್ಧ ಈಗಾಗಲೇ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಬೇಕಾಗಿತ್ತು. ಅದು ಕೂಡ ಮಾಡಿಲ್ಲ. ಈಗ ನೀರು ಬಿಡುತ್ತಿರುವುದರಿಂದ ಕಾನೂನು ಹೋರಾಟಕ್ಕೆ ಅರ್ಥವಿಲ್ಲ. ಕೂಡಲೇ ನೀರು ನಿಲ್ಲಿಸಿ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿ ತೀವ್ರವಾದಂತಹ ಮನವರಿಕೆ ಮಾಡುವ ಮೂಲಕ ಕಾನೂನು ಹೋರಾಟ ಮಾಡಬೇಕೆಂದು ಆಗ್ರಹ ಮಾಡುತ್ತೇನೆ. ಕಾಂಗ್ರೆಸ್ ಸರ್ಕಾರ ಕರ್ನಾಟಕ ರಾಜ್ಯದ ಕುಡಿಯುವ ನೀರು ಹಾಗೂ ರೈತರ ಹಿತಾಸಕ್ತಿ ಕಾಪಾಡಲು ವಿಫಲವಾಗಿದೆ ಎಂದು ಬಸವರಾಜ ಬೊಮ್ಮಾಯಿ ಅಭಿಪ್ರಾಯಪಟ್ಟಿದ್ದಾರೆ.

ರಾಷ್ಟ್ರೀಯ ಕ್ರೀಡಾ ದಿನ ಆಚರಣೆ

ಮೈಸೂರು, ಆ. 31– ಹಾಕಿ ಮಾಂತ್ರಿಕ ಮೇ.ಧ್ಯಾನ್‌ಚಂದ್ ಇಂದಿನ ಯುವ ಪೀಳಿಗೆಗೆ ಮೇಲ್ಪಂಕ್ತಿ ಎಂದು ಪ್ರಾಂಶುಪಾಲರಾದ ರಶ್ಮಿ ಕಾವೇರಮ್ಮ ಹೇಳಿದರು.

ಬಿಗಿನರ್ಸ್ ಬೆಂಚ್ ಶಾಲೆಯಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಕ್ರೀಡಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ಮೇಜರ್ ಧ್ಯಾನಚಂದ್ ಸೈನಿಕರಾಗಿ ಹಾಗೂ ಹಾಕಿ ಪಟುವಾಗಿ ಸಲ್ಲಿಸಿದ ಸೇವೆ ಅವಿಸ್ಮರಣೀಯ. ಜಗತ್ತು ಅವರನ್ನು ಮಾಂತ್ರಿಕನೆಂದು ಮತ್ತು ಅವರ ಕೈಯಲ್ಲಿದ್ದ ಹಾಕಿ ದಂಡವನ್ನು ಮಂತ್ರದಂಡವೆಂದು ಭಾವಿಸುವಷ್ಟು ಚತುರತೆ ಮೆರೆದು ಜಗತ್ತಿನೆಲ್ಲೆಡೆ ಭಾರತಾಂಬೆಯ ಕೀರ್ತಿಪತಾಕೆ ಹಾರಿಸಿದರು ಎಂದರು.

ಇಂದಿನಿಂದ ಮೈಸೂರಿನಲ್ಲಿ ಬೆಟ್‌ವೇ ಮೈಸೂರು (ಮಾನ್ಸೂನ್) ರೇಸುಗಳು



ಮೈಸೂರು,ಆ.31–ಮೈಸೂರು ರೇಸ್ ಕ್ಲಬ್ (ಎಂಆರ್‌ಸಿ) ಲಿಮಿಟೆಡ್ ಆಶ್ರಯದಲ್ಲಿ ನಾಳೆ (ಸೆ.1)ಯಿಂದ ಬೆಟ್‌ವೇ ಮೈಸೂರು (ಮಾನ್ಸೂನ್) ರೇಸುಗಳು ಆರಂಭವಾಗಲಿವೆ. ಈ ರೇಸುಗಳು 16 ದಿನಗಳ ಕಾಲ ನಡೆಯಲಿದ್ದು, ಅಕ್ಟೋಬರ್ 29ರಂದು ಅಂತ್ಯವಾಗಲಿದೆ.

ಸ್ಟೇಕ್‌ಮನಿ: ಈ ಆವೃತ್ತಿಯ ರೇಸುಗಳ ಪ್ರಚಾರದ ಜಾಹೀರಾತು, ಕಪ್‌ಗಳು, ಟ್ರೋಫಿಗಳು ಸೇರಿದಂತೆ ಸುಮಾರು 6,81,05,000 ಸ್ಟೇಕ್‌ಮನಿ ಕಾಯ್ದಿರಿಸಲಾಗಿದೆ.

ಸ್ವೀಪ್‌ಸ್ಟೇಕ್ / ಕ್ಲಾಸಿಕ್ ರೇಸುಗಳು: ಮಹಾರಾಜ ಕಪ್ ಮತ್ತು ಮೈಸೂರು ಸ್ಪ್ರಿಂಟ್ ಚಾಂಪಿಯನ್‌ಶಿಪ್–2023 ರೇಸುಗಳನ್ನು ಮೇಲ್ದರ್ಜೆಗೇರಿಸಲ್ಪಟ್ಟು, ಗ್ರೇಡ್–2 ರೇಸುಗಳಾಗಿ ನಡೆಯಲಿವೆ. ಇದರ ಜೊತೆಗೆ ಪ್ರಮುಖ **ಕ್ಲಾಸಿಕ್/ಸ್ವೀಪ್‌ಸ್ಟೇಕ್ಸ್ ರೇಸುಗಳು:** (3 ವರ್ಷದ ವಯೋಮಾನದ ಇಂಡಿಯನ್ ಕುದುರೆಗಳು). ಸೆ.1ರಂದು ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಮೆಮೋರಿಯಲ್ ಮಿಲಿಯನ್–2023, ಸೆ.15 ಎಫ್‌ಕೆ ಇರಾನಿ ಮೆಮೋರಿಯಲ್ ಮಿಲಿಯನ್–2023, ಸೆ.22– ದಿ ಕರ್ನಾಟಕ ರೇಸ್ ಹಾರ್ಸ್ ಓನರ್ಸ್ ಅಸೋಸಿಯೇಷನ್ ಮೈಸೂರು 1000 ಗಿನ್ನಿಸ್–2023 (ಗ್ರೇಡ್–3), ಅ.–6 ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್ ಮೈಸೂರು 2000 ಗಿನ್ನಿಸ್ 2023 (ಗ್ರೇಡ್–3), ಅ.13 ಮೈಸೂರು ದಸರಾ ಸ್ಪ್ರಿಂಟ್ ಚಾಂಪಿಯನ್‌ಶಿಪ್–2023, ಅ.28– ಮೈಸೂರು ರೇಸ್ ಕ್ಲಬ್ ಆ್ಯನಿವರ್ಸರಿ ಕಪ್ –2023.

(ನಾಲ್ಕು ವರ್ಷ ಇಂಡಿಯನ್ ಕುದುರೆಗಳು): ಸೆ.7ರಂದು ಶ್ರೀಕೃಷ್ಣರಾಜ ಒಡೆಯರ್ ಮೆಮೋರಿಯಲ್ ಟ್ರೋಫಿ–ಗ್ರೇಡ್ 3, ಸೆ.29ರಂದು ಮಹಾರಾಜ ಕಪ್–2023 (ಗ್ರೇಡ್–2); ಅ.20ರಂದು ಗವರ್ನರ್ಸ್ ಕಪ್.

ಕುದುರೆಗಳು: ಪ್ರಸ್ತುತ 425 ಕುದುರೆಗಳು ಮೈಸೂರು ರೇಸ್ ಕ್ಲಬ್‌ನಲ್ಲಿದ್ದು, ಹೊರಗಿನ 200ಕ್ಕೂ ಹೆಚ್ಚು ಕುದುರೆಗಳು ರೇಸ್‌ನಲ್ಲಿ ಭಾಗವಹಿಸುವ ನಿರೀಕ್ಷೆ ಇದೆ.

ತರಬೇತುದಾರರು: ಸುಮಾರು 24 ಸ್ಥಳೀಯ ತರಬೇತುದಾರರು ಮತ್ತು ಇತರ ಕೇಂದ್ರಗಳಿಂದ 30 ತರಬೇತುದಾರರು ಈ ಸೀಸನ್‌ನಲ್ಲಿ ಭಾಗವಹಿಸಲಿದ್ದಾರೆ.

ಜಾಕಿಗಳು: ಇಂಡಿಯನ್ ರೇಸಿಂಗ್ ಸರ್ಕ್ಯೂಟ್‌ನ ಎಲ್ಲಾ ಟಾಪ್ ರೈಡರ್ಸ್‌ಗಳು ಸೇರಿದಂತೆ ಸುಮಾರು 75 ಜಾಕಿಗಳು ಮೈಸೂರು ರೇಸ್‌ನಲ್ಲಿ ಭಾಗವಹಿಸಲಿದ್ದಾರೆ.


ಟೋಟಲಿಸೇಟರ್ಸ್: ಮೇಲ್ದರ್ಜೆಗೇರಿಸಿದ ಸಾಫ್ಟ್‌ವೇರ್‌ನೊಂದಿಗೆ ಹೆಚ್ಚುವರಿ ಬೆಟ್ಟಿಂಗ್ ಟರ್ಮಿನಲ್ಸ್‌ಗಳು ಕಾರ್ಯನಿರ್ವಹಿಸಲಿವೆ.

ಪ್ರವೇಶ ದರ: ಈ ಬಾರಿಯ ಬೆಟ್‌ವೇ ಮಾನ್ಸೂನ್ ರೇಸುಗಳನ್ನು ವೀಕ್ಷಿಸಲು ಸಾರ್ವಜನಿಕರಿಗೆ ಪ್ರವೇಶ ದರ ರೂ. 200 ನಿಗದಿಪಡಿಸಲಾಗಿದ್ದು, ಇತರ ರೇಸುಗಳ ದಿನದಲ್ಲಿ ಪ್ರವೇಶ ದರ 100 ರೂ. ನಿಗದಿಪಡಿಸಲಾಗಿದೆ.

ಸಾಮಾಜಿಕ ಜಾಲತಾಣ: ಮೈಸೂರು ರೇಸ್ ಕ್ಲಬ್ ಲಿಮಿಟೆಡ್ ಫೇಸ್‌ಬುಕ್, ವೆಬ್‌ಸೈಟ್ www.mysorerace club.com ಹೊಂದಿದೆ. ಲೈವ್ ರೇಸುಗಳನ್ನು ಕ್ಲಬ್‌ನ ವೆಬ್‌ಸೈಟ್‌ಗೆ ಲಾಗಿನ್ ಆಗಿ ವೀಕ್ಷಿಸಬಹುದು ಎಂದು ಮೈಸೂರು ರೇಸ್ ಕ್ಲಬ್ ಲಿಮಿಟೆಡ್‌ನ ಛೇರ್ಮನ್ ಮತ್ತು ಹಿರಿಯ ಸ್ಟೀವರ್ಡ್ ವೈ.ಬಿ.ಗಣೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೃಷಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕೆಂದು ಸರ್ಕಾರಕ್ಕೆ ಅರ್ಥಶಾಸ್ತ್ರಜ್ಞರು ಮನವರಿಕೆ ಮಾಡಿಕೊಡಬೇಕು

● ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಶಶಿಧರ್ ಪ್ರಸಾದ್ ● ಮೈಸೂರು ವಿವಿಯ ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಪ್ರೊ.ಗೋಪಾಲಪ್ಪರಿಗೆ ಅಭಿನಂದನೆ



ಮೈಸೂರಿನ ಮಾನಸಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಪ್ರೊ.ಡಿ.ವಿ.ಗೋಪಾಲಪ್ಪ ಅವರ ಅಭಿನಂದನಾ ಸಂಚಿಕೆಯಾದ 'ಡೈನಾಮಿಕ್ಸ್ ಆಫ್ ರೂರಲ್ ಡೆವಲಪ್‌ಮೆಂಟ್ ಇನ್ ಇಂಡಿಯಾ' ಅನ್ನು ಬಿಡುಗಡೆ ಮಾಡಲಾಯಿತು.

ಮೈಸೂರು,ಆ.31(ಪಿಎಂ)– ಸಮರ್ಪಕ ರೀತಿಯಲ್ಲಿ ಉತ್ತೇಜನ ನೀಡದ ಹಿನ್ನೆಲೆಯಲ್ಲಿ ದೇಶದ ಕೃಷಿ ವಲಯದಲ್ಲಿ ಉತ್ಪಾದನೆ ಇಳಿಮುಖವಾಗುತ್ತಿದೆ. ಹಾಗಾಗಿ ನಗರಾಭಿವೃದ್ಧಿಗಿಂತಲೂ ಹೆಚ್ಚಿನ ಪ್ರಾಮುಖ್ಯತೆಯನ್ನು ಕೃಷಿಗೆ ನೀಡುವಂತೆ ಸರ್ಕಾರಗಳಿಗೆ ಅರ್ಥಶಾಸ್ತ್ರಜ್ಞರು ಮನವರಿಕೆ ಮಾಡಿಕೊಡಬೇಕು ಎಂದು ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಜೆ.ಶಶಿಧರ್ ಪ್ರಸಾದ್ ಹೇಳಿದರು.

ಮೈಸೂರಿನ ಮಾನಸ ಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಮೈಸೂರು ವಿವಿಯ ಅರ್ಥಶಾಸ್ತ್ರ ಮತ್ತು ಸಹಕಾರ ವಿಭಾಗದ ವತಿಯಿಂದ ವಿಭಾಗದ ಪ್ರಾಧ್ಯಾಪಕ ಪ್ರೊ.ಡಿ.ವಿ.ಗೋಪಾಲಪ್ಪ ಅವರ ನಿವೃತ್ತಿ ಹಿನ್ನೆಲೆಯಲ್ಲಿ ಗುರುವಾರ ಹಮ್ಮಿಕೊಂಡಿದ್ದ ಅವರ ಅಭಿನಂದನಾ ಸಮಾರಂಭ ಹಾಗೂ 'ಡೈನಾಮಿಕ್ಸ್ ಆಫ್ ರೂರಲ್ ಡೆವಲಪ್‌ಮೆಂಟ್ ಇನ್ ಇಂಡಿಯಾ' ಶೀರ್ಷಿಕೆಯ ಅಭಿನಂದನಾ ಸಂಚಿಕೆ ಬಿಡುಗಡೆ ಸಮಾರಂಭ ಉದ್ಘಾಟಿಸಿ, ಅವರು ಮಾತನಾಡಿದರು.

ಗ್ರಾಮೀಣಾಭಿವೃದ್ಧಿ ಮತ್ತು ಕೃಷಿ ವಲಯಕ್ಕೆ ಹೆಚ್ಚಿನ ಉತ್ತೇಜನ ನೀಡುವುದು ದೇಶದ ಹಿತದೃಷ್ಟಿಯಿಂದ ಅಗತ್ಯವಾಗಿದೆ. ಆದರೆ ನಮ್ಮಲ್ಲಿ ಹೆಚ್ಚಿನ ಪ್ರೋತ್ಸಾಹ ದೊರೆಯುತ್ತಿಲ್ಲ. ಪ್ರೊ.ಸ್ವಾಮಿನಾಥನ್ ಭಾರತೀಯ ಕೃಷಿ ಕ್ರಾಂತಿಯ ಪಿತಾಮಹ ಎಂದು ಹೆಸರಾಗಿದ್ದಾರೆ. ಕೃಷಿ ಕ್ಷೇತ್ರದ ಅಭಿವೃದ್ಧಿ ಶ್ರಮಿಸಿದ ಅವರಿಗೆ ಭಾರತ ರತ್ನ ಪುರಸ್ಕಾರ ನೀಡದಿರುವುದು ಬೇಸರದ ಸಂಗತಿ ಎಂದು ವಿಷಾದಿಸಿದರು.

ಪರಿಶ್ರಮದಿಂದ ಯಶಸ್ಸು ಎಂಬುದಕ್ಕೆ ಚಂದ್ರಯಾನ–3 ನಿದರ್ಶನ

ಮೈಸೂರು,ಆ.31(ಪಿಎಂ)–ತಮ್ಮ ಪರಿಶ್ರಮದಿಂದ ಭಾರತೀಯರು ಯಶಸ್ವಿಯಾಗುತ್ತಾರೆ ಎಂಬುದಕ್ಕೆ ಇಸ್ರೋದ ಯಶಸ್ವಿ 'ಚಂದ್ರಯಾನ–3' ಒಂದು ಉತ್ತಮ ನಿದರ್ಶನ ಎಂದು ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಜೆ.ಶಶಿಧರ್ ಪ್ರಸಾದ್ ಹೇಳಿದರು.

ಭಾರತದ ಪ್ರತಿಭಾನ್ವಿತರು ಅಮೆರಿಕದ ಉನ್ನತ ಹುದ್ದೆಗಳನ್ನು ಅಲಂಕರಿಸಿ ದೇಶ ತೊರೆದಿದ್ದಾರೆ. ಅಲ್ಲಿನ ಐಟಿ ಕ್ಷೇತ್ರ, ಗೂಗಲ್ ಸೇರಿದಂತೆ ಮೊದಲಾದ ಪ್ರತಿಷ್ಠಿತ ಕಂಪನಿಗಳಲ್ಲಿ ದೊಡ್ಡ ಸ್ಥಾನಮಾನ ಹೊಂದಿದ್ದಾರೆ. ಆದರೆ ಇಂತಹ ಅವಕಾಶದಿಂದ ವಂಚಿತರಾದ ಪ್ರತಿಭಾನ್ವಿತರು ದೇಶದಲ್ಲೇ ಉಳಿದು ಇಂದಿನ ಚಂದ್ರಯಾನದ ಯಶಸ್ಸು ಗಳಿಸುವಲ್ಲಿ ತಮ್ಮ ಕೌಶಲ್ಯ ಮೆರೆದಿದ್ದಾರೆ. ಅದಕ್ಕೆ ಅವರ ನಿರಂತರ ಪರಿಶ್ರಮ ಕಾರಣ ಎಂದರು.

ರಾಕೆಟ್ ಉಡಾವಣೆಗೆ ಕ್ರಯೋಜೆನಿಕ್ ಎಂಜಿನ್ ತಂತ್ರಜ್ಞಾನವನ್ನು ಅಮೆರಿಕ, ರಷ್ಯಾ ನೀಡಲಿಲ್ಲ. ಆಗ ಇಸ್ರೋ ವಿಜ್ಞಾನಿಗಳು ಎಂಜಿನ್ ಅನ್ನು ದೇಶೀಯವಾಗಿ ಸಿದ್ಧಪಡಿಸಿದರು. ಇಂದು 'ಇಸ್ರೋ' ಬಾಹ್ಯಾಕಾಶ ಕ್ಷೇತ್ರದಲ್ಲಿ ಬೃಹತ್ ಆಗಿ ಬೆಳೆದಿದ್ದು, ಇದಕ್ಕೆ ವಿಜ್ಞಾನಿಗಳಾದ ವಿಕ್ರಂ ಸಾರಾಬಾಯ್, ಸತೀಶ್ ಧವನ್ ಅವರ ಕೊಡುಗೆ ಅಪಾರ ಎಂದು ಮೈವಿವಿ ವಿಶ್ರಾಂತ ಕುಲಪತಿ ಪ್ರೊ. ಜೆ.ಶಶಿಧರ್ ಪ್ರಸಾದ್ ಸ್ಮರಿಸಿದರು.

ಪ್ರೊ.ಡಿ.ವಿ.ಗೋಪಾಲಪ್ಪ ಅವರು ಹೆಚ್ಚಿನ ಕೆಲಸವನ್ನು ಗ್ರಾಮೀಣ ಅಭಿವೃದ್ಧಿ ಹಾಗೂ ಗ್ರಾಮೀಣ ತಂತ್ರಜ್ಞಾನದಲ್ಲಿ ಮಾಡಿದ್ದಾರೆ. ಅವರೀಗ ನಿವೃತ್ತಿಯಾಗುತ್ತಿದ್ದು, ಇನ್ನು ಮುಂದೆಯೂ ಅವರು ತಮ್ಮ ಕ್ಷೇತ್ರದ ಅಧ್ಯಯನದಲ್ಲಿ ಸಕ್ರಿಯವಾಗಿರಬೇಕು. ಜೊತೆಗೆ ಯುವ ಪೀಳಿಗೆಗೆ ಸೂಕ್ತ ಮಾರ್ಗದರ್ಶನ ನೀಡಬೇಕು ಎಂದು ಸಲಹೆ ನೀಡಿದರು.

ನಮ್ಮ ತಂದೆ (ದೇಜಗೌ) 102 ವರ್ಷಗಳಾದರೂ ಸಕ್ರಿಯವಾಗಿದ್ದರು. ಅವರು ನಿಧನವಾಗುವ ಎರಡು ತಿಂಗಳ ಮೊದಲು ವಿವಿಯ ಸಭೆಯೊಂದಕ್ಕೆ ಹಾಜರಿದ್ದರು. ನಿವೃತ್ತಿ ನಂತರವೂ ನಮ್ಮ ಪರಿಣಿತಿಯನ್ನು ಯುವ ಪೀಳಿಗೆಗೆ ಬಳಸಬೇಕು. ಅದನ್ನೇ ನಾನು ಮಾಡುತ್ತಿದ್ದು, ಈಗಲೂ ವಿದ್ಯಾರ್ಥಿಗಳೊಂದಿಗೆ ಚರ್ಚೆ ನಡೆಸುತ್ತೇನೆ. ಅಗತ್ಯ ಮಾರ್ಗದರ್ಶನವನ್ನೂ ನೀಡುತ್ತೇನೆ ಎಂದು ಶಶಿಧರ್ ಪ್ರಸಾದ್ ತಿಳಿಸಿದರು.

ಅಗತ್ಯಕ್ಕಿಂತ ಹೆಚ್ಚು ಬೋಧಕೇತರರು: ಮೈಸೂರು ವಿಶ್ವವಿದ್ಯಾಲಯದಲ್ಲಿ ಅಗತ್ಯಕ್ಕಿಂತ ಹೆಚ್ಚಿನ ಬೋಧಕೇತರ ಸಿಬ್ಬಂದಿ ನೇಮಕಾತಿ ಮಾಡಿಕೊಳ್ಳಲಾಗಿದೆ. 1,400ಕ್ಕೂ ಹೆಚ್ಚು ಬೋಧಕೇತರ ಸಿಬ್ಬಂದಿ ಇದ್ದಾರೆ. ಆದರೆ ಅಗತ್ಯಕ್ಕೆ ಅನುಗುಣವಾಗಿ ಅಧ್ಯಾಪಕರು ಇಲ್ಲ. ಅತಿಥಿ ಉಪನ್ಯಾಸಕರಿಂದಲೇ ವಿಶ್ವವಿದ್ಯಾಲಯವನ್ನು ನಡೆಸಲಾಗದು. ಹಾಗಾಗಿ ಖಾಯಂ ನೇಮಕಾತಿ ನಡೆಯಬೇಕು. ವಿಶ್ವವಿದ್ಯಾಲಯದಲ್ಲಿ ಗುಣಮಟ್ಟದ ಕಲಿಕೆಯು ವಿದ್ಯಾರ್ಥಿಗಳಿಗೆ ದೊರೆಯಬೇಕೆಂದು ನನ್ನ ಅವಧಿಯಲ್ಲಿ ಪ್ರತಿಭೆ ಆಧಾರದಲ್ಲಿ ಪ್ರಾಧ್ಯಾಪಕರ ನೇಮಕಾತಿ ನಡೆಸಲಾಯಿತು. ಸಚಿವರ ಶಿಫಾರಸು, ಪ್ರಭಾವವನ್ನು ಬಳಸಿ ಬಂದವರಿಗೆ ಮನ್ನಣೆ ನೀಡಲಿಲ್ಲ. ಅಂದು ರಾಜ್ಯದ ಬಹುತೇಕ ವಿಶ್ವವಿದ್ಯಾಲಯಗಳಲ್ಲಿ ಎರಡು ದಶಕದಿಂದ ಯಾವುದೇ ನೇಮಕಾತಿ ನಡೆದಿರಲಿಲ್ಲ ಎಂದು ತಿಳಿಸಿದರು.

ನಾನು ಕುಲಪತಿಯಾಗಿದ್ದಾಗ ಮೈಸೂರು ವಿವಿಯಲ್ಲಿ ಶೈಕ್ಷಣಿಕ ಪರಿಶೋಧನಾ ಸಮಿತಿಯನ್ನು ರಚಿಸಲಾಯಿತು. ಏಷ್ಯಾದಲ್ಲಿ ಇಂತಹ ಸಮಿತಿ ರಚಿಸಿದ ಎರಡನೇ ವಿಶ್ವವಿದ್ಯಾಲಯವೆಂಬ ಹೆಗ್ಗಳಿಕೆಯು ಮೈಸೂರು ವಿವಿಗೆ ದಕ್ಕಿತು. ಅದರಿಂದ ವಿಶ್ವವಿದ್ಯಾಲಯದ ಗುಣಮಟ್ಟ ಹೆಚ್ಚಾಯಿತು ಎಂದರು.

ಇದೇ ಸಂದರ್ಭದಲ್ಲಿ ಪ್ರೊ.ಡಿ.ವಿ. ಗೋಪಾಲಪ್ಪ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು. ವಿಜಯನಗರ ಶ್ರೀ ಕೃಷ್ಣದೇವರಾಯ ವಿವಿ ವಿಶ್ರಾಂತ ಕುಲಪತಿ ಪ್ರೊ.ಮಂಜಪ್ಪ ಡಿ.ಹೊಸಮನೆ, ಮೈಸೂರು ವಿವಿ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ.ಎಂ.ಮಹೇಶ, ಪ್ರಾಧ್ಯಾಪಕಿ ಪ್ರೊ.ನವಿತಾ ತಿಮ್ಮಯ್ಯ, ಮೈಸೂರು ವಿವಿ ಸಂಜೆ ಕಾಲೇಜು ಎನ್‌ಎಸ್‌ಎಸ್ ಅಧಿಕಾರಿ ಡಾ.ಆರ್.ನಿಂಗರಾಜು ಸೇರಿದಂತೆ ಮತ್ತಿತರರು ಹಾಜರಿದ್ದರು.

ಮುಂದಿನ ಪೀಳಿಗೆಗಾಗಿ ಪಾರಂಪರಿಕ ಸ್ಮಾರಕಗಳ ರಕ್ಷಣೆ ಅಗತ್ಯ



ಮೈಸೂರು, ಆ.31(ಜಿಎ)–ಪ್ರಾಚೀನ ಕಾಲದಲ್ಲಿ ನಿರ್ಮಾಣವಾದ ದೇವಾಲಯಗಳು, ಸ್ಮಾರಕಗಳು, ಗುಡಿ, ಕೆರೆ, ಕಟ್ಟೆಗಳು, ಮಸೀದಿಗಳು ನಮ್ಮ ದೇಶದ ಪರಂಪರೆ ಮತ್ತು ಸಂಸ್ಕೃತಿಯ ಪ್ರತೀಕವಾಗಿದೆ. ಇವುಗಳನ್ನು ಮುಂದಿನ ಪೀಳಿಗೆಗೆ ಉಳಿಸಬೇಕಾದದ್ದು ಪ್ರತಿಯೊಬ್ಬ ನಾಗರಿಕರ ಆದ್ಯ ಕರ್ತವ್ಯವಾಗಿದೆ ಎಂದು ಪುರಾತತ್ವ, ವಸ್ತುಸಂಗ್ರಹಾಲಯ ಮತ್ತು ಪರಂಪರೆ ಇಲಾಖೆಯ ಆಯುಕ್ತರಾದ ದೇವರಾಜು ಅಭಿಪ್ರಾಯಪಟ್ಟರು.

ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ವತಿಯಿಂದ ಕಾಲೇಜು ಮಟ್ಟದ ವಿದ್ಯಾರ್ಥಿಗಳಿಗೆ ಇತಿಹಾಸದ ಅರಿವನ್ನು ಮೂಡಿಸುವ ಸಂಬಂಧ 'ಅಮೂರ್ತ ಮತ್ತು ನೈಸರ್ಗಿಕ ಪರಂಪರೆ' ಕುರಿತು ಏರ್ಪಡಿಸಿದ್ದ ವಿಶೇಷ ಉಪನ್ಯಾಸವನ್ನು ಉದ್ಘಾಟಿಸಿ ಮಾತನಾಡಿದರು.

ಹೊಸತನದ ಆವೇಶದಲ್ಲಿ ಪ್ರಾಚೀನ ಸ್ಮಾರಕ, ಕಟ್ಟಡ ಅವಶೇಷಗಳನ್ನು ನಾಶವಾಗಲು ಬಿಡಬಾರದು. ಹಿಂದಿನ ಇತಿಹಾಸ ಗೊತ್ತಿಲ್ಲದೆ ಭವಿಷ್ಯವನ್ನು ನಿರ್ಮಾಣ ಮಾಡಲು ಸಾಧ್ಯವಿಲ್ಲ. ಪುರಾತನ ಜ್ಞಾನದ ಪ್ರಜ್ಞೆ ಪ್ರತಿಯೊಬ್ಬರಿಗೂ ಇರಬೇಕು ಎಂಬ ಉದ್ದೇಶದಿಂದ ಪ್ರಾಚೀನ ಸ್ಮಾರಕಗಳನ್ನು ಉಳಿಸಲು ಪುರಾತತ್ವ ಇಲಾಖೆ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸುತ್ತ ಬಂದಿದೆ. ಇದು ದೇವಾಲಯ ಹಾಗೂ ದೇಶದಲ್ಲಿನ ಸಾಂಸ್ಕೃತಿಕ, ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆಗೆ ಕಾರಣವಾಗಿದೆ ಎಂದರು.

ಮನುಷ್ಯ ನಡೆದು ಬಂದಿರುವ ಬದುಕು, ಆಚಾರ, ವಿಚಾರ, ಇದೆಲ್ಲವೂ ಪರಂಪರೆಯೇ ಆಗಿದೆ. ಇಂದಿನ ಪೀಳಿಗೆಗೆ ಪರಂಪರೆ ಮಹತ್ವದ ಬಗ್ಗೆ ತಿಳಿಸಿದರೆ, ಸ್ಮಾರಕಗಳು ಹಾಗೂ ಅನೇಕ ಶಿಥಿಲಾವಸ್ಥೆಯಲ್ಲಿರುವ ದೇವಾಲಯಗಳನ್ನು ಸಂರಕ್ಷಣೆ ಮಾಡಬಹುದು ಎಂದರು.

ಪ್ರವಾಸೋದ್ಯಮ ದೃಷ್ಟಿಯಿಂದ ಕೂಡ ನಾವು ನಮ್ಮ ಇತಿಹಾಸ ಹಾಗೂ ದೇವಾಲಯಗಳನ್ನು ರಕ್ಷಿಸಿ ಉಳಿಸಬೇಕು. ಈ ಮೂಲಕ ವಿದೇಶಿ ಪ್ರವಾಸಿಗರನ್ನು ನಮ್ಮ ರಾಜ್ಯದತ್ತ ಸೆಳೆಯಬೇಕಿದೆ ಎಂದರು.

ಸಾಮಾನ್ಯವಾಗಿ ಸರ್ಕಾರಿ ಇಲಾಖೆಯಲ್ಲಿ ಅನುದಾನ ಇಲ್ಲದಿದ್ದರೆ ಕೆಲಸ ಆಗುವುದಿಲ್ಲ ಎಂಬ ಮಾತಿದೆ. ಆದರೆ ಪುರಾತತ್ವ ಇಲಾಖೆಯಲ್ಲಿ ಅನುದಾನ ಇಲ್ಲದೆಯೇ ನಾವು ಸಾರ್ವಜನಿಕರನ್ನು ತಲುಪಬಹುದು. ಇದರಲ್ಲಿ ಪುರಾತತ್ವ ಇಲಾಖೆಯು ಮೈಲಿಗಲ್ಲು ಸಾಧಿಸಿದೆ ಎಂದು ಹೇಳಿದರು.

ಈ ವೇಳೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಶೆಲ್ವಪಿಳ್ಳೈ ಅಯ್ಯಂಗಾರ್ ಅವರು ಮೇಲುಕೋಟೆ ಮತ್ತು ತೊಣ್ಣೂರುಕೆರೆ ಇತಿಹಾಸದ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಪುರಾತತ್ವ ಇಲಾಖೆ ಉಪ ನಿರ್ದೇಶಕಿ ಕೆ.ಎನ್.ಮಂಜುಳಾ, ಮೈಸೂರು ವಿವಿಯ ಪುರಾತತ್ವ ವಿಭಾಗದ ಶಶಿಕುಮಾರ್ ಉಪಸ್ಥಿತರಿದ್ದರು.

ಮನಿಲ್ ರಾಜ್‌ಗೆ ಪಿಹೆಚ್.ಡಿ ಪದವಿ



ಚಾಮರಾಜನಗರ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನ ಮೆಕ್ಯಾನಿಕಲ್ ವಿಭಾಗದ ಪ್ರಾಧ್ಯಾಪಕ ಮನಿಲ್ ರಾಜ್ ಅವರು ಪ್ರೊ ಎಂ.ಜೆ.ಎನ್.ವಿ. ಪ್ರಸಾದ್ ಹಾಗೂ ಪ್ರೊ ಕೆ.ನರಸಿಂಹನ್ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಮಂಡಿಸಿದ ಪ್ರಬಂಧವನ್ನು ಬಾಂಬೆ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಪಿಹೆಚ್.ಡಿ ಪದವಿಗೆ ಅಂಗೀಕರಿಸಿ ಅವರಿಗೆ ಪದವಿ ಪ್ರದಾನ ಮಾಡಲಾಯಿತು. ಇವರು ಟೆಲಿಫೋನ್ ಸೂಪರ್‌ವೈಸರ್ ಕೆ.ಆರ್.ರಾಚಯ್ಯ ಮತ್ತು ಮರಿಮಲ್ಲಪ್ಪ ಕಾಲೇಜಿನ ನೌಕರರಾದ ಶ್ರೀಮತಿ ಮಂಜುಳಾ ಕುಮಾರಿ ಪುತ್ರ

ಮೈಸೂರಲ್ಲಿ ಸುರಕ್ಷಾ ಸ್ವರಕ್ಷಾ-ವೃಕ್ಷ ರಕ್ಷಾ ಬಂಧನ ಕಾರ್ಯಕ್ರಮ

ವೃಕ್ಷಗಳ ಸಂರಕ್ಷಣೆಗೆ ಶಾಲಾ ವಿದ್ಯಾರ್ಥಿಗಳಲ್ಲಿ ಜಾಗೃತಿ



ಮೈಸೂರು,ಆ.31(ಪಿಎಂ)– ಅಪ್ನಾದೇಶ್ ಮೈಸೂರು ಘಟಕ ಮತ್ತು ಜಿಎಸ್‌ಎಸ್ ಫೌಂಡೇಷನ್ ಜಂಟಿ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಸುರಕ್ಷಾ ಸ್ವರಕ್ಷಾ–ವೃಕ್ಷ ರಕ್ಷಾಬಂಧನ ಕಾರ್ಯಕ್ರಮದಲ್ಲಿ ಶಾಲಾ ಮಕ್ಕಳಿಗೆ ವೃಕ್ಷಗಳನ್ನು ವಿತರಿಸಿ ವೃಕ್ಷಗಳ ರಕ್ಷಣೆ, ಪಾಲನೆ, ಪೋಷಣೆಯ ಮಹತ್ವವನ್ನು ತಿಳಿಸಿಕೊಡಲಾಯಿತು.

ಎರಡು ಶಾಲೆಗಳಲ್ಲಿ ಈ ವಿನೂತನ ಕಾರ್ಯಕ್ರಮ ನಡೆಸಿ ಶಾಲಾ ಮಕ್ಕಳಲ್ಲಿ ಪರಿಸರದ ಪ್ರಜ್ಞೆ ಮೂಡಿಸಲಾಯಿತು. ವಿಜಯ ವಿಠ್ಠಲ ವಿದ್ಯಾಶಾಲೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಪ್ನಾದೇಶ್ ಮೈಸೂರು ಸಂಘಟನೆ ಕಾರ್ಯದರ್ಶಿ ಜಿ.ಎಸ್.ಗಣೇಶ್ ಮಾತನಾಡಿ, ರಕ್ಷಾ ಬಂಧನದ ಮಹತ್ವ, ಹಿನ್ನೆಲೆ, ಇತಿಹಾಸ ತಿಳಿಸಿದರಲ್ಲದೆ, ವೃಕ್ಷ ರಕ್ಷಣೆ ಮತ್ತು ಪರಿಸರ ರಕ್ಷಣೆಯಲ್ಲಿ ಮಕ್ಕಳು ತೊಡಗಿಸಿಕೊಳ್ಳಬೇಕು. ಜೊತೆಗೆ ಪ್ಲಾಸ್ಟಿಕ್ ಅನ್ನು ಕಾಲಕ್ರಮೇಣ ಕಡಿಮೆ ಮಾಡುವ ಮೂಲಕ ಪರಿಸರ ರಕ್ಷಣೆಯಲ್ಲಿ ಕೈಜೋಡಿಸಬೇಕೆಂದು ಸಲಹೆ ನೀಡಿದರು.

ಜಿಎಸ್‌ಎಸ್ ಫೌಂಡೇಷನ್‌ನ ಡಿ.ಶ್ರೀಹರಿ ಮಾತನಾಡಿ, ಇಂದು ನಾವು ವೃಕ್ಷಗಳನ್ನು ಪಾಲನೆ, ಪೋಷಣೆ ಮಾಡದಿದ್ದರೆ ಮುಂದಿನ ದಿನಗಳಲ್ಲಿ ತೊಂದರೆ ಅನುಭವಿಸುವವರು ನಾವೇ ಎಂದು ಕಿವಿಮಾತು ಹೇಳಿದರು. ಇದೇ ಸಂದರ್ಭದಲ್ಲಿ 1,500 ವಿದ್ಯಾರ್ಥಿಗಳಿಗೆ ರಕ್ಷೆಯನ್ನು ಕಟ್ಟಿ, ವೃಕ್ಷಗಳನ್ನು ವಿತರಿಸಲಾಯಿತು. ವಿಜಯ ವಿಠ್ಠಲ ಪಿಯು ಕಾಲೇಜು ಪ್ರಾಂಶುಪಾಲ ಸತ್ಯಪ್ರಸಾದ್, ಶಾಲೆಯ ಪ್ರಾಂಶುಪಾಲರಾದ ವೀಣಾ, ಮುಖಂಡರಾದ ಶ್ರೀನಿವಾಸ್ ಭಾರದ್ವಾಜ್, ರೂಪಶ್ರೀ, ನಿತಿನ್ ಮತ್ತಿತರರು ಹಾಜರಿದ್ದರು.

ಬಳಿಕ ಮೈಸೂರಿನ ದಟ್ಟಗಳ್ಳಿಯಲ್ಲಿರುವ ಶಾರದಾ ಪಬ್ಲಿಕ್ ಶಾಲೆಯಲ್ಲಿಯೂ ಇದೇ ರೀತಿ ಕಾರ್ಯಕ್ರಮ ನಡೆಸಿ, 850 ವಿದ್ಯಾರ್ಥಿಗಳಿಗೆ ರಕ್ಷೆಯನ್ನು ಕಟ್ಟಿ, ವೃಕ್ಷಗಳನ್ನು ವಿತರಿಸಲಾಯಿತು.

ಈ ವೇಳೆ ಶಾಲೆ ಕಾರ್ಯದರ್ಶಿ ಮಂಜುನಾಥ್ ಶ್ರೀವತ್ಸ, ಕ್ರೆಡಾಯ್ ಮೈಸೂರು ಕಾರ್ಯದರ್ಶಿ ಎಲ್. ಅರುಣ್ ಪಂಡಿತ್, ಮುಖಂಡರಾದ ಕಾರ್ತಿ ಶ್ರೀರಾಮ್, ಶಾಲೆಯ ಪ್ರಾಂಶುಪಾಲರಾದ ಶಾಲಿನಿ ಮತ್ತಿತರರು ಹಾಜರಿದ್ದರು ಎಂದು ಪ್ರಕಟಣೆ ತಿಳಿಸಿದೆ.


ಮೈಸೂರು–ಚಾಮರಾಜನಗರ ಜಿಲ್ಲಾ ಆರ್ಯ ಈಡಿಗ ಸಂಘ, ಆರ್ಯ ಈಡಿಗ ಯುವ ವೇದಿಕೆ, ನೌಕರರ ಸಂಘ, ಮಹಿಳಾ ಸಂಘದ ಸದಸ್ಯರು ಬಂಬೂಬಜಾರಿನ ಬ್ರಹ್ಮಶ್ರೀ ನಾರಾಯಣಗುರು ರಸ್ತೆ ಹೆಸರನ್ನು ಆಕಾಶವಾಣಿ ತ.ರಾ.ಸು.ವೃತ್ತದವರೆಗೆ ಯಥಾಪ್ರಕಾರ ಉಳಿಸಬೇಕೆಂದು ಬೈಕ್ ರ‍್ಯಾಲಿ ನಡೆಸಿದರು. ಎಂ.ಕೆ.ಪೋತರಾಜ್, ರಾಜಶೇಖರ ಕದಂಬ, ಶ್ರೀಕಾಂತ್, ರಾಜು, ಮುರಳಿ, ಸ್ವಾಮಿ, ಗೋಪಿ ಮತ್ತಿತರರು ಉಪಸ್ಥಿತರಿದ್ದರು.

ಶಿಕ್ಷಕಿ ರತ್ನಮ್ಮಗೆ ನ್ಯಾಷನಲ್ ಫೆಲೋಶಿಪ್ ಪ್ರಶಸ್ತಿ



ಮೈಸೂರು,ಆ.31–ನವದೆಹಲಿಯ ದಲಿತ ಸಾಹಿತ್ಯ ಅಕಾಡೆಮಿ ಕೊಡಮಾಡುವ ಸಾವಿತ್ರಿ ಬಾಫುಲೆ ನ್ಯಾಷನಲ್ ಫೆಲೋಶಿಪ್ ಪ್ರಶಸ್ತಿಗೆ ಮೈಸೂರು ತಾಲೂಕಿನ ಹುಯಿಲಾಳು ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆ ಸಹಶಿಕ್ಷಕಿ ರತ್ನಮ್ಮ ಆಯ್ಕೆಯಾಗಿದ್ದಾರೆ. ಡಿ.10ರಂದು ನವದೆಹಲಿಯಲ್ಲಿ ನಡೆಯಲಿರುವ ಸಾಹಿತ್ಯ ಸಮ್ಮೇಳನದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಶಿಕ್ಷಕಿ ರತ್ನಮ್ಮ ಅವರಿಗೆ ಶಾಲಾ ಶಿಕ್ಷಕ ವೃಂದ, ಎಸ್‌ಡಿಎಂಸಿ ಹಾಗೂ ಗ್ರಾಮದ ಮುಖಂಡರು ಶುಭ ಕೋರಿದ್ದಾರೆ.

ದಸರಾ: ಅನುಭವಿಗಳ ಸಲಹಾ ಸಮಿತಿ ಸಲಹೆ, ಸೂಚನೆ ಪಡೆಯಲು ಒತ್ತಾಯ



ಮೈಸೂರು,ಆ.31(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸುವ ನಿಟ್ಟಿನಲ್ಲಿ ವಿವಿಧ ಕ್ಷೇತ್ರಗಳ ಪ್ರತಿನಿಧಿಗಳನ್ನೊಳಗೊಂಡ 'ಅನುಭವಿಗಳ ಸಲಹಾ ಸಮಿತಿ' ರಚಿಸಿ, ಸಲಹೆ, ಸೂಚನೆ ಪಡೆಯಲು ಸಭೆ ಕರೆಯುವಂತೆ ಇನಿದನಿ ಮಣ್ಣಮಕ್ಕಳ ಹೊನ್ನಪದಗಳ ಬಳಗದ ಗೌರವಾಧ್ಯಕ್ಷ ಡಾ.ಕಾ. ರಾಮೇಶ್ವರಪ್ಪ ಒತ್ತಾಯಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಸರಾ ಮಹೋತ್ಸವವನ್ನು ಮೂಲ ಆಶಯ, ಪಾರಂಪರಿಕ, ಅರ್ಥಪೂರ್ಣ ಹಾಗೂ ಪ್ರಗತಿಪರವಾಗಿ ಆಚರಿಸುವುದಕ್ಕಾಗಿ ಸಲಹಾ ಸಮಿತಿ ರಚನೆ ಅಗತ್ಯವಾಗಿದೆ. ಇದರಿಂದ ಅನುಭವಿ ಮತ್ತು ಆಸಕ್ತರಿಂದ ಸಲಹೆ ಪಡೆಯಬೇಕು. ಪ್ರತಿ ವರ್ಷವೂ ದಸರಾ ಆಚರಣೆಯಲ್ಲಿ ಕೆಲವು ಗೊಂದಲಗಳು ಉಂಟಾಗುತ್ತಿರುತ್ತವೆ. ಇವುಗಳಿಂದ ಅದ್ಧೂರಿ ದಸರಾ ಆಚರಣೆಗೆ ತೊಡಕಾಗುತ್ತದೆ. ಈ ಹಿನ್ನೆಲೆಯಲ್ಲಿ ಸಲಹಾ ಸಮಿತಿ ರಚಿಸಿ, ಸಭೆ ಕರೆದು ಅಭಿಪ್ರಾಯ ಸಂಗ್ರಹಿಸಬೇಕು ಎಂದು ಮನವಿ ಮಾಡಿದರು.

ಈ ಬಾರಿಯ ದಸರಾ ಆಚರಣೆಗಾಗಿ ಚಿಂತಕರು, ಸಾಹಿತಿಗಳು, ಅರಮನೆ ಮಂಡಳಿ ಪ್ರತಿನಿಧಿ, ಹೋಟೇಲ್ ಮಾಲೀಕರು, ಮಾಧ್ಯಮದ ಪ್ರತಿನಿಧಿಗಳು, ಉದ್ಯಮಿಗಳು, ಟ್ರಾವೆಲ್ಸ್ ಅಸೋಸಿಯೇಷನ್, ಕ್ಯಾಬ್ ಚಾಲಕರ ಸಂಘ, ರೈಲ್ವೆ ಅಧಿಕಾರಿಗಳು, ಕಲಾವಿದರು, ಕುಶಲಕರ್ಮಿಗಳು ಹಾಗೂ ಆಸಕ್ತರು ಒಳಗೊಂಡಂತಹ 'ಅನುಭವಿಗಳ ಸಲಹಾ ಸಮಿತಿ' ರಚಿಸಬೇಕು. ಈ ಸಮಿತಿ ಸಭೆಯಲ್ಲಿ ವ್ಯಕ್ತವಾಗುವ ಸಲಹೆ ಹಾಗೂ ಅಭಿಪ್ರಾಯಗಳ ಆಧಾರದ ಮೇಲೆ ದಸರಾ ಆಚರಣೆಯ ರೂಪುರೇಷೆ ಸಿದ್ಧಪಡಿಸಬೇಕು. ಆಗ ಮಾತ್ರ ಮೂಲ ಆಶಯದ ದಸರಾ ಮಹೋತ್ಸವ ಆಚರಿಸಬಹುದು ಎಂದು ಅಭಿಪ್ರಾಯಪಟ್ಟರು.

ಕಳೆದ ಕೆಲ ವರ್ಷಗಳಿಂದ ಜನ ಅಂದುಕೊಂಡ ರೀತಿಯಲ್ಲಿ ದಸರಾ ನಡೆದಿಲ್ಲ. ದಸರೆ ಕೇವಲ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ಸಭೆ ಮೂಲಕ ನಿರ್ಧಾರವಾಗಬಾರದು. ಬದಲಾಗಿ ಅನುಭವಿಗಳು ಮತ್ತು ಆಸಕ್ತರ ಸಲಹೆ ಪಡೆಯಬೇಕು. ದಸರಾ ಆರಂಭಕ್ಕೂ ಮುನ್ನವೇ ಉಪ ಸಮಿತಿಗಳ ರಚನೆ ಆಗಬೇಕು. ಪ್ರೇಕ್ಷಕರ ಕೊರತೆ ಎದುರಾಗುವ ನಿಟ್ಟಿನಲ್ಲಿ ಏಕಕಾಲಕ್ಕೆ ಅಪಾರ ಚಟುವಟಿಕೆ ನಡೆಸಬಾರದು. ಮೈಸೂರು ಅರಸರು ಮತ್ತು ದಸರಾ ಪರಂಪರೆಗಳ ಬಗ್ಗೆ ವಿಚಾರಗೋಷ್ಠಿ ಮತ್ತು ಚರ್ಚೆ ನಡೆಯಬೇಕು. ಸಾಂಸ್ಕೃತಿಕ ಕಾರ್ಯಕ್ರಮಗಳು ವ್ಯವಸ್ಥಿತವಾಗಿ ಪ್ರಸ್ತುತಗೊಳ್ಳುವಂತೆ ಕ್ರಮ ಕೈಗೊಳ್ಳಬೇಕು ಎಂದರು.

ಯುವ ದಸರಾ ಕಾರ್ಯಕ್ರಮದ ಉದ್ದೇಶವೇ ನಾಶ ಮಾಡಲಾಗುತ್ತಿದೆ. ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ, ಯುವಜನರು ಹಾಗೂ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಸಾಂಸ್ಕೃತಿಕ ವಿಷಯ ಹಾಗೂ ದಸರಾ ಮಹತ್ವವನ್ನು ಮನವರಿಕೆ ಮಾಡಿಕೊಡುವ ನಿಟ್ಟಿನಲ್ಲಿ 2003ರಲ್ಲಿ ಯುವ ದಸರಾ ಆರಂಭಿಸಲಾಯಿತು. ಆದರೆ, ಇಂದು ಯುವ ದಸರಾ ಕಾರ್ಯಕ್ರಮ ಮೂಲ ಉದ್ದೇಶ ಕಳೆದುಕೊಂಡಿದೆ. ಕೇವಲ ಬಾಂಬೆ ಆರ್ಕೆಸ್ಟ್ರಾದಂತಹ ಗಾಯನ ಕಾರ್ಯಕ್ರಮಕ್ಕೆ ಸೀಮಿತವಾಗಿದೆ ಎಂದು ಡಾ.ಕಾ.ರಾಮೇಶ್ವರಪ್ಪ ವಿಷಾದಿಸಿದರು.

ಆಹಾರ ಮೇಳಗಳಲ್ಲಿ ಅವ್ಯವಸ್ಥೆವುಂಟಾಗದಂತೆ ನೋಡಿಕೊಳ್ಳಬೇಕು. ಕವಿಗೋಷ್ಠಿ ಜವಾಬ್ದಾರಿ ಕನ್ನಡ ಅಧ್ಯಯನ ಸಂಸ್ಥೆಗೆ ವಹಿಸಬೇಕು. ನಗರ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿಯೂ ದಸರಾ ಆಚರಣೆಗೆ ಪ್ರೋತ್ಸಾಹ ನೀಡಬೇಕು. ಜಂಬೂಸವಾರಿ ಪ್ರಸ್ತುತಿ ವ್ಯವಸ್ಥಿತವಾಗಿರಬೇಕು. ಮೈಸೂರು ಅರಮನೆ ಆವರಣದಲ್ಲಿ ಸಂಗೀತೋತ್ಸವ ಕಾರ್ಯಕ್ರಮ, ಬಲರಾಮ ದ್ವಾರದಲ್ಲಿ ಜನಪದೋತ್ಸವ, ಪುರಭವನದಲ್ಲಿ ನಾಟಕೋತ್ಸವ, ಜಗನ್ಮೋಹನ ಅರಮನೆಯಲ್ಲಿ ಸಂಗೀತ–ನೃತ್ಯ, ಕಲಾಮಂದಿರದಲ್ಲಿ ನೃತ್ಯೋತ್ಸವ ಹಾಗೂ ಇತರೆ ಸಭಾಂಗಣದಲ್ಲಿ ಮಿಶ್ರ ಕಾರ್ಯಕ್ರಮ ನಡೆಸಲು ಕ್ರಮ ಕೈಗೊಳ್ಳುವುದರೊಂದಿಗೆ ದಸರಾ ಪ್ರಾಧಿಕಾರ ರಚಿಸಬೇಕು ಎಂದು ಒತ್ತಾಯಿಸಿದರು.

ಇದೇ ವೇಳೆ ಹೋಟೇಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಮಾತನಾಡಿ, ಶಕ್ತಿ ಯೋಜನೆ ಹಿನ್ನೆಲೆಯಲ್ಲಿ ಈ ಬಾರಿಯ ದಸರಾಕ್ಕೆ ಈ ಹಿಂದಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಜನತೆ ಆಗಮಿಸುವ ಸಾಧ್ಯತೆ ಇದೆ. ಇದರಿಂದ ಜಿಲ್ಲಾಡಳಿತ ಕಲ್ಯಾಣಮಂಟಪ ಹಾಗೂ ಶಾಲಾ ಕಾಲೇಜುಗಳಲ್ಲಿಯೂ ಮೈಸೂರಿಗೆ ಬರುವವರಿಗೆ ವಸತಿ ವ್ಯವಸ್ಥೆ ಕಲ್ಪಿಸಲು ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಸಿ.ಎಂ. ನರಸಿಂಹಮೂರ್ತಿ, ಶ್ರೀನಿವಾಸ್, ರಘುನಾಥ್, ಪಂಡಿತ್ ಗಣೇಶ್‌ಭಟ್ ಇನ್ನಿತರರು ಇದ್ದರು.

ಕೆಆರ್‌ಎಸ್‌ನಿಂದ ತಮಿಳುನಾಡಿಗೆ ನೀರು ಬಿಡುಗಡೆ ಖಂಡಿಸಿ ಮಂಡ್ಯದಲ್ಲಿ

ಜಿಲ್ಲಾ ರೈತ ಹಿತ ರಕ್ಷಣಾ ಸಮಿತಿ ಧರಣಿ



ಮಂಡ್ಯ, ಆ.31– ತಮಿಳುನಾಡಿಗೆ ಪ್ರತಿನಿತ್ಯ ಐದು ಸಾವಿರ ಕ್ಯುಸೆಕ್ ನೀರು ಬಿಡುಗಡೆ ಮಾಡಬೇಕೆಂದು ಕಾವೇರಿ ನದಿ ಪ್ರಾಧಿಕಾರ ಆದೇಶ ಮಾಡಿರುವುದನ್ನು ವಿರೋಧಿಸಿ ಜಿಲ್ಲಾ ರೈತ ರಕ್ಷಣಾ ಸಮಿತಿ ಮಂಡ್ಯದಲ್ಲಿ ಧರಣಿ ಆರಂಭಿಸಿದೆ.

ನಗರದ ಸರ್‌ಎಂವಿ ಪ್ರತಿಮೆ ಎದುರು ಸಮಿತಿಯ ಅಧ್ಯಕ್ಷತೆಯಲ್ಲಿ ಮಾಜಿ ಶಾಸಕರು, ರೈತರು, ಕನ್ನಡ ಪರ ಹೋರಾಟಗಾರರು ಹಾಗೂ ರಾಜಕೀಯ ಪಕ್ಷಗಳ ಕಾರ್ಯಕರ್ತರು ಸೇರಿ ವಿವಿಧ ಸಂಘ–ಸಂಸ್ಥೆಗಳ ಮುಖಂಡರು ಪ್ರತಿಭಟನಾ ಧರಣಿ ನಡೆಸಿದರು. 'ಕಾವೇರಿ ನಮ್ಮದು', 'ರಕ್ತ ಕೊಟ್ಟರೂ ನೀರು ಬಿಡೆವು' ಎಂಬ ಘೋಷ ವಾಕ್ಯದೊಂದಿಗೆ ರಾಜ್ಯ ಕಾಂಗ್ರೆಸ್ ಸರ್ಕಾರ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಎನ್.ಚೆಲುವರಾಯಸ್ವಾಮಿ ವಿರುದ್ಧ ಧಿಕ್ಕಾರದ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಕಾವೇರಿ ನದಿ ನೀರು ಹಂಚಿಕೆ ವಿಚಾರದಲ್ಲಿ ತಮಿಳುನಾಡು ಒತ್ತಡ ತಂತ್ರದ ಹಿನ್ನೆಲೆಯಲ್ಲಿ ಕಾವೇರಿ ನದಿ ನೀರು ಪ್ರಾಧಿಕಾರ ಪ್ರತಿನಿತ್ಯ ಐದು ಸಾವಿರ ಕ್ಯುಸೆಕ್ ನೀರು ಬಿಡುಗಡೆ ಮಾಡಬೇಕೆಂದು ಆದೇಶ ಮಾಡಿರುವುದು ಅವೈಜ್ಞಾನಿಕ, ರಾಜ್ಯ ಸರ್ಕಾರ ಯಾವುದೇ ಕಾರಣಕ್ಕೂ ಜಲಾಶಯಗಳಿಂದ ನೀರು ಬಿಡುಗಡೆ ಮಾಡಬಾರದು ಎಂದು ಒತ್ತಾಯಿಸಿದರು.

ತಮಿಳುನಾಡಿಗೆ ಸತತವಾಗಿ ನೀರು ಹರಿಸಿದ ಪರಿಣಾಮ 113 ಅಡಿ ಇದ್ದ ನೀರು 100 ಅಡಿಗೆ ಕುಸಿದಿದೆ. ರೈತರು ಬೆಳೆದಿರುವ ಬೆಳೆ ರಕ್ಷಣೆಗೆ ನೀರು ಇಲ್ಲದಂತಾಗಿದೆ, ಪ್ರಾಧಿಕಾರದ ಆದೇಶದಂತೆ ಮತ್ತೆ ತಮಿಳುನಾಡಿಗೆ ನೀರು ಬಿಟ್ಟರೆ ಫಸಲು ರಕ್ಷಣೆ ಇರಲಿ ಕುಡಿಯುವ ನೀರು ಕೂಡ ನೀರು ಇರುವುದಿಲ್ಲ ಎಂದು ಆತಂಕ ವ್ಯಕ್ತಪಡಿಸಿದರು.

ಸರ್ಕಾರ ಕಾವೇರಿ ಕೊಳ್ಳದ ಜಲಾಶಯಗಳಿಂದ ನೀರು ಬಿಟ್ಟಿರುವುದರಿಂದ ಮಂಡ್ಯ, ಮೈಸೂರು, ಬೆಂಗಳೂರು ಸೇರಿ ಎಂಟು ನಗರಗಳಿಗೆ ಕುಡಿಯುವ ನೀರಿಗೂ ಹಾಹಾಕಾರ ಎದುರಾಗಲಿದೆ, ತಕ್ಷಣ ಕಾವೇರಿ ನದಿಗೆ ಬಿಟ್ಟಿರುವ ನೀರನ್ನು ನಿಲ್ಲಿಸಬೇಕು ಎಂದು ಒತ್ತಾಯಿಸಿದರು.

ಕರ್ನಾಟಕ ಸರ್ಕಾರ ತಮಿಳುನಾಡಿಗೆ ನೀರು ಬಿಡದ ಪ್ರಾಧಿಕಾರ ಮತ್ತು ಸುಪ್ರೀಂ ಕೋರ್ಟ್‌ಗೆ ವಾಸ್ತವ ಸ್ಥಿತಿ ಮನವರಿಕೆ ಮಾಡಿಕೊಡಲು ಮುಂದಾಗಬೇಕಿತ್ತು. ನೀರು ಬಿಟ್ಟ ಪರಿಣಾಮ ಮತ್ತು ಈಗಲೂ ನೀರು ಹರಿಸುತ್ತಿರುವ ಹಿನ್ನೆಲೆಯಲ್ಲಿ ಕೆಆರ್‌ಎಸ್ ಜಲಾಶಯದಲ್ಲಿ ನೀರಿನ ಪ್ರಮಾಣ ಕುಸಿತ ಕಾಣುತ್ತಿದೆ ಎಂದರು.

ಕಾವೇರಿ ನದಿ ನೀರು ವಿಚಾರದಲ್ಲಿ ಕೇಂದ್ರ ಸರ್ಕಾರ ನಿರಂತರವಾಗಿ ಮಲತಾಯಿ ಧೋರಣೆ ಅನುಸರಿಸುತ್ತಾ ಬಂದಿದೆ, ಸಂಕಷ್ಟ ಬಂದಾಗ ಮಧ್ಯ ಪ್ರವೇಶಿಸಿ ಸಂಕಷ್ಟ ಸೂತ್ರ ಪಾಲಿಸಲು ಸೂಚನೆ ನೀಡುವುದಿಲ್ಲ, ಬದಲಾಗಿ ರಾಜ್ಯ ರಾಜ್ಯಗಳ ನಡುವೆ ಸಂಘರ್ಷ ಉಂಟುಮಾಡುತ್ತಿದೆ ಎಂದು ಕಿಡಿಕಾರಿದರು. ಮೇಕೆದಾಟು ಯೋಜನೆಗೆ ಅಡ್ಡಿಪಡಿಸುವ ತಮಿಳುನಾಡು ಸರ್ಕಾರ ಕಾವೇರಿ ಜಲಾನಯನ ಪ್ರದೇಶದಲ್ಲಿ ನದಿ ಜೋಡಣೆ ಸೇರಿದಂತೆ ಹಲವು ನೀರಾವರಿ ಯೋಜನೆಗಳನ್ನು ಜಾರಿ ಮಾಡುತ್ತಿದೆ, ಕಾವೇರಿ ನದಿ ನೀರಿನ ಬಹು ಪಾಲನ್ನು ಪಡೆಯಲು ಒತ್ತಡ ತಂತ್ರ ಅನುಸರಿಸಿ ಕರ್ನಾಟಕ ವಿರೋಧಿ ಧೋರಣೆ ಮಾಡುತ್ತಿದೆ ಎಂದು ಆರೋಪಿಸಿದರು.

ಕಾವೇರಿ ನದಿ ಪಾತ್ರದಲ್ಲಿನ ವಾಸ್ತವ ಪರಿಸ್ಥಿತಿ ಅರಿಯಲು ಮತ್ತು ಜಲಾಶಯಗಳಲ್ಲಿ ಇರುವ ನೀರಿನ ಲಭ್ಯತೆ ಬಗ್ಗೆ ಪರಿಶೀಲಿಸಲು ಕೇಂದ್ರ ಸರ್ಕಾರ ನೀರಾವರಿ ತಜ್ಞರ ತಂಡವನ್ನು ಕರ್ನಾಟಕಕ್ಕೆ ಕಳುಹಿಸಿಕೊಡುವ ಮೂಲಕ ವಾಸ್ತವ ಸ್ಥಿತಿ ಅರಿಯಲು ಮುಂದಾಗಬೇಕು ಎಂದು ಒತ್ತಾಯಿಸಿದರು.

ಮಾಜಿ ಸಚಿವ ಎಂ. ಎಸ್. ಆತ್ಮಾನಂದ, ಮಾಜಿ ಶಾಸಕರಾದ ಜಿ.ಬಿ. ಶಿವಕುಮಾರ್, ಕೆ.ಟಿ. ಶ್ರೀಕಂಠೇಗೌಡ, ಮುಖಂಡರಾದ ಸುನಂದಾ ಜಯರಾಂ, ಬೇಕ್ರಿ ರಮೇಶ್, ಗುರುಪ್ರಸಾದ್ ಕೆರಗೋಡು, ಪ್ರಶಾಂತ ಬಾಬು, ಕೆ ಬೋರಯ್ಯ, ಅಂಬುಜಮ್ಮ, ಸಿದ್ದರಾಮೇಗೌಡ, ಬಿ.ಸಿ.ಶಿವಾನಂದ, ಅಂದಾನಿ ಸೋಮನಹಳ್ಳಿ, ಕನ್ನಡ ಸೇನೆ ಮಂಜುನಾಥ್, ಜಯ ಕರ್ನಾಟಕ ಯೋಗಣ್ಣ, ರೈತ ಸಂಘದ ಇಂಡುವಾಳು ಚಂದ್ರಶೇಖರ್, ಸಿ.ಎಂ. ದ್ಯಾವಪ್ಪ, ಎಂ.ಬಿ. ರಮೇಶ್, ಎಸ್.ಕೆ.ಮೊಳ್ಳೆ ಗೌಡ, ಎಂ.ಎಲ್. ತುಳಸೀಧರ್, ಇಂಡುವಾಳು ಬಸವರಾಜ್ ಇತರರು ಭಾಗವಹಿಸಿದ್ದರು.

ಜಯ ಕರ್ನಾಟಕದಿಂದ ರಸ್ತೆ ತಡೆಗೆ ಯತ್ನ

ಮಂಡ್ಯ: ತಮಿಳುನಾಡಿಗೆ ನೀರು ಬಿಡಲು ಆದೇಶಿಸಿರುವ ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರದ ವಿರುದ್ಧ ಮಂಡ್ಯ ಜಿಲ್ಲಾ ರೈತರ ಹಿತರಕ್ಷಣಾ ಸಮಿತಿ ಧರಣಿ ನಡೆಸುತ್ತಿರುವ ಸ್ಥಳದಲ್ಲಿ ಜಯ ಕರ್ನಾಟಕ ಸಂಘಟನೆ ಕಾರ್ಯಕರ್ತರು ರಸ್ತೆ ತಡೆಗೆ ಯತ್ನಿಸಿ ಆಕ್ರೋಶ ವ್ಯಕ್ತಪಡಿಸಿದರು.

ನಗರದ ಸರ್ ಎಂ ವಿ ಪ್ರತಿಮೆ ಬಳಿ ಬೆಳಿಗ್ಗೆಯಿಂದ ಹಿತರಕ್ಷಣಾ ಸಮಿತಿ ಧರಣಿ ಆರಂಭಿಸಿದ್ದು, ವಿವಿಧ ಸಂಘ ಸಂಸ್ಥೆಗಳ ಕಾರ್ಯಕರ್ತರು ಭಾಗಿಯಾಗಿ ನೀರು ಬಿಟ್ಟಿರುವ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಧಿಕ್ಕಾರದ ಘೋಷಣೆ ಕೂಗಿದರು.

ಪ್ರತಿಭಟನಾಕಾರರ ಧಿಕ್ಕಾರದ ಘೋಷಣೆ ಮುಗಿಲು ಮುಟ್ಟುತ್ತಿದ್ದ ವೇಳೆಗೆ ಆಕ್ರೋಶ ಕಟ್ಟೆ ಹೊಡೆದು ಜಯ ಕರ್ನಾಟಕ ಸಂಘಟನೆ ಕಾರ್ಯಕರ್ತರು ಯೋಗೇಶ್ ನೇತೃತ್ವದಲ್ಲಿ ಬೆಂಗಳೂರು–ಮೈಸೂರು ಹೆದ್ದಾರಿಗೆ ಏಕಾಏಕಿ ನುಗ್ಗಿ ರಸ್ತೆ ತಡೆಗೆ ಯತ್ನಿಸಿದರು, ಮೈಸೂರು ಕಡೆ ಹೋಗುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ ತಡೆದರು. ತಕ್ಷಣ ಎಚ್ಚೆತ್ತ ಪೊಲೀಸರು ಪ್ರತಿಭಟನಾಕಾರರನ್ನು ತಡೆದು ಹೆದ್ದಾರಿ ಬದಿಗೆ ಸರಿಸಲು ಮುಂದಾದರು. ಹಿತರಕ್ಷಣಾ ಸಮಿತಿಯ ಮುಖಂಡ, ಮಾಜಿ ಶಾಸಕ ಎಂ.ಎಸ್. ಆತ್ಮಾನಂದ ಪೊಲೀಸರ ಜೊತೆಗೂಡಿ ಹೆದ್ದಾರಿಯಿಂದ ಧರಣಿ ಸ್ಥಳಕ್ಕೆ ಕರೆತರುವಲ್ಲಿ ಯಶಸ್ವಿಯಾಗಿ ಧರಣಿ ಮುನ್ನಡೆಸಬೇಕಿದ್ದು ನಿಮ್ಮೆಲ್ಲರ ಸಹಕಾರ ಬೇಕಾಗಿದೆ ಹಾಗಾಗಿ ಸಹಕರಿಸುವಂತೆ ಮನವಿ ಮಾಡಿದರು.

ಅಕ್ರಮವಾಗಿ ರಸ್ತೆ ನಿರ್ಮಾಣ ವಿರೋಧಿಸಿ ಪ್ರತಿಭಟನೆ



ಮಂಡ್ಯ ಆ.31– ಹಾಲಹಳ್ಳಿ ಸ್ಲಂ ಬೋರ್ಡ್ ಬಡಾವಣೆಯಲ್ಲಿ ದೇವಾಲಯದ ಮುಂಭಾಗ ಅಕ್ರಮವಾಗಿ ನಿರ್ಮಾಣ ಮಾಡಲಾಗಿರುವ ರಸ್ತೆಯನ್ನು ತೆರವುಗೊಳಿಸುವಂತೆ ಒತ್ತಾಯಿಸಿ ಭಜರಂಗ ಸೇನೆ ಕರ್ನಾಟಕ ನೇತೃತ್ವದಲ್ಲಿ ಸ್ಥಳೀಯ ನಿವಾಸಿಗಳು ಮಂಡ್ಯದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಸರ್‌ಎಂವಿ ಪ್ರತಿಮೆ ಬಳಿಯಿಂದ ಮೆರವಣಿಗೆ ಹೊರಟು ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಮನವಿ ಸಲ್ಲಿಸಿ ಅಕ್ರಮ ರಸ್ತೆ ತೆರವಿಗೆ ಒತ್ತಾಯಿಸಿದರು. ನಗರಸಭೆ ವ್ಯಾಪ್ತಿಯ ಹಾಲಹಳ್ಳಿ ಸ್ಲಂ ಬೋರ್ಡ್‌ನಲ್ಲಿ ಕರು ಮಾರಿಯಮ್ಮ ದೇವಾಲಯ ಇದ್ದು, ಸರ್ಕಾರಿ ಜಾಗದಲ್ಲಿ ದೇವಾಲಯದ ಮುಂಭಾಗ ಅಕ್ರಮವಾಗಿ ರಸ್ತೆ ನಿರ್ಮಿಸಿ ಕಾಂಕ್ರೀಟ್ ಡೆಕ್ ಹಾಕಿದ್ದಾರೆ ಎಂದು ದೂರಿದರು.

ಸದರಿ ಪ್ರದೇಶಕ್ಕೆ ಹೊರಗಿನ ಪುಂಡರು ಆಗಮಿಸಿ ಇಲ್ಲಿನ ನಿವಾಸಿಗಳಿಗೆ ಬೆದರಿಕೆ ಹಾಕಿ ಅನುಚಿತವಾಗಿ ವರ್ತಿಸುತ್ತಿದ್ದಾರೆ, ಸ್ಲಂ ಬೋರ್ಡ್ ಆಸ್ತಿಯಲ್ಲಿ ಅಕ್ರಮವಾಗಿ ರಸ್ತೆ ನಿರ್ಮಿಸಿರುವ ಬಗ್ಗೆ ದೂರು ನೀಡಿದ್ದರೂ ಸಹ ಅಧಿಕಾರಿಗಳು ಕಣ್ಮುಚ್ಚಿ ಕುಳಿತಿದ್ದಾರೆ ಎಂದು ಆರೋಪಿಸಿದರು.

ಭಜರಂಗ ಸೇನೆಯ ಬಿ. ಮಂಜುನಾಥ್, ಹರ್ಷ, ಶಿವು, ಚೆಲುವರಾಜು, ಕೃಷ್ಣಶೆಟ್ಟಿ ಸತೀಶ್ ಕುಮಾರ್, ಅನಿಲ್ ಭಾಗವಹಿಸಿದ್ದರು.

ಅನಾರೋಗ್ಯದಿಂದ ಬಿಎಸ್‌ಎಫ್ ಯೋಧ ಸಾವು



ಭಾರತೀನಗರ, ಆ.31– ಅನಾರೋಗ್ಯದ ಹಿನ್ನೆಲೆಯಲ್ಲಿ ಗ್ರಾಮಕ್ಕೆ ರಜೆಯ ಮೇಲೆ ಬಂದಿದ್ದ ಬಿಎಸ್‌ಎಫ್ ಯೋಧನೋರ್ವ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿರುವ ಘಟನೆ ಮೆಣಸಗೆರೆ ಗ್ರಾಮದಲ್ಲಿ ನಡೆದಿದೆ.

ಇಲ್ಲಿಗೆ ಸಮೀಪದ ಮೆಣಸಗೆರೆ ಗ್ರಾಮದ ಎಂ.ಟಿ.ಪ್ರಸನ್ನ ಕುಮಾರ್ ಅವರು ಪಂಜಾಬ್‌ನಲ್ಲಿ ಬಿಎಸ್‌ಎಫ್ ಯೋಧರಾಗಿ ಕಾರ್ಯನಿರ್ವಹಿಸುತ್ತಿದ್ದರು. ಅನಾರೋಗ್ಯದ ಹಿನ್ನೆಲೆಯಲ್ಲಿ ಗ್ರಾಮಕ್ಕೆ ಬಂದು ಚಿಕಿತ್ಸೆ ಪಡೆಯುತ್ತಿದ್ದರು. ಆದರೆ, ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ.

ಗೌರವ ಸಮರ್ಪಣೆ: ಬಿಎಸ್‌ಎಫ್ ಮತ್ತು ಜಿಲ್ಲಾಡಳಿತದಿಂದ ಆಗಸದತ್ತ ಮೂರು ಸುತ್ತು ಗುಂಡು ಹಾರಿಸಿ, ಮೃತ ಯೋಧನಿಗೆ ರಾಷ್ಟ್ರಧ್ವಜ ಹೊದಿಸಿ ಗೌರವಿಸಿ, ನಂತರ ಮೃತನ ಪತ್ನಿ ರಾಧಾ ಅವರಿಗೆ ರಾಷ್ಟ್ರಧ್ವಜವನ್ನು ನೀಡಲಾಯಿತು.

ಮಾಜಿ ಸಚಿವ ಡಿ.ಸಿ. ತಮ್ಮಣ್ಣ ಅವರು ಮೃತನ ಅಂತ್ಯಸಂಸ್ಕಾರದಲ್ಲಿ ಪಾಲ್ಗೊಂಡು, ಹೂಗುಚ್ಛವಿಟ್ಟು ಗೌರವ ಸಲ್ಲಿಸಿದರು. ಈ ಸಂದರ್ಭ ಮಾತನಾಡಿದ ಅವರು, ದೇಶ ಕಾಯುವ ಯೋಧರಿಂದ ನಾವು ಸುರಕ್ಷಿತವಾಗಿದ್ದೇವೆ. ಅವರಿಗೆ ಗೌರವ ಸಲ್ಲಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ. ಯೋಧರಿಲ್ಲದೆ ನಾವಿಲ್ಲ ಎಂದರು.

ಮೃತ ಯೋಧನ ಪಾರ್ಥೀವ ಶರೀರವನ್ನು ಗ್ರಾಮದಲ್ಲಿ ಮೆರವಣಿಗೆ ನಡೆಸಿದಾಗ ಜ್ಞಾನ ಮುದ್ರಶಾಲೆಯ ವಿದ್ಯಾರ್ಥಿಗಳು ಬ್ಯಾಂಡ್ ಸೆಟ್ ಬಾರಿಸುವ ಮೂಲಕ ಗೌರವ ಸಮರ್ಪಣೆ ಸಲ್ಲಿಸಿದರು. ಮೃತ ಯೋಧನಿಗೆ ಪತ್ನಿ, ಓರ್ವ ಪುತ್ರ ಓರ್ವ ಪುತ್ರಿ ಇದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮದ ಜಮೀನಿನಲ್ಲಿ ಗುರುವಾರ ನಡೆಯಿತು. ಅಂತ್ಯಕ್ರಿಯೆಯಲ್ಲಿ ತಹಸಿಲ್ದಾರ್ ಟಿ.ಎನ್. ನರಸಿಂಹಮೂರ್ತಿ, ಬಿಎಸ್‌ಎಫ್ ಅಧಿಕಾರಿಗಳು ಭಾಗವಹಿಸಿದ್ದರು.

ಇಂದು, ನಾಳೆ ವಿದ್ಯುತ್ ವ್ಯತ್ಯಯ

ಮಂಡ್ಯ, ಆ.31– 66/11 ಕೆ.ವಿ ಕೆ.ಐ.ಎ.ಡಿ.ಬಿ ವಿದ್ಯುತ್ ವಿತರಣಾ ಕೇಂದ್ರ ಮತ್ತು ತುಂಬಕೆರೆ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ ಫೀಡರ್‌ಗಳ ಮಾರ್ಗಗಳಲ್ಲಿ ಬೃಹತ್ ಕಾಮಗಾರಿ ವತಿಯಿಂದ ತುರ್ತು ಕಾರ್ಯನಿರ್ವಹಣೆ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಸೆಪ್ಟಂಬರ್ 1 ಮತ್ತು 2 ರಂದು ಗುತ್ತಲು, ಫ್ಯಾಕ್ಟರಿ ವೃತ್ತ, ಕೈಗಾರಿಕ ಬಡಾವಣೆಗಳು, ಎಂ.ಸಿ.ರಸ್ತೆ, ತಾವರೆಗೆರೆ, ನೆಹರು ನಗರ, ಉದಯಗಿರಿ, ಸಾದತ್ ಮೊಹಲ್ಲ, ಚನ್ನಯ್ಯ ಬಡಾವಣೆ, ಸಿದ್ದಾರ್ಥ ಬಡಾವಣೆ, ಬೆಂಗಳೂರು ಮುಖ್ಯ ರಸ್ತೆಯ ಹೆಬ್ಬಾಳ ಹಾಗೂ ಸುತ್ತಮುತ್ತಲಿನ ಪ್ರದೇಶಗಳು ಗ್ರಾಮಾಂತರ ಪ್ರದೇಶಗಳಾದ ಶ್ರೀನಿವಾಸಪುರ ಗೇಟ್, ಹನಕೆರೆ ಐ.ಪಿ ವ್ಯಾಪ್ತಿ, ಬಸವನಪುರ ಐ.ಪಿ. ವ್ಯಾಪ್ತಿ, ಬೂದನೂರು, ಭೂತನ ಹೊಸೂರು, ಚನ್ನಪ್ಪನ ದೊಡ್ಡಿ, ಹಂಬರಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳು.

ತುಂಬಕೆರೆ ವಿದ್ಯುತ್ ವಿತರಣಾ ಕೇಂದ್ರದ ಗ್ರಾಮಾಂತರ ಪ್ರದೇಶಗಳಾದ ಹೊಡಾಘಟ್ಟ, ಕೀಲಾರ, ಹನಕೆರೆ, ಹಳೆ ಬೂದನೂರು, ಹೊಸಬೂದನೂರು, ಈಚಗೆರೆ, ಹಂಬರಹಳ್ಳಿ, ಆಲಕೆರೆ, ನಲ್ಲಹಳ್ಳಿ, ಕಚ್ಚಿಗೆರೆ, ಶ್ರೀನಿವಾಸಪುರ ಗೇಟ್, ಹೊನಗಾನ ಹಳ್ಳಿಮಠ, ತುಂಬಕೆರೆ, ಚಾಮಲಾಪುರ, ಉಮ್ಮಡಹಳ್ಳಿ, ಬಸವನಪುರ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್‌ನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಸೆಸ್ಕ್ ಕಾ ಮತ್ತು ಪಾ ವಿಭಾಗದ ಕಾರ್ಯನಿರ್ವಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಲ್ಯಾಪ್‌ಟಾಪ್‌ಗೆ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

ಮಂಡ್ಯ, ಆ.31– ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವತಿಯಿಂದ ನೋಂದಾಯಿತ ಕಾರ್ಮಿಕರ ಮಕ್ಕಳ ಪೈಕಿ 2023–24ನೇ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿರುವ ಪಿಯುಸಿ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್ ನೀಡಲು ಅರ್ಜಿ ಆಹ್ವಾನಿಸಿದೆ. ಅರ್ಜಿ ಸಲ್ಲಿಸಲು ಸೆ.15 ಕೊನೆಯ ದಿನವಾಗಿದ್ದು, ಮಾಹಿತಿಗಾಗಿ ಕಾರ್ಮಿಕ ಅಧಿಕಾರಿಯವರ ಕಛೇರಿ, ಮಂಡ್ಯ ಉಪವಿಭಾಗ, ಹಾಗೂ ಆಯಾ ತಾಲೂಕಿನ ಕಾರ್ಮಿಕ ನಿರೀಕ್ಷಕರ ಕಛೇರಿಗಳನ್ನು ಸಂಪರ್ಕಿಸಬಹುದು.

ಕಾಮಿಡಿ ಕಿಲಾಡಿಗಳು ಶಿವರಾಜ್‌ಗೆ ಪಿತೃ ವಿಯೋಗ



ಕೆ.ಆರ್.ಪೇಟೆ, ಆ.31– ಕನ್ನಡ ಚಲನಚಿತ್ರ ರಂಗದ ಹಾಸ್ಯ ನಟ ಹಾಗೂ ಕಿರುತೆರೆ ಕಾಮಿಡಿ ಕಿಲಾಡಿಗಳು ಹಾಸ್ಯ ಕಲಾವಿದರಾದ ಕೆಆರ್.ಪೇಟೆ ಶಿವರಾಜ್ ಅವರ ತಂದೆ ರಾಮೇಗೌಡ(85) ನಿಧನ ಹೊಂದಿದ್ದಾರೆ.

ಅವರಿಗೆ ಸುಮಾರು 85ವರ್ಷ ವಯಸ್ಸಾಗಿತ್ತು. ಕೆ.ಆರ್.ಪೇಟೆ ತಾಲೂಕಿನ ಶೀಳನೆರೆ ಹೋಬಳಿಯ ರಾಜಘಟ್ಟ ಗ್ರಾಮದ ಹಿರಿಯ ಮುಖಂಡರಾದ ಅವರು ಕೆ.ಆರ್.ಪೇಟೆ ಪಟ್ಟಣದ ಜಯನಗರ ಬಡಾವಣೆಯಲ್ಲಿ ಇರುವ ತಮ್ಮ ಮನೆಯಲ್ಲಿ ಗುರುವಾರ ಮಧ್ಯಾಹ್ನ ನಿಧನರಾದರು. ಮೃತರು ಪತ್ನಿ ಸಾವಿತ್ರಮ್ಮ, ಪುತ್ರ ಶಿವರಾಜ್ ಕೆ.ಆರ್.ಪೇಟೆ ಸೇರಿದಂತೆ ನಾಲ್ವರು ಪುತ್ರರು, ಮೂವರು ಪುತ್ರಿಯರು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಸಂಸ್ಕಾರವು ಶುಕ್ರವಾರ ಬೆಳಗ್ಗೆ 11 ಗಂಟೆಗೆ ಮೃತರ ಹುಟ್ಟೂರು ರಾಜಘಟ್ಟ ಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೃತರ ನಿಧನಕ್ಕೆ ತಾಲೂಕಿನ ವಿವಿದ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಡಾ.ಎಸ್.ಪಿ.ಯೋಗಣ್ಣರಿಂದ ನಾಳೆ ವೈದ್ಯ ಪ್ರಬಂಧ ಮಂಡನೆ

ಶಿವಮೊಗ್ಗದಲ್ಲಿ ನಡೆಯುವ ಕನ್ನಡ ವೈದ್ಯ ಬರಹಗಾರರ ಸಮ್ಮೇಳನ



ಮೈಸೂರು,ಆ.31(ಪಿಎಂ)– ಭಾರತೀಯ ವೈದ್ಯಕೀಯ ಸಂಘದ ರಾಜ್ಯ ಶಾಖೆಯ ಆಶ್ರಯದಲ್ಲಿ ಸೆ.2 ಮತ್ತು 3ರಂದು ಶಿವಮೊಗ್ಗದಲ್ಲಿ ನಡೆಯಲಿರುವ ಐಎಂಎ ಕನ್ನಡ ವೈದ್ಯ ಬರಹಗಾರರ 4ನೇ ವಾರ್ಷಿಕ ಸಮ್ಮೇಳನದಲ್ಲಿ ಖ್ಯಾತ ವೈದ್ಯ ಮತ್ತು ವೈದ್ಯ ಸಾಹಿತಿ ಡಾ. ಎಸ್.ಪಿ.ಯೋಗಣ್ಣ ಪ್ರಬಂಧ ಮಂಡಿಸಲಿದ್ದಾರೆ.

ಸುಮಾರು 300ಕ್ಕೂ ಹೆಚ್ಚು ವೈದ್ಯ ಬರಹಗಾರರು ಸಮ್ಮೇಳನದಲ್ಲಿ ಭಾಗ ವಹಿಸಲಿದ್ದು, ಸೆ.2ರಂದು 'ವೈದ್ಯಕೀಯ ಸಾಹಿತ್ಯ ಸೃಷ್ಟಿಯ ಸವಾಲುಗಳು' ಕುರಿತು ಪ್ರಥಮ ವೈದ್ಯ ಬರಹಗಾರರ ಸಮ್ಮೇಳನದ ಸರ್ವಾಧ್ಯಕ್ಷರೂ ಆಗಿದ್ದ ಡಾ. ಎಸ್.ಪಿ. ಯೋಗಣ್ಣ ಪ್ರಬಂಧ ಮಂಡಿಸಲಿದ್ದಾರೆ. ಮತ್ತೊಬ್ಬ ಖ್ಯಾತ ವೈದ್ಯ ಸಾಹಿತಿ ಡಾ.ಸಿ.ಆರ್.ಚಂದ್ರಶೇಖರ್ ಗೋಷ್ಠಿಯ ಅಧ್ಯಕ್ಷತೆ ವಹಿಸಲಿದ್ದಾರೆ. ಆಸಕ್ತ ವೈದ್ಯ ಬರಹಗಾರರು ಸದರಿ ಸಮ್ಮೇಳನದಲ್ಲಿ ಭಾಗವಹಿಸಬಹುದೆಂದು ಸುಯೋಗ್ ಆಸ್ಪತ್ರೆ ಪತ್ರಿಕಾ ಕಾರ್ಯದರ್ಶಿ ಎನ್. ಅನಂತ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮೈಸೂರಿನ ಕಲಾಮಂದಿರದಲ್ಲಿ ಜಿಲ್ಲಾಡಳಿತದ ವತಿಯಿಂದ 169ನೇ ಶ್ರೀ.ನಾರಾಯಣ ಗುರು ಅವರ ಜಯಂತ್ಯೋತ್ಸವವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಮೈಸೂರು– ಚಾಮರಾಜನಗರ ಜಿಲ್ಲಾ ಆರ್ಯ ಈಡಿಗರ ಸಂಘದ ವತಿಯಿಂದ ಅನ್ನಸಂತರ್ಪಣೆ ಮಾಡಲಾಯಿತು. ಈ ವೇಳೆ ಸಮಾಜ ಸೇವಕ ಎಸ್.ಶ್ರೀಕಾಂತ್ ಹಾಗೂ ಆರ್ಯ ಈಡಿಗರ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಮೈಸೂರಿನ ಮಂಚೇಗೌಡನಕೊಪ್ಪಲು ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡ ಕುಂದುಕೊರತೆ ಸಭೆ ನಡೆಸಿ, ಬೇಡಿಕೆ ಈಡೇರಿಸುವ ಭರವಸೆ ನೀಡಿದರು. ಕಳೆದ ದ್ವಿತೀಯ ಪಿಯು ಫಲಿತಾಂಶದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಪ್ರಸಕ್ತ ಸಾಲಿನಲ್ಲಿ ಪರೀಕ್ಷೆ ಎದುರಿಸುವ ವಿದ್ಯಾರ್ಥಿಗಳಿಗೆ ಶುಭ ಕೋರಿದರು. ಈ ವೇಳೆ ಕಾಲೇಜು ಅಭಿವೃದ್ಧಿ ಸಮಿತಿ (ಸಿಡಿಸಿ) ಉಪಾಧ್ಯಕ್ಷ ರವಿ ಹಾಗೂ ಮಂಚೇಗೌಡನಕೊಪ್ಪಲು ಗ್ರಾಮಸ್ಥರು ಉಪಸ್ಥಿತರಿದ್ದರು.

ರಾಜ್ಯದಲ್ಲಿ ಸದ್ಯಕ್ಕೆ ಮೋಡ ಬಿತ್ತನೆ ಪ್ರಸ್ತಾಪವಿಲ್ಲ: ಸಚಿವ ಚೆಲುವರಾಯಸ್ವಾಮಿ



ಬೆಂಗಳೂರು: ಸದ್ಯಕ್ಕೆ ರಾಜ್ಯದಲ್ಲಿ ಮೋಡ ಬಿತ್ತನೆ ಮಾಡುವ ಪ್ರಸ್ತಾಪವಿಲ್ಲ ಎಂದು ಕೃಷಿ ಸಚಿವ ಚಲುವರಾಯಸ್ವಾಮಿ ಹೇಳಿದ್ದಾರೆ.

ರಾಜ್ಯದಲ್ಲಿ ಮಳೆ ಕೊರತೆ ಉಂಟಾಗಿರುವ ಹಿನ್ನೆಲೆಯಲ್ಲಿ ಮೋಡ ಬಿತ್ತನೆ ಮಾಡುವ ಪ್ರಸ್ತಾವ ಸರ್ಕಾರದ ಮುಂದೆ ಇಲ್ಲ ಎಂದು ಕೃಷಿ ಸಚಿವ ಚೆಲುವರಾಯಸ್ವಾಮಿ ಸ್ಪಷ್ಟಪಡಿಸಿದ್ದಾರೆ. ಈ ಹಿಂದೆ ರಾಜ್ಯದಲ್ಲಿ ಹಲವು ಬಾರಿ ಮೋಡ ಬಿತ್ತನೆ ನಡೆದಿದ್ದು, ಇದು ವಿಫಲವಾಗಿದ್ದರಿಂದ ಈ ಪ್ರಸ್ತಾವನೆ ಕೈಬಿಡಲಾಗಿದೆ ಎಂದು ಅವರು ತಿಳಿಸಿದರು.

ನಗರದಲ್ಲಿಂದು ಬೆಂಗಳೂರು ಪ್ರೆಸ್‌ಕ್ಲಬ್ ಏರ್ಪಡಿಸಿದ್ದ ಮಾಧ್ಯಮ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬರಗಾಲ ಪ್ರದೇಶ ಎಂದು ಘೋಷಣೆ ಮಾಡಿದರೆ ಕೇಂದ್ರ ಸರ್ಕಾರ ಬರಗಾಲ ನಿರ್ವಹಣೆಗೆ ಬೇಕಾದ ನೆರವು ನೀಡುತ್ತದೆ. ರಾಜ್ಯದಲ್ಲಿ ಬರಗಾಲ ಘೋಷಣೆ ಮಾಡಿ ರೈತರಿಗೆ ಪರಿಹಾರ ಒದಗಿಸಿದರೂ, ಮಳೆ ಬೀಳದೆ ಇದ್ದಲ್ಲಿ ಭಾರೀ ಸಂಕಷ್ಟಕ್ಕೆ ರೈತ ವರ್ಗ ಸಿಲುಕಲಿದೆ ಎಂದರು. ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಯಮಾನುಸಾರ ಕೇಂದ್ರದಿಂದ ಪರಿಹಾರ ನೀಡಲಾಗುತ್ತದೆ. ಜತೆಗೆ ವಿಮೆಯೂ ದೊರೆಯಲಿದೆ. ಆದರೆ, ಮಳೆ ಬೀಳದೆ ಇದ್ದರೆ ರೈತರ ನೆಮ್ಮದಿ ಹಾಳು ಆಗುವ ಜೊತೆ ಜೊತೆಗೆ ಸಂಕಷ್ಟದ ಪರಿಸ್ಥಿತಿ ಉಂಟಾಗಲಿದೆ ಎಂದು ಹೇಳಿದರು. ಈ ಹಿಂದೆ ಮೋಡ ಬಿತ್ತನೆ ಮಾಡಿದಾಗ ಸೂಕ್ತ ಪ್ರತಿಫಲ ಸಿಕ್ಕಿಲ್ಲ. ಹಾಗಾಗಿ ಮೋಡಬಿತ್ತನೆ ಸರ್ಕಾರದ ಮುಂದೆ ಇಲ್ಲ. ಸೆಪ್ಟೆಂಬರ್ 4 ರೊಳಗೆ ಬರ ಘೋಷಣೆ ಬಗ್ಗೆ ತೀರ್ಮಾನ ಕೈಗೊಳ್ಳಲಿದ್ದು, ಸೆಪ್ಟೆಂಬರ್ ಮೊದಲ ವಾರದಲ್ಲಿ ಬರಗಾಲ ಘೋಷಣೆ ಸಾಧ್ಯತೆ ಇದೆ. ಹವಾಮಾನ ಮುನ್ಸೂಚನೆಯಂತೆ ಆಗಸ್ಟ್ ತಿಂಗಳಿನಲ್ಲಿ ಹೆಚ್ಚಿನ ಮಳೆ ಬೀಳುವ ನಿರೀಕ್ಷೆ ಇತ್ತು. ಆದರೆ ರಾಜ್ಯದಲ್ಲಿ ಈ ತಿಂಗಳು ಶೇ 99 ರಷ್ಟು ಮಳೆ ಕೊರತೆಯಾಗಿದೆ. 130 ತಾಲೂಕಿನಲ್ಲಿ ಬರ ಸ್ಥಿತಿ ಕುರಿತು ವರದಿ ಸಲ್ಲಿಸುವಂತೆ ಆಯಾ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಈ ವರದಿ ಸರ್ಕಾರದ ಕೈ ಸೇರಲಿದ್ದು, ಇದನ್ನು ಆಧರಿಸಿ ಬರ ಘೋಷಣೆ ಕುರಿತು ಸೆಪ್ಟೆಂಬರ್ ಮೊದಲ ವಾರದಲ್ಲಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ಹೇಳಿದರು.

ಆಯಾ ಜಿಲ್ಲೆಗಳ ವಾಸ್ತವ ಸ್ಥಿತಿ ತಿಳಿಯುವ ಸಲುವಾಗಿ ಜಿಲ್ಲಾಧಿಕಾರಿ ನೇತೃತ್ವದಲ್ಲಿ ಅಂತ ಇಲಾಖೆ ವರದಿ ನೀಡಲು ಸೂಚನೆ ನೀಡಲಾಗಿದೆ. ಬರದಿಂದ ಸಂಕಷ್ಟದಲ್ಲಿ ರೈತರ ನೆರವಿಗೆ ಸರ್ಕಾರ ಸಿದ್ಧವಿದೆ. ಸರ್ಕಾರದ ಮಟ್ಟದಲ್ಲೂ ಶಾಸಕರು ಹಾಗೂ ಹಲವು ಮಂತ್ರಿಗಳು ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗಳ ಮೇಲೆ ಒತ್ತಡ ತರುತ್ತಿದ್ದಾರೆ ಎಂದರು. ನಾವು ಕೊಟ್ಟ ಮಾತಿನಂತೆ ಈಗಾಗಲೇ 4 ಗ್ಯಾರಂಟಿ ಜಾರಿಗೊಳಿಸಿದ್ದೇವೆ. 2–3 ದಿನಗಳಲ್ಲಿ ಮನೆ ಯಜಮಾನಿ ಖಾತೆಗೆ 2 ಸಾವಿರ ಹೋಗುತ್ತದೆ. ಆ.1ರಂದೇ 5ಲಕ್ಷ ರೂ. ಬಡ್ಡಿ ರಹಿತ ಸಾಲ ಕೊಡುವ ಯೋಜನೆ ಜಾರಿಗೊಳಿಸಿದ್ದೇವೆ ಎಂದ ಅವರು, ಕಾವೇರಿ ನಿರ್ವಹಣಾ ಪ್ರಾಧಿಕಾರದ ಸಭೆ ನಿಗದಿಯಾಗಿದೆ. ಸೆಪ್ಟೆಂಬರ್ 1 ರಂದು ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ ನಡೆಯಲಿದೆ. ನೀರು ಬಿಡಲು ಸಾಧ್ಯವಿಲ್ಲವೆಂದು ಮನವರಿಕೆ ಮಾಡಿಕೊಟ್ಟಿದ್ದೇವೆ. ಮಳೆಯಾಗದ ಹಿನ್ನೆಲೆ ನೀರು ಬಿಡಲು ಸಾಧ್ಯವಿಲ್ಲ ಎಂದು ಹೇಳುತ್ತಿದ್ದೇವೆ ಎಂದರು.

ಲಂಚ ಸ್ವೀಕರಿಸುವಾಗ ರೆಡ್‌ಹ್ಯಾಂಡಾಗಿ ಲೋಕಾಯುಕ್ತ ಬಲೆಗೆ ಬಿದ್ದ ಆಳಂದ ತಹಶೀಲ್ದಾರ್, ಆರ್‌ಐ

ಕಲಬುರಗಿ, ಆ.31– ಕಲಬುರಗಿ ಜಿಲ್ಲೆಯ ಆಳಂದ ತಹಶೀಲ್ದಾರ್ ಯಲ್ಲಪ್ಪ ಸುಬೇದಾರ್ ಮತ್ತು ರೆವಿನ್ಯೂ ಇನ್ಸ್‌ಪೆಕ್ಟರ್ ರಾಜಶೇಖರ್ ಅವರು ಗುರುವಾರ ಲಂಚ ಸ್ವೀಕರಿಸುವಾಗ ರೆಡ್ ಹ್ಯಾಂಡಾಗಿ ಲೋಕಾಯುಕ್ತ ಅಧಿಕಾರಿಗಳ ಬಲೆಗೆ ಬಿದ್ದಿದ್ದಾರೆ. ಇಂದು ಆಳಂದ ತಾಲೂಕು ಕಚೇರಿಯಲ್ಲೇ ತಹಶೀಲ್ದಾರ್ ಯಲ್ಲಪ್ಪ ಸುಬೇದಾರ್ ಮತ್ತು ಆರ್‌ಐ ರಾಜಶೇಖರ್ ಅವರು ಜಮೀನಿಗೆ ಕೃಷಿಯೇತರ ಪ್ರಮಾಣಪತ್ರ ನೀಡಲು ಮೆಹಬೂಬ್ ಪಟೇಲ್ ಎನ್ನುವವರಿಂದ 12,000 ರೂ. ಹಣಕ್ಕೆ ಬೇಡಿಕೆ ಇಟ್ಟಿದ್ದರು.

ಈ ಸಂಬಂಧ ಮೆಹಬೂಬ್ ಪಟೇಲ್ ಅವರು ಲೋಕಾಯುಕ್ತ ಅಧಿಕಾರಿಗಳಿಗೆ ದೂರು ನೀಡಿದ್ದು, ಇಂದು 12 ಸಾವಿರ ರೂಪಾಯಿ ಲಂಚ ಪಡೆಯುವಾಗ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಲೋಕಾಯುಕ್ತ ಎಸ್‌ಪಿ ಕರ್ನೂಲ್ ಅವರ ಮಾರ್ಗದರ್ಶನದಲ್ಲಿ ಸಿಪಿಐಗಳಾದ ನಾನಾಗೌಡ, ಧ್ರುವತಾರೆ, ಅಕ್ಕಮಹಾದೇವಿ ಅವರು ದಾಳಿ ನಡೆಸಿ ತಹಶೀಲ್ದಾರ್ ಯಲ್ಲಪ್ಪ ಸುಬೇದಾರ್, ಆರ್‌ಐ ರಾಜಶೇಖರ್ ಅವರನ್ನು ವಶಕ್ಕೆ ಪಡೆದಿದ್ದಾರೆ.

ಇಂಡಿಯಾ ಮೈತ್ರಿಕೂಟದ ಮುಂಬೈ ಸಭೆಗೆ ಶಿವಸೇನೆಯಿಂದ 'ಕೇಸರಿ ಬಾವುಟ'ದ ಸ್ವಾಗತ!



ನವದೆಹಲಿ, ಆ.31– ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟ ಸೋಲಿಸಲು ರಣತಂತ್ರ ಹೆಣೆಯುತ್ತಿರುವ 28 ವಿರೋಧ ಪಕ್ಷಗಳ ಒಕ್ಕೂಟ 'ಇಂಡಿಯಾ'ದ (ಭಾರತೀಯ ರಾಷ್ಟ್ರೀಯ ಅಭಿವೃದ್ಧಿಶೀಲ ಎಲ್ಲರನ್ನೂ ಒಳಗೊಳ್ಳುವ ಮೈತ್ರಿಕೂಟ) ಮೂರನೇ ಸಭೆ ಮುಂಬೈನಲ್ಲಿ ನಡೆಯುತ್ತಿದ್ದು, ಮೈತ್ರಿಕೂಟದ ನಾಯಕರಿಗೆ ಶಿವಸೇನೆ ಉದ್ಧವ್ ಠಾಕ್ರೆ ಬಣ ಕೇಸರಿ ಬಾವುಟಗಳ ಸ್ವಾಗತ ಕೋರಿದೆ. ಇಂದು ಮತ್ತು ನಾಳೆ ಮುಂಬೈನಲ್ಲಿ ಇಂಡಿಯಾ ಮೈತ್ರಿಕೂಟದ ಸಭೆ ನಡೆಯುತ್ತಿದ್ದು ಇದೇ ಸಭೆಯಲ್ಲಿ ಮೈತ್ರಿಕೂಟದ ಲೋಗೋ ಅನಾವರಣವಾಗಲಿದೆ ಎಂದು ಹೇಳಲಾಗಿದೆ.

ಕೇಸರಿ ಬಾವುಟಗಳ ಸ್ವಾಗತ: 'ಇಂಡಿಯಾ' ಸಭೆ ನಿಮಿತ್ತ ಮುಂಬೈ ವಿಮಾನ ನಿಲ್ದಾಣಕ್ಕೆ ಬಂದಿಳಿಯುವ ವಿಪಕ್ಷ ನಾಯಕರನ್ನು ಕೇಸರಿ ಧ್ವಜಗಳು ಸ್ವಾಗತಿಸಿದವು. ಇಂಡಿಯಾ ಸಭೆಗೂ ಮುನ್ನ ಶಿವಸೇನಾ ಉದ್ಧವ್ ಠಾಕ್ರೆ ಬಣದ (ಯುಬಿಟಿ) ಕಾರ್ಯಕರ್ತರು ಮುಂಬೈ ವಿಮಾನ ನಿಲ್ದಾಣದ ಹೊರಗೆ ಉದ್ಧವ್ ಠಾಕ್ರೆ ಅವರನ್ನು ಒಳಗೊಂಡ ಬ್ಯಾನರ್, ಕೇಸರಿ ಧ್ವಜಗಳನ್ನು ಅಳವಡಿಸಿದ್ದರು. 'ಹಿಂದುತ್ವವೇ ನಮ್ಮ ಅಸ್ಮಿತೆಯಾಗಿದ್ದು, ಭಾರತದಲ್ಲಿ ವಾಸಿಸುವವರೆಲ್ಲರೂ ಹಿಂದೂಗಳೇ ಆಗಿದ್ದಾರೆ. ಇಂಡಿಯಾ ಮೈತ್ರಿಕೂಟದ ಪಾಲುದಾರರೂ ಇದಕ್ಕೆ ಒಪ್ಪಿಗೆ ನೀಡಲಿದ್ದಾರೆ' ಎಂದು ಯುಬಿಟಿ ಮುಖಂಡರು ತಿಳಿಸಿದ್ದಾರೆ.

ಸಭೆಯಲ್ಲಿ ಭಾಗವಹಿಸಿದ್ದ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ, ರಾಹುಲ್ ಗಾಂಧಿ, ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್, ದೆಹಲಿ ಸಿಎಂ ಅರವಿಂದ ಕೇಜ್ರಿವಾಲ್, ಸಿಪಿಐ(ಎಂ)ನ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿ ಸೀತಾರಾಂ ಯೆಚೂರಿ ಮತ್ತು ನ್ಯಾಷನಲ್ ಕಾನ್ಫರೆನ್ಸ್ ನಾಯಕ ಒಮರ್ ಅಬ್ದುಲ್ಲಾ ಸೇರಿದಂತೆ ಹಲವು ನಾಯಕರ ಪೋಸ್ಟರ್‌ಗಳನ್ನು ರಸ್ತೆಯುದ್ದಕ್ಕೂ ಹಾಕಲಾಗಿದೆ.

ಎನ್‌ಸಿಪಿ (ಶರದ್ ಪವಾರ್ ಬಣ), ಶಿವಸೇನಾ ಉದ್ಧವ್ ಠಾಕ್ರೆ ಬಣ (ಯುಬಿಟಿ) ಮತ್ತು ಕಾಂಗ್ರೆಸ್ ಜತೆಗೂಡಿ ಸಂಘಟಿಸಿರುವ ಸಭೆಯಲ್ಲಿ 'ಇಂಡಿಯಾ'ದ ಸಮನ್ವಯ ಸಮಿತಿ ಸೇರಿದಂತೆ ಇತರ ಸಮಿತಿಗಳಿಗೆ ಪದಾಧಿಕಾರಿಗಳು ಹಾಗೂ ಸದಸ್ಯರ ನೇಮಕವಾಗುವ ಸಾಧ್ಯತೆ ಇದೆ. ಇದೇ ವೇಳೆ, ಮೈತ್ರಿಕೂಟದ ನಾಯಕರು 'ಇಂಡಿಯಾ'ದ ಲೋಗೊ ಬಿಡುಗಡೆಗೊಳಿಸಲಿದ್ದಾರೆ. ಜತೆಗೆ, 'ಬಿಜೆಪಿ ಚಲೇ ಜಾವ್' ಆಂದೋಲನಕ್ಕೆ ಚಾಲನೆ ನೀಡಲಿದ್ದಾರೆ ಎನ್ನಲಾಗಿದೆ.

ಪಂಚರಾಜ್ಯಗಳ ಚುನಾವಣೆಗೂ ತಂತ್ರಗಾರಿಕೆ: ಲೋಕಸಭಾ ಚುನಾವಣೆಗೆ ಸೀಟು ಹಂಚಿಕೆ, ಬಿಜೆಪಿ ವಿರುದ್ಧ 'ಸಾಮಾನ್ಯ ಅಭ್ಯರ್ಥಿ' ಸೂತ್ರದ ರೂಪುರೇಷೆ, ಸಂಪನ್ಮೂಲಗಳ ಕ್ರೋಢೀಕರಣ ಮತ್ತು ಪ್ರಚಾರ ತಂತ್ರಗಳ ಕುರಿತು ಸಮಾಲೋಚನೆಗಳು ನಡೆಯಲಿವೆ. ವರ್ಷಾಂತ್ಯದಲ್ಲಿ ನಡೆಯಲಿರುವ ಮಧ್ಯ ಪ್ರದೇಶ, ರಾಜಸ್ಥಾನ, ತೆಲಂಗಾಣ, ಛತ್ತೀಸಗಢ ಹಾಗೂ ಮಿಜೋರಾಂ ವಿಧಾನಸಭಾ ಚುನಾವಣೆಗಳಿಗೆ ವಿಪಕ್ಷಗಳ ಕಾರ್ಯತಂತ್ರದ ಬಗ್ಗೆಯೂ ಚರ್ಚೆ ನಡೆಸಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

ಬಾಂಗ್ಲಾದೇಶ ಎದುರು ಪ್ರಯಾಸದ ಗೆಲುವು ಸಾಧಿಸಿದ ಶ್ರೀಲಂಕಾ



ಪಲ್ಲಿಕೆಲೆ, ಆ.31– ಎಡಗೈ ಬ್ಯಾಟರ್ ಚರಿತ್ ಅಸಲಂಕಾ (62*ರನ್, 92 ಎಸೆತ, 5 ಬೌಂಡರಿ, 1 ಸಿಕ್ಸರ್) ಹಾಗೂ ಸಧೀರ ಸಮರ ವಿಕ್ರಮ (54 ರನ್, 77 ಎಸೆತ, 6 ಬೌಂಡರಿ) ಸಮಯೋಚಿತ ಜತೆಯಾಟ ಹಾಗೂ ಮಥೀಶ್ ಪಥಿರಣ (32ಕ್ಕೆ 4) ಬಿಗಿ ಬೌಲಿಂಗ್ ದಾಳಿಯ ನೆರವಿನಿಂದ ಜಂಟಿ–ಆತಿಥೇಯ ಶ್ರೀಲಂಕಾ ತಂಡ ಏಷ್ಯಾಕಪ್ ಏಕದಿನ ಟೂರ್ನಿಯಲ್ಲಿ ಬಾಂಗ್ಲಾದೇಶ ಎದುರು 5 ವಿಕೆಟ್‌ಗಳಿಂದ ಪ್ರಯಾಸದ ಗೆಲುವು ದಾಖಲಿಸಿದೆ.

ಗುರುವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ನಡೆಸಿದ ಬಾಂಗ್ಲಾದೇಶ ಆರಂಭಿಕ ನಜ್ಮೂಲ್ ಹೊಸೈನ್ ಶಾಂಟೋ (89 ರನ್, 122 ಎಸೆತ, 7 ಬೌಂಡರಿ) ಏಕಾಂಗಿ ಹೋರಾಟದ ನಡುವೆ 42.4 ಓವರ್‌ಗಳಲ್ಲಿ 164 ರನ್‌ಗಳಿಗೆ ಆಲೌಟ್ ಆಯಿತು. ನಜ್ಮೂಲ್ ಹೊಸೈನ್ ಶಾಂಟೋ ಹೊರತುಪಡಿಸಿ ತೌಹಿದ್ ಹೃದಯ್ (20) ಬಾಂಗ್ಲಾ ಪರ ಗರಿಷ್ಠ ಸ್ಕೋರರ್ ಎನಿಸಿದರು. ಪ್ರತಿಯಾಗಿ ಸಧೀರ ಸಮರ ವಿಕ್ರಮ ಹಾಗೂ ಚರಿತ್ ಅಸಲಂಕಾ ಜತೆಯಾಟದ ನೆರವಿನಿಂದ ಶ್ರೀಲಂಕಾ 39 ಓವರ್‌ಗಳಲ್ಲಿ 5 ವಿಕೆಟ್‌ಗೆ 165 ರನ್‌ಗಳಿಸಿ ಶುಭಾರಂಭ ಕಂಡಿತು.

ಸಾಧಾರಣ ಮೊತ್ತದ ಚೇಸಿಂಗ್‌ನಲ್ಲಿ 43 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿದ ಲಂಕಾ ಪರ ಸಧೀರ ಸಮರವಿಕ್ರಮ ಹಾಗೂ ಚರಿತ್ ಅಸಲಂಕಾ 78 ರನ್ ಜತೆಯಾಟವಾಡಿದರು. ನಾಯಕ ದಸುನ್ ಶನಕ (14*) ಹಾಗೂ ಅಸಲಂಕಾ ಮುರಿಯದ ಆರನೇ ವಿಕೆಟ್‌ಗೆ 37 ರನ್ ಪೇರಿಸಿ ಗೆಲುವಿನ ದಡ ಸೇರಿಸಿದರು.

ಬಾಂಗ್ಲಾದೇಶ: 42.4 ಓವರ್‌ಗಳಲ್ಲಿ 164 (ಮೊಹಮದ್ ನಯಿಂ 16, ನಜ್ಮೂಲ್ ಶಾಂಟೋ 89, ಶಕೀಬ್ 5, ತೌಹಿದ್ 5, ಮುಶ್ಫಿಕರ್ 13, ಮೆಹದಿ ಹಸನ್ 6, ಮಥೀಶ್ ಪಥೀರಣ 32ಕ್ಕೆ 4, ಮಹೀಶ್ ತೀಕ್ಷಣ 19ಕ್ಕೆ 2).

ಶ್ರೀಲಂಕಾ: 39 ಓವರ್‌ಗಳಲ್ಲಿ 5 ವಿಕೆಟ್‌ಗೆ 165 (ಪಥುಮ್ 14, ಕರುಣರತ್ನೆ 1, ಕುಸಲ್ 5, ಸಧೀರ 54, ಅಸಲಂಕಾ 62*, ಶನಕ 14*, ಶಕೀಬ್ 29ಕ್ಕೆ2).

ಮೈಸೂರು ಮಿತ್ರ

ನನ್ನ ಹಕ್ಕು ದಮನ ಮಾಡಿದ ಆಯುಕ್ತರ ಸ್ಥಾನದಿಂದ ವಿಮುಕ್ತಿಗೊಳಿಸಿ

● ಕೌನ್ಸಿಲ್ ಸಭೆ ಮುಂದೂಡಿದ ಆಯುಕ್ತರ ವಿರುದ್ಧ ಕ್ರಮಕ್ಕೆ ಮೇಯರ್ ಶಿವಕುಮಾರ್ ಆಗ್ರಹ ● ಮೇಯರ್, ಆಯುಕ್ತರ ನಡುವೆ ಜಟಾಪಟಿ ● ಗ್ರೇಟರ್ ಮೈಸೂರು ಪ್ರಸ್ತಾಪ ಇದಕ್ಕೆಲ್ಲಾ ಕಾರಣ ● ಬಿಜೆಪಿ ನಾಯಕರ ಲೇಔಟ್‌ಗಳಿಗೆ ಅನುಕೂಲ ಮಾಡಿಕೊಡುವ ಉದ್ದೇಶ ಆರೋಪ ಅಲ್ಲಗಳೆದ ಮೇಯರ್



ಮೈಸೂರು, ಆ.31(ಬಿಎಲ್‌ಯು)– ಗುರುವಾರ ನಡೆಯಬೇಕಿದ್ದ ಮೈಸೂರು ನಗರ ಪಾಲಿಕೆಯ ಕೌನ್ಸಿಲ್ ಸಭೆಯನ್ನು ಏಕಾಏಕಿ ಮುಂದೂಡಿ, ನನ್ನ ಹಕ್ಕು ದಮನ ಮಾಡಿರುವ ನಗರಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಅವರನ್ನು ಆಯುಕ್ತ ಸ್ಥಾನದಿಂದ ವಿಮುಕ್ತಿಗೊಳಿಸಬೇಕು ಎಂದು ಮೇಯರ್ ಶಿವಕುಮಾರ್ ಆಗ್ರಹಿಸಿದ್ದಾರೆ.

ನಗರ ಪಾಲಿಕೆಯ ಹಳೆ ಕೌನ್ಸಿಲ್ ಸಭಾಂಗಣದಲ್ಲಿ ಗುರುವಾರ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ನಗರ ಪಾಲಿಕೆಯನ್ನು ಬೃಹತ್ ಮೈಸೂರು ಮಹಾನಗರ ಪಾಲಿಕೆಯಾಗಿ ಮೇಲ್ದರ್ಜೆಗೇರಿಸುವ ಅಜೆಂಡಾ ಇಟ್ಟುಕೊಂಡು ಕೌನ್ಸಿಲ್ ಸಭೆ ಕರೆಯಲಾಗಿತ್ತು. ಆದರೆ ಅಶಾದ್ ಉರ್ ರೆಹಮಾನ್ ಷರೀಫ್ ನನ್ನ ಗಮನಕ್ಕೆ ತರದೆ ಏಕಾಏಕಿ ಕೌನ್ಸಿಲ್ ಸಭೆ ಮುಂದೂಡಿದ್ದಾರೆ ಎಂದು ಆರೋಪಿಸಿದರು.

ಇದು ಕರ್ನಾಟಕ ಮುನ್ಸಿಪಲ್ ಆಕ್ಟ್ 1976ರ ಸ್ಪಷ್ಟ ಉಲ್ಲಂಘನೆಯಾಗಿದೆ. ಕೌನ್ಸಿಲ್ ಸಭೆಯನ್ನು ಮುಂದೂಡುವ ಅಧಿಕಾರ ಮೇಯರ್‌ಗೆ ಮಾತ್ರ ಇರುತ್ತದೆಯೇ ಹೊರತು, ಆಯುಕ್ತರಿಗೆ ಇಲ್ಲ. ಈ ಹಿನ್ನೆಲೆ ಸರ್ಕಾರ ಆಯುಕ್ತರ ವಿರುದ್ಧ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ನಮ್ಮ ಕಾನೂನು ತಜ್ಞರ ಜೊತೆ ಸಮಾಲೋಚನೆ ನಡೆಸಿ ಆಯುಕ್ತರ ವಿರುದ್ಧ ಕಾನೂನು ಹೋರಾಟ ನಡೆಸುತ್ತೇನೆ ಎಂದು ಶಿವಕುಮಾರ್ ತಿಳಿಸಿದರು.

ಬೃಹತ್ ಮೈಸೂರು ಮಹಾ ನಗರ ಪಾಲಿಕೆ ರಚನೆ ಮಾಡುವ ಕುರಿತಂತೆ ಮೊನ್ನೆ ನಡೆದ ಸಲಹಾ ಸಮಿತಿ ಸಭೆಯಲ್ಲಿ ಕಾಂಗ್ರೆಸ್ ಕಾರ್ಪೊರೇಟರ್ ಗಳು ತೀವ್ರ ವಿರೋಧ ವ್ಯಕ್ತಪಡಿಸಿದ್ದರು. ಅಜೆಂಡಾದಲ್ಲಿ ಈ ವಿಚಾರ ಬೇಡವೇ ಬೇಡ ಎಂದು ಪಟ್ಟು ಹಿಡಿದಿದ್ದರು. ಆದರೂ ಅವರ ವಿರೋಧ ಲೆಕ್ಕಿಸದೆ ಕೌನ್ಸಿಲ್ ಸಭೆ ಕರೆಯಲಾಗಿತ್ತು. ಈಗ ಅವರು ತಮ್ಮ ಪ್ರಭಾವ ಬಳಸಿ ಕೌನ್ಸಿಲ್ ಸಭೆ ನಡೆಯದಂತೆ ತಡೆಯೊಡ್ಡಿದ್ದಾರೆ ಎಂದು ಶಿವಕುಮಾರ್ ಆರೋಪಿಸಿದರು.

ನಗರಾಭಿವೃದ್ಧಿ ಸಚಿವರು ಸಭೆ ಕರೆದಿದ್ದಾರೆ ಎಂದು ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಎಲ್ಲಾ ಅಧಿಕಾರಿಗಳ ಜೊತೆ ಬೆಂಗಳೂರಿಗೆ ತೆರಳಿದ್ದಾರೆ. ಈ ರೀತಿಯ ಸಬೂಬು ಹೇಳಿ ಕೌನ್ಸಿಲ್ ಸಭೆ ನಡೆದಂತೆ ನೋಡಿಕೊಂಡಿದ್ದಾರೆ. ಆಯುಕ್ತರು ಯಾರ ಕಪಿಮುಷ್ಠಿಯಲ್ಲಿದ್ದಾರೋ ತಿಳಿಯದು ಎಂದು ದೂರಿದರು.

ಇದು ನನ್ನ ಕೊನೆಯ ಕೌನ್ಸಿಲ್ ಸಭೆಯಾಗಿತ್ತು. ಕೊನೆಯ ಕೌನ್ಸಿಲ್ ಸಭೆಯಲ್ಲಿ ಬೃಹತ್ ಮೈಸೂರು ನಗರ ಪಾಲಿಕೆ ರಚನೆ ಮಾಡುವ ಬಗ್ಗೆ ಅನುಮೋದನೆ ಪಡೆಯುವ ಪ್ರಯತ್ನ ಮಾಡಿದ್ದೆ. ಆದರೆ ಆಯುಕ್ತರು ಇದಕ್ಕೆ ಅವಕಾಶ ಮಾಡಿಕೊಡಲಿಲ್ಲ ಎಂದು ಶಿವಕುಮಾರ್ ಭಾವುಕರಾಗಿ ನುಡಿದರು.

ಜನಪರವಾಗಿರುವ ಬೃಹತ್ ಮೈಸೂರು ಮಹಾ ನಗರಪಾಲಿಕೆ ರಚನೆ ಮಾಡದಂತೆ ವ್ಯವಸ್ಥಿತ ತಂತ್ರ ರೂಪಿಸಿ ಅದರಲ್ಲಿ ಯಶಸ್ವಿಯಾಗಿದ್ದಾರೆ ಎಂದು ಕಾಂಗ್ರೆಸ್ಸಿಗರ ವಿರುದ್ಧ ಶಿವಕುಮಾರ್ ಆಕ್ರೋಶ ವ್ಯಕ್ತಪಡಿಸಿದರು. ಹತ್ತು ಲಕ್ಷ ಜನಸಂಖ್ಯೆ ಇರುವ ನಗರಕ್ಕೆ ಕೇಂದ್ರ ಸರ್ಕಾರದಿಂದ ಬಹಳಷ್ಟು ಅನುದಾನ ಬರುತ್ತದೆ. ಈ ಹಿನ್ನೆಲೆಯಲ್ಲಿ ಬೃಹತ್ ಮೈಸೂರು ಮಹಾನಗರ ಪಾಲಿಕೆ ರಚನೆ ಮಾಡಿದರೆ ನಗರವನ್ನು ವ್ಯವಸ್ಥಿತ ಹಾಗೂ ಯೋಜನಾಬದ್ಧವಾಗಿ ಅಭಿವೃದ್ಧಿ ಮಾಡಬಹುದು. ಆದರೆ ತಾವು ಅಭಿವೃದ್ಧಿ ವಿರೋಧಿಗಳು ಎಂದು ಕಾಂಗ್ರೆಸ್‌ನವರು ಈ ಮೂಲಕ ಸಾಬೀತು ಮಾಡಿದ್ದಾರೆ ಎಂದು ಆಪಾದಿಸಿದರು.

ಬೃಹತ್ ಮೈಸೂರು ನಗರ ಪಾಲಿಕೆ ರಚನೆ ಮಾಡುವುದರಲ್ಲಿ ನಮ್ಮ ಯಾವುದೇ ಸ್ವಾರ್ಥವಿಲ್ಲ. ಮೈಸೂರು ಸುತ್ತಮುತ್ತ ಬಿಜೆಪಿ ನಾಯಕರಿಗೆ ಸೇರಿರುವ ಯಾವುದೇ ಬಡಾವಣೆಗಳಿಲ್ಲ. ನಗರದ ಅಭಿವೃದ್ಧಿ ದೃಷ್ಟಿಯಿಂದ ಬೃಹತ್ ಮೈಸೂರು ಮಹಾ ನಗರಪಾಲಿಕೆ ಮಾಡುವಂತೆ ಕೇಳುತ್ತಿದ್ದೇವೆಯೇ ಹೊರತು ಇದರಲ್ಲಿ ಯಾವುದೇ ದುರುದ್ದೇಶವಿಲ್ಲ ಎಂದು ಶಿವಕುಮಾರ್ ಸ್ಪಷ್ಟಪಡಿಸಿದರು.

ಉಪ ಮೇಯರ್ ಡಾ.ರೂಪ, ಕಾರ್ಪೊರೇಟರ್‌ಗಳಾದ ಎಸ್‌ಬಿಎಂ ಮಂಜು, ಪ್ರೇಮಾ ಶಂಕರೇಗೌಡ, ಶೋಭಾ, ಸವಿತಾ, ಅಶ್ವಿನಿ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

> ಮೈಸೂರು ಮಹಾರಾಜರು 100 ವರ್ಷದ ಹಿಂದೆಯೇ ದೂರದೃಷ್ಟಿ ಇಟ್ಟುಕೊಂಡು 100 ಅಡಿ ರಸ್ತೆ ನಿರ್ಮಾಣ ಮಾಡಿದರು. ಈ ಮೂಲಕ ದಕ್ಷಿಣ ಏಷಿಯಾದಲ್ಲೇ ಯೋಜನಾಬದ್ಧ ನಗರವಾಗಿ ಮೈಸೂರನ್ನು ನಿರ್ಮಾಣ ಮಾಡಿದರು. ಹಾಗೆಯೇ ನಾವು ಕೂಡ 40 ವರ್ಷದ ದೂರ ದೃಷ್ಟಿ ಇಟ್ಟುಕೊಂಡು ಮೈಸೂರು ನಗರವನ್ನು ಅಭಿವೃದ್ಧಿ ಮಾಡಲು ಯೋಜನೆ ಸಿದ್ಧಪಡಿಸಬೇಕು. ಇದಕ್ಕಾಗಿ ಬಿಬಿಎಂಪಿ ಮಾದರಿಯಲ್ಲಿ ಬೃಹತ್ ಮೈಸೂರು ಮಹಾನಗರ ಪಾಲಿಕೆ ರಚನೆ ಮಾಡುವುದು ಅತ್ಯವಶ್ಯ.
> -ಮೇಯರ್ ಶಿವಕುಮಾರ್

ಚಂದ್ರನಲ್ಲಿ ಸಲ್ಫರ್ ಇರುವುದನ್ನು ಪತ್ತೆ ಮಾಡಿದ ಪ್ರಜ್ಞಾನ್ ರೋವರ್



ಬೆಂಗಳೂರು: ಚಂದ್ರನ ಮೇಲ್ಮೈನಲ್ಲಿ ಸಲ್ಫರ್ ಇರುವುದನ್ನು ಪ್ರಜ್ಞಾನ್ ರೋವರ್‌ನ ಮತ್ತೊಂದು ಉಪಕರಣ ದೃಢಪಡಿಸಿದೆ. ವಿಭಿನ್ನ ತಂತ್ರ ಬಳಸಿಕೊಂಡು ಸಲ್ಫರ್ ಇರುವಿಕೆಯನ್ನು ವಿಭಿನ್ನ ಪ್ರಜ್ಞಾನ್ ಪತ್ತೆ ಮಾಡಿರುವುದಾಗಿ ಇಸ್ರೋ ಹೇಳಿದೆ.

ಪ್ರಜ್ಞಾನ್ ರೋವರ್‌ನಲ್ಲಿರುವ ಆಲ್ಫಾ ಪಾರ್ಟಿಕಲ್ ಎಕ್ಸ್‌–ರೇ ಸ್ಪೆಕ್ಟ್ರೋಸ್ಕೋಪ್ (ಎಪಿಎಕ್ಸ್ ಎಸ್) ಚಂದ್ರನ ಮೇಲ್ಮೈನಲ್ಲಿ ಸಲ್ಫರ್ ಅಸ್ತಿತ್ವವನ್ನು ಹಾಗೂ ಇನ್ನಿತರ ಸಣ್ಣ ಅಂಶಗಳನ್ನು ಪತ್ತೆ ಮಾಡಿರುವುದಾಗಿ ಇಸ್ರೋ ಸಾಮಾಜಿಕ ಜಾಲತಾಣದ ಮೂಲಕ ತಿಳಿಸಿದೆ.

'ಚಂದ್ರಯಾನ–3 ರ ಈ ಸಂಶೋಧನೆಯು ಆ ಪ್ರದೇಶದಲ್ಲಿ ಸಲ್ಫರ್ (S) ಮೂಲಕ್ಕೆ ತಾಜಾ ವಿವರಣೆಯನ್ನು ಅಭಿವೃದ್ಧಿಪಡಿಸಲು ವಿಜ್ಞಾನಿಗಳಿಗೆ ದಾರಿಮಾಡಿಕೊಡುತ್ತದೆ ಎಂದು ಇಸ್ರೋ ಸಾಮಾಜಿಕ ಜಾಲತಾಣದಲ್ಲಿ ಬರೆದಿದೆ.

ಇದೇ ವೇಳೆ ಇಸ್ರೋ ಮೇಲ್ಮೈನಲ್ಲಿ ರೋವರ್ ಸುರಕ್ಷಿತ ದಾರಿಗಾಗಿ ಶೋಧ ಮಾಡುತ್ತಾ ಅಡ್ಡಾಡುತ್ತಿರುವ ವಿಡಿಯೋವನ್ನು ಸಹ ಇಸ್ರೋ ಬಿಡುಗಡೆ ಮಾಡಿದ್ದು, ಮಗುವೊಂದು ಚಂದಾಮಾಮನ ಅಂಗಳದಲ್ಲಿ ತಮಾಷೆಯಾಗಿ ಕುಣಿಯುತ್ತಿದ್ದು, ಅದನ್ನು ತಾಯಿ ಅಕ್ಕರೆಯಿಂದ ಗಮನಿಸುತ್ತಿರುವಂತಿದೆ ಅಲ್ಲವೇ? ಎಂದು ಇಸ್ರೋ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಹಾಕಿದೆ.

ಬಾಹ್ಯಾಕಾಶ ಸಂಸ್ಥೆಯು 18 ಸೆಂ.ಮೀ ಎತ್ತರದ APXS ನ್ನು ತಿರುಗಿಸುವ ಸ್ವಯಂಚಾಲಿತ ಹಿಂಜ್ ಕಾರ್ಯವಿಧಾನವನ್ನು ತೋರಿಸುವ ವೀಡಿಯೊವನ್ನು ಬಿಡುಗಡೆ ಮಾಡಿದೆ. 26–ಕೆಜಿ, 6 ಚಕ್ರಗಳ, ಸೌರಶಕ್ತಿ ಚಾಲಿತ ಪ್ರಗ್ಯಾನ್ ರೋವರ್ ತನ್ನ ವೈಜ್ಞಾನಿಕ ಉಪಕರಣಗಳನ್ನು ಬಳಸಿ ಚಂದ್ರನ ದಕ್ಷಿಣ ಧ್ರುವ ಪ್ರದೇಶದ ಮಣ್ಣು ಮತ್ತು ಬಂಡೆಗಳನ್ನು ಅಧ್ಯಯನ ಮಾಡಿ, ಇದು ಎತ್ತರದ ಪ್ರದೇಶಗಳಿಗೆ ಹೇಗೆ ವ್ಯತಿರಿಕ್ತವಾಗಿದೆ ಎಂಬ ಮಾಹಿತಿಯನ್ನು ದಾಖಲಿಸಲು ಸಜ್ಜುಗೊಂಡಿದೆ

ಸೆ.18ರಿಂದ ಐದು ದಿನ ಸಂಸತ್ತಿನ ವಿಶೇಷ ಅಧಿವೇಶನ: ಪ್ರಹ್ಲಾದ್ ಜೋಶಿ



ನವದೆಹಲಿ: ಸೆಪ್ಟೆಂಬರ್ 18 ರಿಂದ ಐದು ದಿನ ಸಂಸತ್ತಿನ ವಿಶೇಷ ಅಧಿವೇಶನವನ್ನು ಸರ್ಕಾರ ಕರೆದಿದೆ ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಶಿ ಗುರುವಾರ ತಿಳಿಸಿದ್ದಾರೆ.

ಸೆಪ್ಟೆಂಬರ್ 9 ಮತ್ತು 10 ರಂದು ರಾಷ್ಟ್ರ ರಾಜಧಾನಿಯಲ್ಲಿ ಜಿ– 20 ಶೃಂಗಸಭೆಯ ನಂತರ ನಡೆಯಲಿರುವ ಅಧಿವೇಶನದ ಕಾರ್ಯಸೂಚಿ ಕುರಿತು ಯಾವುದೇ ಅಧಿಕೃತ ಹೇಳಿಕೆ ನೀಡಿಲ್ಲ.

ಸೆಪ್ಟೆಂಬರ್ 18 ರಿಂದ 22 ರವರೆಗೆ ಸಂಸತ್ತಿನ ವಿಶೇಷ ಅಧಿವೇಶನ (17 ನೇ ಲೋಕಸಭೆಯ 13 ನೇ ಅಧಿವೇಶನ ಮತ್ತು ರಾಜ್ಯಸಭೆಯ 261 ನೇ ಅಧಿವೇಶನ) ಕರೆಯಲಾಗಿದ್ದು, ಒಟ್ಟು ಐದು ಅವಧಿಗಳು ಇರಲಿವೆ. ಅಮೃತ ಮಹೋತ್ಸವದ ಸಂದರ್ಭದಲ್ಲಿ ಸಂಸತ್ತಿನಲ್ಲಿ ಫಲಪ್ರದ ಚರ್ಚೆಗಳನ್ನು ಎದುರು ನೋಡಲಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ.

ಕಾಂಗ್ರೆಸ್‌ನ 40–45 ಜನ ಸಂಪರ್ಕದಲ್ಲಿ; ಆಪರೇಷನ್ ಒಂದು ದಿನದ ಕೆಲಸ: ಬಿ.ಎಲ್. ಸಂತೋಷ್



ಬೆಂಗಳೂರು: ವಿಧಾನಸಭೆ ಚುನಾವಣೆ ಸೋಲಿನಿಂದ ಕಂಗೆಟ್ಟಿರುವ ಬಿಜೆಪಿಗೆ ಮತ್ತೆ ಚೈತನ್ಯ ನೀಡುವ ಹಾಗೂ ಮುಂಬರುವ ಲೋಕಸಭಾ ಚುನಾವಣೆಗಾಗಿ ಪಕ್ಷವನ್ನು ಪುನರ್ ಸಂಘಟಿಸುವ ನಿಟ್ಟಿನಲ್ಲಿ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ನಗರದಲ್ಲಿ ಗುರುವಾರ ಸಭೆ ನಡೆಸಿದ್ದಾರೆ.

ಆದರೆ, ಕಾಂಗ್ರೆಸ್ ಸಂಪರ್ಕದಲ್ಲಿದ್ದಾರೆ ಎನ್ನಲಾದ ಶಾಸಕರಾದ ಎಸ್. ಟಿ. ಸೋಮಶೇಖರ್, ಶಿವರಾಮ್ ಹೆಬ್ಬಾರ್ ಹಾಗೂ ಮಾಜಿ ಸಚಿವರಾದ ಶಂಕರ್ ಪಾಟೀಲ್ ಮುನೇನಕೊಪ್ಪ, ವಿ. ಸೋಮಣ್ಣ ಹಾಗೂ ರೇಣುಕಾಚಾರ್ಯ ಈ ಸಭೆಯಿಂದ ದೂರ ಉಳಿದಿರುವುದು ತೀವ್ರ ಕುತೂಹಲಕ್ಕೆ ಕಾರಣವಾಗಿದೆ.

ಈ ಸಭೆಯಲ್ಲಿ ಮಾತನಾಡಿದ ಬಿ.ಎಲ್. ಸಂತೋಷ್, ಬಿಜೆಪಿಯಿಂದ ಯಾರೂ ಕಾಂಗ್ರೆಸ್ ಪಕ್ಷಕ್ಕೆ ಹೋಗುವುದಿಲ್ಲ. 10 ಜನ ಹೋದರೂ ಅದಕ್ಕೆ ಸಮನಾದ ಒಬ್ಬರನ್ನು ಕರೆತರಬಹುದು. ನನ್ನ ಜೊತೆ ಕಾಂಗ್ರೆಸ್‌ನ 40–45 ಜನ ಸಂಪರ್ಕದಲ್ಲಿದ್ದಾರೆ. ವರಿಷ್ಠರು ಒಪ್ಪಿಗೆ ಕೊಟ್ಟರೆ ಒಂದು ದಿನದ ಕೆಲಸ ಅಷ್ಟೆ. ಆದರೆ ನಮಗೆ ಈಗ ಅಗತ್ಯವಿಲ್ಲ. ನಾವು ಈಗ ಸರ್ಕಾರ ಮಾಡಬೇಕಾಗಿಲ್ಲ ಎಂದರು.

ಬಾಂಬೆ ಬಾಯ್ಸ್ ಎಂದು ಕರೆಯಲಾಗುತ್ತಿರುವ, ಅಂದು ನಮ್ಮ ಜೊತೆ ಬಂದವರನ್ನು ನಾವೇ ಹಾಗೆಲ್ಲ ಹೇಳುವುದು ಬೇಡ. ಅವರು ಕಷ್ಟ ಕಾಲಕ್ಕೆ ನಮ್ಮ ಜೊತೆ ಬಂದಿದ್ದಾರೆ. ಅವರು ಹೋಗುತ್ತಾರೆ ಎಂದು ನಾವೇ ಹೇಳುವುದು ಸರಿಯಲ್ಲ. ಹಾಗೆಂದು ಬಿಟ್ಟು ಹೋಗುವವರ ಬಗ್ಗೆ ಚಿಂತೆ ಬೇಡ. ಅಷ್ಟಕ್ಕೂ ಯಾರೂ ಕೂಡಾ ಪಕ್ಷ ಬಿಟ್ಟು ಹೋಗುವುದಿಲ್ಲ ಎಂದು ಸಂತೋಷ್ ಹೇಳಿದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಸ್ಥಾನ ನೇಮಕ ಆಗಿಲ್ಲ ಅನ್ನುವ ವಿಚಾರ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾದ ನನಗೆ ಅರಿವಿದೆ. ಅದನ್ನೆ ದೊಡ್ಡದು ಮಾಡಿ ಚರ್ಚಿಸುವ ಅಗತ್ಯವೇನು? ಮನೆಯಲ್ಲಿ ಮದುವೆ ಆಗದ ಮಗಳು ಇದ್ದರೆ ಹೊರಹಾಕಲು ಆಗುತ್ತಾ? ಕೆಲಸ ಸಿಗದ ಮಗ ಇದ್ದರೆ ಮನೆಯಿಂದ ಹೊರಹಾಕುತ್ತೀರಾ ಎಂದು ಪ್ರಶ್ನಿಸಿದ ಅವರು, ತಡವಾಗಿದೆ ಎಂಬುದು ಎಷ್ಟು ಸತ್ಯವೋ ನೇಮಕ ಆಗುವುದೂ ಅಷ್ಟೇ ಸತ್ಯ. ಈಗ ರಾಜ್ಯಾಧ್ಯಕ್ಷ, ವಿಪಕ್ಷ ನಾಯಕನ ಚರ್ಚೆ ಬಿಟ್ಟು ಸಂಘಟನೆಯಲ್ಲಿ ತೊಡಗಿ ಎಂದು ಅವರು ಪಕ್ಷದ ನಾಯಕರಿಗೆ ಸೂಚನೆ ನೀಡಿದರು.

ಪಿಡಿಓ, ಎಫ್‌ಡಿಎ ಸ್ಪರ್ಧಾತ್ಮಕ ಪರೀಕ್ಷಾರ್ಥಿಗಳಿಗೆ ತರಬೇತಿ

ಮೈಸೂರು, ಆ.31– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದಲ್ಲಿ ಪಿಡಿಓ, ಎಫ್‌ಡಿಎ ಇನ್ನಿತರ ಸ್ಪರ್ಧಾತ್ಮಕ ಪರೀಕ್ಷಾರ್ಥಿಗಳಿಗೆ ತರಬೇತಿ ಶಿಬಿರ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರು ಮುಕ್ತ ವಿವಿಯ ಕಾವೇರಿ ಸಭಾಂಗಣದಲ್ಲಿ ಸೆ.2ರ ಬೆಳಗ್ಗೆ 11 ಗಂಟೆಗೆ ಶಿಬಿರವನ್ನು ಉದ್ಘಾಟಿಸಿ, ಅಭ್ಯರ್ಥಿಗಳಿಗೆ ಶುಭಕೋರಲಿದ್ದಾರೆ. ಕಬಿನಿ ಜಲಾಶಯ ಯೋಜನೆಯ ವಿಶೇಷ ಭೂಸ್ವಾಧೀನಾಧಿಕಾರಿ ಬಿ.ಸುಪ್ರಿಯಾ ಬಾಣಗಾರ್, ಪರೀಕ್ಷಾ ಸಿದ್ಧತೆ ಕುರಿತು ಮಾರ್ಗದರ್ಶನ ನೀಡಲಿದ್ದಾರೆ. ಕರಾಮುವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಅಧ್ಯಕ್ಷತೆ ವಹಿಸಲಿದ್ದು, ಕುಲಸಚಿವ ಪ್ರೊ.ಕೆ.ಎಲ್.ಎನ್.ಮೂರ್ತಿ ಮತ್ತಿತರರು ಭಾಗವಹಿಸಲಿದ್ದಾರೆ. ಈ ತರಬೇತಿ ಶಿಬಿರಕ್ಕೆ ರಾಜ್ಯದ ವಿವಿಧ ಭಾಗಗಳ 350ಕ್ಕೂ ಹೆಚ್ಚು ಅಭ್ಯರ್ಥಿಗಳು ಪ್ರವೇಶಾತಿ ಪಡೆದಿದ್ದಾರೆ ಎಂದು ಕೇಂದ್ರದ ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣಗೌಡ ತಿಳಿಸಿದ್ದಾರೆ.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮೈಸೂರಿನ ಅವರ ನಿವಾಸದಲ್ಲಿ ನಗರಪಾಲಿಕೆ ಸದಸ್ಯ ಪೈಲ್ವಾನ್ ಶ್ರೀನಿವಾಸ್ ಅಭಿನಂದಿಸಿದರು. ಈ ವೇಳೆ ಮಾಜಿ ಮೇಯರ್ ಪುಷ್ಪಲತಾ ಜಗನ್ನಾಥ್, ಕಾರ್ಪೊರೇಟರ್ ಗೋಪಿ, ಸಿ.ಶ್ರೀಧರ್ ಇನ್ನಿತರರಿದ್ದರು.

ಅಪಘಾತಕ್ಕೊಳಗಾದ ಪೌರಕಾರ್ಮಿಕನಿಗೆ ಅಗತ್ಯ ನೆರವು

ಆಸ್ಪತ್ರೆಯಲ್ಲಿ ಪೌರಕಾರ್ಮಿಕ ಮಹದೇವನ ಆರೋಗ್ಯ ವಿಚಾರಿಸಿ; ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಭರವಸೆ



ಮೈಸೂರು, ಆ.31(ಆರ್‌ಕೆ)–ಭಾನುವಾರ ಬೆಳಗ್ಗೆ ಮೈಸೂರಿನ ದೇವರಾಜ ಅರಸು ರಸ್ತೆಯಲ್ಲಿ ಕಾರು ಡಿಕ್ಕಿ ಹೊಡೆದ ರಭಸಕ್ಕೆ ಕಾಲು ಮುರಿದು ಅಪೋಲೋ ಬಿಜಿಎಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಪೌರಕಾರ್ಮಿಕ ಮಹದೇವನಿಗೆ ಸರ್ಕಾರ ಅಗತ್ಯ ನೆರವು ನೀಡಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಭರವಸೆ ನೀಡಿದ್ದಾರೆ.

ಬೆಳಗ್ಗೆ ಆಸ್ಪತ್ರೆಗೆ ಭೇಟಿ ನೀಡಿ ಮಹದೇವನ ಆರೋಗ್ಯ ವಿಚಾರಿಸಿದ ಅವರು, ವೈದ್ಯರೊಂದಿಗೂ ಚರ್ಚಿಸಿ ಮಾಹಿತಿ ಪಡೆದುಕೊಂಡರು. ಇದೇ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಕರ್ತವ್ಯನಿರತರಾಗಿದ್ದ ವೇಳೆ ಕಾರೊಂದು ಡಿಕ್ಕಿ ಹೊಡೆದು ಗಾಯಗೊಂಡಿರುವ ಪೌರಕಾರ್ಮಿಕ ಚೇತರಿಸಿಕೊಳ್ಳುತ್ತಿದ್ದಾರೆ ಎಂದರು.

ಕುಟುಂಬಕ್ಕೆ ಆಧಾರಸ್ತಂಭವಾಗಿದ್ದ ಮಹದೇವನಿಗೆ ಕಾಲು ತುಂಡಾಗಿರುವುದರಿಂದ ವೈದ್ಯಕೀಯ ವೆಚ್ಚ, ಜೀವನೋಪಾಯಕ್ಕಾಗಿ ಸರ್ಕಾರದಿಂದ ಅಗತ್ಯ ನೆರವು ನೀಡಲಾಗುವುದು. ಈ ಸಂಬಂಧ ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಪಿ.ಮಣಿವಣ್ಣನ್ ಜೊತೆಯೂ ಚರ್ಚಿಸಿದ್ದೇನೆ. ಕುಟುಂಬದವರ ಜೀವನ ನಿರ್ವಹಣೆಗಾಗಿ ಅವರ ಪತ್ನಿಗೆ ಉದ್ಯೋಗ ನೀಡುವ ಸಂಬಂಧ ಅಧಿಕಾರಿಗಳೊಂದಿಗೆ ಚರ್ಚಿಸುತ್ತೇನೆ. ಸದ್ಯಕ್ಕೆ ಇಲಾಖೆಯಿಂದ ಅಗತ್ಯ ಆರ್ಥಿಕ ನೆರವು ನೀಡಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವರು ತಿಳಿಸಿದರು.


ಮೈಸೂರು ಮಹಾನಗರ ಪಾಲಿಕೆ ಹೆಲ್ತ್ ಇನ್ಸ್‌ಪೆಕ್ಟರ್ ಮಂಜುಕುಮಾರ್, ಪರಿಸರ ಇಂಜಿನಿಯರ್‌ಗಳು ಈ ಸಂದರ್ಭ ಉಪಸ್ಥಿತರಿದ್ದರು. ಅದಕ್ಕೂ ಮೊದಲು ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಅವರು ಆಸ್ಪತ್ರೆಗೆ ಭೇಟಿ ನೀಡಿ ಪೌರಕಾರ್ಮಿಕ ಮಹದೇವನ ಆರೋಗ್ಯ ವಿಚಾರಿಸಿ ವೈದ್ಯರೊಂದಿಗೆ ಚರ್ಚಿಸಿ, ಮಾಹಿತಿ ಪಡೆದರು.



ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಪುತ್ರರೂ ಆದ ತಿ.ನರಸೀಪುರ ತಾಲೂಕು ಕೆಡಿಪಿ ಸದಸ್ಯ ಸುನೀಲ್ ಬೋಸ್ ಅವರ ಹುಟ್ಟುಹಬ್ಬದ ಅಂಗವಾಗಿ ಅಖಿಲ ಕರ್ನಾಟಕ ದಿ. ರಾಕೇಶ್ ಸಿದ್ದರಾಮಯ್ಯನವರ ಅಭಿಮಾನಿಗಳ ಬಳಗದ ರಾಜ್ಯಾಧ್ಯಕ್ಷ ವಿಶ್ವನಾಥ್ (ವಿಶ್ವ) ನೇತೃತ್ವದಲ್ಲಿ ಸುನೀಲ್ ಬೋಸ್ ಮತ್ತು ಜಿಲ್ಲಾ ಕೆಡಿಪಿ ಸದಸ್ಯರೂ ಆದ ಮಾಜಿ ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಕಾಂಗ್ರೆಸ್ ಮುಖಂಡರಾದ ರಮೇಶ್ ರಾಮಪ್ಪ ಜೋಡಿ ಹಕ್ಕಿ ಮಹದೇವು ಉಪಸ್ಥಿತರಿದ್ದರು.

1.46 ಲಕ್ಷ ರೂ. ಆನ್‌ಲೈನ್ ವಂಚನೆ

ಹಣ ಕಳೆದುಕೊಂಡ ಶಾಕ್‌ನಿಂದ ವೃದ್ಧ ಸಾವು



ಮೈಸೂರು, ಆ.31(ಆರ್‌ಕೆ)– ಆನ್‌ಲೈನ್ ವಂಚನೆಯಿಂದ ಜೀವನಪೂರ್ತಿ ಕೂಡಿಟ್ಟ 1.46 ಲಕ್ಷ ರೂ. ಹಣ ಕಳೆದುಕೊಂಡ ಶಾಕ್‌ನಿಂದ ಆಘಾತಕ್ಕೊಳಗಾಗಿ ವೃದ್ಧನೋರ್ವ ಸಾವನ್ನಪ್ಪಿರುವ ಘಟನೆ ಮೈಸೂರಿನ ಬನ್ನಿಮಂಟಪದ ಹನುಮಂತನಗರದಲ್ಲಿ ಕಳೆದ ರಾತ್ರಿ ಸಂಭವಿಸಿದೆ.

ಹಾರೂನ್ ರಷೀದ್ ಅಹಮದ್(79) ಆಘಾತದಿಂದ ಸಾವನ್ನಪ್ಪಿದವರು. ಈ ಹಿಂದೆ ರೇಷನ್ ಡಿಪೋವೊಂದನ್ನು ನಡೆಸುತ್ತಿದ್ದ ಅವರು ಉಳಿತಾಯ ಮಾಡಿದ ಹಣವನ್ನು ಬ್ಯಾಂಕ್‌ನಲ್ಲಿರಿಸಿದ್ದರು. ಆಗಸ್ಟ್ 28 ರಂದು ಮಧ್ಯಾಹ್ನ 1.15 ಗಂಟೆ ವೇಳೆಗೆ ತಮ್ಮ ಮೊಬೈಲ್‌ಗೆ ಫೋನ್ ಮಾಡಿದ ವ್ಯಕ್ತಿಯೋರ್ವ ಕೆವೈಸಿ ಅಪ್‌ಡೇಟ್ ಮಾಡುವುದಾಗಿ ತಿಳಿಸಿ ನಿಮ್ಮ ಮೊಬೈಲ್‌ಗೆ ಓಟಿಪಿ ಬಂದಿದೆ ನಂಬರ್ ಹೇಳಿ ಎಂದು ಮಾಹಿತಿ ಪಡೆದುಕೊಂಡಿದ್ದಾರೆ.

ಅದಾದ ಕೇವಲ 15 ನಿಮಿಷಗಳಲ್ಲಿ ತಮ್ಮ ಬ್ಯಾಂಕ್ ಖಾತೆಯಿಂದ 1,46,000 ರೂ. ಡೆಬಿಟ್ ಆಗಿದೆ ಎಂಬ ಮೆಸೇಜ್ ಬಂದಿತು. ಅಚ್ಚರಿಗೊಂಡ ರಷೀದ್ ಖಾನ್ ಅವರು, ಮಧ್ಯಾಹ್ನ 3 ಗಂಟೆಗೆ ತಮ್ಮ ಸಂಬಂಧಿ ವಸೀಮ್ ಎಂಬುವರಿಗೆ ಈ ವಿಷಯ ತಿಳಿಸಿದರು. ತಕ್ಷಣ ಅವರು ಬನ್ನಿಮಂಟಪದ ಕೆಎಸ್‌ಆರ್‌ಟಿಸಿ ಡಿಪೋ ಎದುರಿನಲ್ಲಿರುವ ಕೆನರಾ ಬ್ಯಾಂಕ್ ಶಾಖೆಗೆ ತೆರಳಿ ಮಾಹಿತಿ ನೀಡಿ ನಂತರ ಸಿಇಎನ್ ಪೊಲೀಸ್ ಠಾಣೆಗೂ ಹೋಗಿ ಅಗತ್ಯ ದಾಖಲೆಗಳೊಂದಿಗೆ ದೂರು ನೀಡಿದರು. ಪ್ರಕರಣ ದಾಖಲಿಸಿಕೊಂಡಿರುವ ಇನ್ಸ್‌ಪೆಕ್ಟರ್ ಪ್ರಸನ್ನ, ಆನ್‌ಲೈನ್ ವಂಚನೆ ಬಗ್ಗೆ ತಾಂತ್ರಿಕ ವಿಧಾನದ ಮೂಲಕ ತನಿಖೆ ನಡೆಸುತ್ತಿದ್ದಾರೆ. ಇತ್ತ ಬ್ಯಾಂಕ್ ಖಾತೆಯಿಂದ ಹಣ ದೋಖಾ ಆಗಿದ್ದರಿಂದ ಆಘಾತಕ್ಕೊಳಗಾದ ರಶೀದ್ ಖಾನ್ ಅವರು ಮಾನಸಿಕವಾಗಿ ಜರ್ಜರಿತರಾದರು.

ಸಂಬಂಧಿಕರು, ಸ್ನೇಹಿತರೆಲ್ಲಾ ಬಂದು ಧೈರ್ಯ ಹೇಳಿ ಸಮಾಧಾನಪಡಿಸಿದರಾದರೂ, ಮಂಕಾಗಿದ್ದ ರಶೀದ್ ಖಾನ್ ಬುಧವಾರ ರಾತ್ರಿ ಮಲಗಿದ್ದವರು ಬೆಳಗಾಗುವಷ್ಟರಲ್ಲಿ ಸಾವನ್ನಪ್ಪಿದ್ದರು ಎಂದು ಸಂಬಂಧಿ ವಸೀಮ್ ಅವರು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. ಘಟನೆ ಕುರಿತಂತೆ ಎನ್.ಆರ್. ಠಾಣೆ ಪೊಲೀಸರಿಗೂ ದೂರು ನೀಡಿದ್ದೇವೆ ಎಂದು ಅವರು ತಿಳಿಸಿದ್ದಾರೆ.

ದಕ್ಷಿಣ ಆಫ್ರಿಕಾದ 5 ಅಂತಸ್ತಿನ ಕಟ್ಟಡದಲ್ಲಿ ಭಾರಿ ಅಗ್ನಿ ಅವಘಡ; 63 ಮಂದಿ ದುರ್ಮರಣ

ಜೋಹಾನ್ಸ್‌ಬರ್ಗ್: ಬಹುಮಹಡಿ ಕಟ್ಟಡದಲ್ಲಿ ಸಂಭವಿಸಿದ ಭೀಕರ ಅಗ್ನಿ ಅವಘಡದಲ್ಲಿ ಕನಿಷ್ಠ 63 ಮಂದಿ ಮೃತಪಟ್ಟಿದ್ದು 43 ಮಂದಿ ಗಾಯಗೊಂಡಿರುವ ಘಟನೆ ದಕ್ಷಿಣಆಫ್ರಿಕಾದ ಮಧ್ಯ ಜೋಹಾನ್ಸ್‌ಬರ್ಗ್‌ನಲ್ಲಿ ಸಂಭವಿಸಿದೆ. ಘಟನೆಯ ಕುರಿತು ತುರ್ತು ನಿರ್ವಹಣಾ ಸೇವೆಗಳ ವಕ್ತಾರ ರಾಬರ್ಟ್ ಮುಲಾಡ್ಜಿ ಟ್ವೀಟ್ ಮಾಡಿದ್ದು, ಅಗ್ನಿ ಅವಘಡದಲ್ಲಿ ಸುಮಾರು 63 ಮಂದಿ ಮೃತಪಟ್ಟಿದ್ದು ಜೊತೆಗೆ 43ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ ಎಂದು ಹೇಳಿದ್ದಾರೆ.

ಗುರುವಾರ ಬೆಳಿಗ್ಗೆ ಘಟನೆ ನಡೆದಿದ್ದು ಹತ್ತಕ್ಕೂ ಹೆಚ್ಚು ಅಗ್ನಿಶಾಮಕ ವಾಹನಗಳು ಬೆಂಕಿ ನಂದಿಸುವ ಕಾರ್ಯ ನಡೆಸುತ್ತಿವೆ ಎಂದು ತಿಳಿಸಿದ್ದಾರೆ. ಗಾಯಗೊಂಡವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಹೇಳಿದ್ದಾರೆ. ಬೆಂಕಿಯನ್ನು ಬಹುಮಟ್ಟಿಗೆ ನಂದಿಸಲಾಗಿದ್ದು, ಶೋಧ ಮತ್ತು ರಕ್ಷಣಾ ಕಾರ್ಯಾಚರಣೆ ನಡೆಯುತ್ತಿದ್ದು, ಸಾವಿನ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದೆ. ಪ್ರಸ್ತುತ ಮೃತಪಟ್ಟಿರುವ 63 ಮಂದಿಯಲ್ಲಿ ಒಂದು ಮಗುವಿದೆ. ಕಟ್ಟಡದಲ್ಲಿ ಸುಮಾರು 200 ಮಂದಿ ಇದ್ದರು ಎಂಬ ಮಾಹಿತಿ ಇದೆ ಎಂದು ತಿಳಿಸಿದ್ದಾರೆ. ಬೆಂಕಿ ಅವಘಡಕ್ಕೆ ನಿಖರ ಕಾರಣ ಇನ್ನಷ್ಟೇ ತಿಳಿದು ಬರಬೇಕಾಗಿದೆ.

ಅಗ್ನಿಶಾಮಕ ದಳದ ಕಟ್ಟಡ ದುರಸ್ತಿಗೆ ಮೀನಮೇಷ !

ಸರ್ಕಾರದ ಕಟ್ಟಡ ಸಂರಕ್ಷಣೆಗೆ 'ಅನುದಾನ' ಲೆಕ್ಕಾಚಾರದಲ್ಲಿ ನಿರತರಾಗಿರುವ ಅಧಿಕಾರ ವರ್ಗ

ಮೈಸೂರು, ಆ.31(ಜಿಎ)–ಮೈಸೂರಿನ ಸರಸ್ವತಿಪುರಂನಲ್ಲಿರುವ 120 ವರ್ಷಗಳಷ್ಟು ಹಳೆಯದಾದ ಅಗ್ನಿಶಾಮಕ ದಳದ ಕಟ್ಟಡದ ನವೀಕರಣಕ್ಕೆ ಪುರಾತತ್ವ ವಸ್ತು ಸಂಗ್ರಹಾಲಯ ಹಾಗೂ ಪರಂಪರೆ ಇಲಾಖೆಯು ಅಂದಾಜು 3.90ಕೋಟಿ ರೂ. ವೆಚ್ಚದ ವರದಿಯನ್ನು ಜಿಲ್ಲಾಡಳಿತಕ್ಕೆ ಸಲ್ಲಿಸಲು ಮುಂದಾಗಿದೆ.

ಕಳೆದ ನಾಲ್ಕು ವರ್ಷಗಳ ಹಿಂದೆ ಸುರಿದ ಭಾರಿ ಮಳೆಗೆ ಶಿಥಿಲಗೊಂಡಿದ್ದ ಅಗ್ನಿಶಾಮಕ ದಳದ ಕಟ್ಟಡದ ಮುಂಭಾಗ ಕುಸಿದಿತ್ತು. ಆದರೆ, ಈವರೆಗೂ ದುರಸ್ತಿ ಮಾಡಲು ಯಾರೂ ಮುಂದಾಗಲಿಲ್ಲ. ಪುರಾತತ್ವ ಇಲಾಖೆಯೂ 3,90,81,727 ರೂ. ವೆಚ್ಚದಲ್ಲಿ ಇಡೀ ಕಟ್ಟಡದ ದುರಸ್ತಿ ಮಾಡಲು ಜಿಲ್ಲಾಡಳಿತಕ್ಕೆ ವಾರದೊಳಗೆ ವರದಿ ಸಲ್ಲಿಸಲಿದೆ.



2019ರ ಆಗಸ್ಟ್‌ನಲ್ಲಿ ಸುರಿದ ಭಾರಿ ಮಳೆಗೆ ಕುಸಿದ ಅಗ್ನಿಶಾಮಕ ದಳದ ಕಟ್ಟಡದ ಚಿತ್ರ

ಕಳೆದ ನಾಲ್ಕು ವರ್ಷಗಳ ಹಿಂದೆ ಘಟನೆ ನಡೆದಾಗ, ಮುಖ್ಯಮಂತ್ರಿ, ಮಾಜಿ ಮುಖ್ಯಮಂತ್ರಿ, ಒಂದೆರಡು ಸಚಿವರು ಮತ್ತು ಸ್ಥಳೀಯ ಶಾಸಕರು ಸೇರಿದಂತೆ ವಿವಿಐಪಿಗಳು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಶೀಘ್ರ ದುರಸ್ತಿ ಮತ್ತು ಪುನಃಸ್ಥಾಪನೆ ಕಾರ್ಯಗಳ ಭರವಸೆ ನೀಡಿದ ನಂತರ ಛಾಯಾಚಿತ್ರಗಳಿಗೆ ಸೀಮಿತವಾಯಿತೇ ಹೊರತು ಯಾವುದು ಕಾರ್ಯ ರೂಪಕ್ಕೆ ಬರಲಿಲ್ಲ.

ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ ಮತ್ತು ಕೊಡಗು ಸೇರಿದಂತೆ ಐದು ಜಿಲ್ಲೆಗಳಿಗೆ, ಸರಸ್ವತಿಪುರಂ ಅಗ್ನಿಶಾಮಕ ದಳ ಕೇಂದ್ರ ಕಚೇರಿಯಾಗಿದ್ದು, ಕಟ್ಟಡ ಭಾಗಶಃ ಕುಸಿತದ ನಂತರ, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಮುಖ್ಯ ಕಚೇರಿಯನ್ನು ಹೆಬ್ಬಾಳ ಅಗ್ನಿಶಾಮಕ ಠಾಣೆಗೆ ಸ್ಥಳಾಂತರಿಸಲಾಯಿತು ಮತ್ತು ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ ಮತ್ತು ಜಿಲ್ಲಾ ಅಗ್ನಿಶಾಮಕ ಅಧಿಕಾರಿಯ ಕಚೇರಿಗಳನ್ನು ಬನ್ನಿಮಂಟಪದ ಅಗ್ನಿಶಾಮಕ ಠಾಣೆಗೆ ಸ್ಥಳಾಂತರಿಸಲಾಯಿತು. ಆದರೆ, ಈಗಲೂ 60 ಮಂದಿ ಸಿಬ್ಬಂದಿ ಈ ಕಟ್ಟಡದಲ್ಲಿ ತಮ್ಮ ಜೀವವನ್ನು ಕೈಯ್ಯಲಿಡಿದು ಕೆಲಸ ಮಾಡುತ್ತಿದ್ದಾರೆ.

ಕಟ್ಟಡದ ಮೂಲ ಸ್ವರೂಪಕ್ಕೆ ಧಕ್ಕೆ ಆಗದಂತೆ ದುರಸ್ತಿ ಮಾಡಿಸುವ ನಿಟ್ಟಿನಲ್ಲಿ ಲೋಕೋಪಯೋಗಿ ಇಲಾಖೆಗೆ ಆರು ತಿಂಗಳ ಹಿಂದೆಯೇ ಪತ್ರ ಬರೆಯಲಾಗಿತ್ತು. ನಂತರ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಸರಸ್ವತಿಪುರಂನ ಅಗ್ನಿಶಾಮಕ ದಳ ಕಚೇರಿಯ ಮುಂಭಾಗವನ್ನು ದುರಸ್ತಿ ಮಾಡಲು 45 ಲಕ್ಷ ರೂ. ವೆಚ್ಚ ತಗುಲಲಿದೆ ಎಂದು ಅಂದಾಜಿಸಿದ್ದರು ಎಂದು ಅಗ್ನಿಶಾಮಕ ದಳ ಮೈಸೂರು ಪ್ರಾಂತ್ಯದ ಮುಖ್ಯ ಅಗ್ನಿಶಾಮಕ ಅಧಿಕಾರಿ ಪಿ.ಎಸ್. ಜಯರಾಮಯ್ಯ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ನಂತರ ಇಲಾಖೆಯ ಖಾತೆಯಲ್ಲಿದ್ದ 22 ಲಕ್ಷ ರೂ.ಗಳನ್ನು ಲೋಕೋಪಯೋಗಿ ಇಲಾಖೆಗೆ ಜಮಾ ಮಾಡಲಾಗಿದೆ. ಆದರೆ, ಬಾಕಿ ಹಣ ಜಮಾ ಮಾಡಿದ ನಂತರ ದುರಸ್ತಿ ಕಾರ್ಯ ಮಾಡುವುದಾಗಿ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಮುಖ್ಯ ಅಗ್ನಿಶಾಮಕ ಅಧಿಕಾರಿ, ಕಟ್ಟಡದ ದುರಸ್ತಿಗೆ ಅನುದಾನ ನೀಡುವಂತೆ ಮುಖ್ಯ ಕಚೇರಿಗೆ ಪತ್ರ ಬರೆದಿದ್ದು, ಇಲಾಖೆಯಲ್ಲಿ ಯಾವುದೇ ಹಣವಿಲ್ಲ ಎಂಬ ಮಾಹಿತಿ ಬಂದಿದೆ ಎಂದರು.

ಅಗ್ನಿಶಾಮಕ ದಳದ ಕಚೇರಿಯ ಮುಂಭಾಗ ಮಾತ್ರವಲ್ಲದೆ, ಇಡೀ ಕಟ್ಟಡವನ್ನು ದುರಸ್ತಿ ಮಾಡಲು ಇಲಾಖೆ ವತಿಯಿಂದ ಅಂದಾಜು 3.90 ಕೋಟಿ ರೂ. ವೆಚ್ಚದ ವರದಿಯನ್ನು ಜಿಲ್ಲಾಡಳಿತಕ್ಕೆ ಸಲ್ಲಿಸಲು ಮುಂದಾಗಿದ್ದೇವೆ ಎಂದು ಪುರಾತತ್ವ, ವಸ್ತು ಸಂಗ್ರಹಾಲಯ ಹಾಗೂ ಪರಂಪರೆ ಇಲಾಖೆ ಆಯುಕ್ತ ಎ.ದೇವರಾಜು ತಿಳಿಸಿದ್ದಾರೆ.

> ಸದ್ಯದಲ್ಲಿಯೇ ಪಾರಂಪರಿಕ ಸಮಿತಿಯೊಟ್ಟಿಗೆ ಚರ್ಚಿಸಿ, ಟೆಂಡರ್ ಕರೆದು, ಆದಷ್ಟು ಬೇಗ ದುರಸ್ತಿ ಮಾಡಿಸಲಾಗುವುದು.
> -ಕೆ.ಹರೀಶ್ ಗೌಡ, ಶಾಸಕ

> ಜಿಲ್ಲಾಡಳಿತದ ವತಿಯಿಂದ ಅನುದಾನ ನೀಡಿದ ತಕ್ಷಣ ಪಾರಂಪರಿಕ ಸಮಿತಿ ಸಲಹೆ ಮೇರೆಗೆ ಕಾಮಗಾರಿ ಆರಂಭಿಸುತ್ತೇವೆ. ಅಗ್ನಿಶಾಮಕ ದಳ ಇಲಾಖೆಯೂ ತಾವೇ ದುರಸ್ತಿ ಮಾಡಿಕೊಳ್ಳುತ್ತೇವೆಂದರೆ ಈ ಕಾರ್ಯಕ್ಕೆ ಪಾರಂಪರಿಕ ಕಟ್ಟಡ ದುರಸ್ತಿ ಮಾಡುವವರನ್ನು ಒದಗಿಸಲಾಗುತ್ತದೆ.
> -ಎ.ದೇವರಾಜು, ಆಯುಕ್ತ ಪುರಾತತ್ವ, ವಸ್ತು ಸಂಗ್ರಹಾಲಯ ಹಾಗೂ ಪರಂಪರೆ ಇಲಾಖೆ

> ಅಗ್ನಿಶಾಮಕ ದಳದ ಮುಖ್ಯ ಕಚೇರಿಯಿಂದ ಬಾಕಿ ಹಣ ಬಿಡುಗಡೆಯಾದರೆ, ಅದನ್ನು ಲೋಕೋಪಯೋಗಿ ಇಲಾಖೆಗೆ ಜಮಾ ಮಾಡಿ, ದುರಸ್ತಿ ಕಾರ್ಯ ಆರಂಭಿಸುತ್ತೇವೆ. ಪುರಾತತ್ವ, ವಸ್ತು ಸಂಗ್ರಹಾಲಯ ಹಾಗೂ ಪರಂಪರೆ ಇಲಾಖೆ ಸಲ್ಲಿಸುತ್ತಿರುವ ವರದಿಯಂತೆ ಅನುದಾನ ಬಿಡುಗಡೆಯಾಗಿ ದುರಸ್ತಿಯಾದರೆ ಒಳಿತು.
> -ಪಿ.ಎಸ್. ಜಯರಾಮಯ್ಯ, ಮುಖ್ಯ ಅಗ್ನಿಶಾಮಕ ಅಧಿಕಾರಿ, ಮೈಸೂರು ಪ್ರಾಂತ್ಯ

ಮೈಸೂರು ಮಿತ್ರ ಶುಕ್ರವಾರ 1 ಸೆಪ್ಟೆಂಬರ್ 2023

ದುಬಾರೆಯಿಂದ ಗಜಪಯಣಕ್ಕೆ ಚಾಲನೆ


ಫೈಲ್ ಚಿತ್ರ

ಕುಶಾಲನಗರ, ಆ.31– ಮೈಸೂರು ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುವ ಗಜಪಡೆಗಳ ಪಯಣಕ್ಕೆ ಸಮೀಪದ ನಂಜರಾಯಪಟ್ಟಣ ಬಳಿಯ ದುಬಾರೆ ಸಾಕಾನೆ ಶಿಬಿರದಿಂದ ಗುರುವಾರ ಚಾಲನೆ ನೀಡಲಾಯಿತು.

ಶಿಬಿರದ ಸಾಕಾನೆಗಳಾದ ಆನೆಕಾಡಿನ ವಿಜಯ, ದುಬಾರೆಯ ಧನಂಜಯ, ಗೋಪಿ, ವಿಜಯ ಹಾಗೂ ಕಂಚನ್ ಸಾಕಾನೆಗಳಿಗೆ ಸಾಂಪ್ರದಾಯಿಕ ಪೂಜೆ ಸಲ್ಲಿಸಿ ಮೊದಲ ಹಂತದ ಆನೆಗಳ ತಂಡಕ್ಕೆ ಬೀಳ್ಕೊಡಲಾಯಿತು. ಕಾವೇರಿ ನದಿ ದಂಡೆ ಮೇಲಿರುವ ಸಾಕಾನೆ ಶಿಬಿರದಲ್ಲಿ ಮೂರು ಸಾಕಾನೆಗಳಿಗೆ ಮಾವುತರು ಪೂಜೆ ಸಲ್ಲಿಸಿ ಹಣ್ಣು ಹಂಪಲುಗಳನ್ನು ನೀಡಿ ನಂತರ ಲಾರಿಗಳ ಮೂಲಕ ನಾಗರ ಹೊಳೆ ಅಭಯಾರಣ್ಯದ ವೀರನಹೊಸಳ್ಳಿಗೆ ಕಳುಹಿಸಿಕೊಡಲಾಯಿತು. ಶುಕ್ರವಾರ ಗಜಪಯಣ ಮೈಸೂರಿನತ್ತ ಪಯಣ ಬೆಳೆಸಲಿದೆ.

ಆನೆಗಳೊಂದಿಗೆ ಮಾವುತರಾದ ಜೆ.ಸಿ. ಭಾಸ್ಕರ್, ನವೀನ್ ಕುಮಾರ್, ಬೋಜಪ್ಪ, ಜೆ.ಡಿ.ವಿಜಯ, ಕಾವಾಡಿಗರಾದ ಶಿವು, ಮಣಿ, ಬಿ.ಪಿ.ಭರತ್, ಮಣಿಕಂಠ ಹಾಗೂ ಕುಟುಂಬದವರು ತೆರಳಿದರು. ಈ ಸಂದರ್ಭ ಕುಶಾಲನಗರ ವಲಯ ಅರಣ್ಯಾಧಿಕಾರಿ ಶಿವರಾಮ್, ದುಬಾರೆ ಉಪ ವಲಯ ಅರಣ್ಯಾಧಿಕಾರಿಗಳು, ವನ್ಯಜೀವಿ ವಿಭಾಗದ ಡಾ. ಮುಜೀಬ್, ಸಿಬ್ಬಂದಿ ಹಾಗೂ ಮಾವುತರು ಹಾಗೂ ಕಾವಾಡಿಗರು ಹಾಜರಾಗಿದ್ದರು.

ಮಡಿಕೇರಿ ನಗರಸಭೆಯಲ್ಲಿ 165 ಹುದ್ದೆಗಳು ಖಾಲಿ



ಸರ್ಕಾರಕ್ಕೆ ಸರ್ವಪಕ್ಷ ನಿಯೋಗ ತೆರಳಲು ನಿರ್ಧಾರ

● ಅಭಿವೃದ್ಧಿ ಕಾರ್ಯಗಳ ಸಮರ್ಪಕ ನಿರ್ವಹಣೆಗೆ ತೊಡಕು

ಮಡಿಕೇರಿ, ಆ.31– ದಿನದಿಂದ ದಿನಕ್ಕೆ ಬೆಳೆಯುತ್ತಿರುವ ಮಡಿಕೇರಿ ನಗರದ ಅಭಿವೃದ್ಧಿ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಲು ಅಗತ್ಯವಾದ 165 ಹುದ್ದೆಗಳು ನಗರ ಸಭೆಯಲ್ಲಿ ಖಾಲಿ ಇವೆ. ಇವುಗಳ ಭರ್ತಿಗೆ ಸರ್ಕಾರಕ್ಕೆ ಮನವಿ ಮಾಡಲು ಸರ್ವಪಕ್ಷಗಳ ನಿಯೋಗ ತೆರಳುವ ಮಹತ್ವದ ನಿರ್ಧಾರವನ್ನು ನಗರಸಭಾ ಸಾಮಾನ್ಯ ಸಭೆಯಲ್ಲಿ ಕೈಗೊಳ್ಳಲಾಯಿತು.

ಮಡಿಕೇರಿ ನಗರಸಭಾ ಅಧ್ಯಕ್ಷೆ ಅನಿತಾ ಪೂವಯ್ಯ ಅವರ ಅಧ್ಯಕ್ಷತೆಯಲ್ಲಿ ನಗರಸಭೆಯ ಸಭಾಂಗಣದಲ್ಲಿ ಆಯೋಜಿತ ಸಾಮಾನ್ಯ ಸಭೆಯಲ್ಲಿ ಕಳೆದ ಸಭೆಯ ನಡಾವಳಿಗಳನ್ನು ಓದಿ ಅನುಮೋದಿಸುವ ಹಂತದಲ್ಲಿ, ನಗರ ವ್ಯಾಪ್ತಿಯ ಪ್ರತಿ ಮನೆಯ ಆಸ್ತಿಯ ವಿವರಗಳನ್ನು ದಾಖಲು ಮಾಡುವ ಸರ್ವೇ ಕಾರ್ಯದಲ್ಲಿ ಪ್ರತಿ ಮನೆಯ ಸರ್ವೇ ಕಾರ್ಯಕ್ಕೆ 50 ರೂ. ನಿಗದಿಪಡಿಸಿರುವ ವಿಚಾರವನ್ನು, ಸದಸ್ಯ ಮನ್ಸೂರ್ ಪ್ರಸ್ತಾಪಿಸಿದರು.

ಅಧ್ಯಕ್ಷೆ ಅನಿತಾ ಪೂವಯ್ಯ ಪ್ರತಿಕ್ರಿಯಿಸಿ, ಸರ್ಕಾರದ ಮಾನದಂಡದಂತೆ ಪ್ರತಿ ಮನೆಗೆ 30 ರೂ.ಗಳಾಗಿದೆ. ಆದರೆ, ಈ ಮೊತ್ತಕ್ಕೆ ಸರ್ವೇ ಕಾರ್ಯ ನಡೆಸಲು ಆಗಮಿಸಿದ್ದ ಹೆಚ್.ಡಿ. ಕೋಟೆ ಸಂಸ್ಥೆ ಒಪ್ಪದೆ ಹಿಂತೆರಳಿತು. ಇದೀಗ 50 ರೂ. ನಿಗದಿಪಡಿಸಿದ್ದರು ಸರ್ವೇ ಕಾರ್ಯಕ್ಕೆ ಯಾರೂ ಮುಂದೆ ಬಂದಿಲ್ಲವೆಂದು ಹೇಳಿದರು. ನಗರಸಭೆಯ ಸಿಬ್ಬಂದಿಗಳಿಂದಲೇ ಸರ್ವೇ ಕಾರ್ಯ ನಡೆಸಬಹುದಲ್ಲವೇ ಎಂದು ಸದಸ್ಯರು ಪ್ರಶ್ನಿಸಿದ ಸಂದರ್ಭ ನಗರಸಭೆಯಲ್ಲಿ ಖಾಲಿ ಹುದ್ದೆಗಳು ಭರ್ತಿಯಾಗದೆ, ಇರುವ ಸಿಬ್ಬಂದಿಗಳೇ ಎಲ್ಲಾ ಕೆಲಸ ಕಾರ್ಯಗಳನ್ನು ನಿರ್ವಹಿಸಬೇಕಾದ ಒತ್ತಡಕ್ಕೆ ಸಿಲುಕಿರುವ ಅಂಶ ಬೆಳಕಿಗೆ ಬಂತು.

ನಗರದಲ್ಲಿ ಬೀದಿ ನಾಯಿಗಳ ಕಾಟ

ಮಡಿಕೇರಿ ನಗರ ವ್ಯಾಪ್ತಿಯಲ್ಲಿ ಬೀದಿನಾಯಿಗಳ ಕಾಟ ಹೆಚ್ಚಾಗಿರುವ ವಿಚಾರ ವನ್ನು ಸದಸ್ಯ ಅಮಿನ್ ಮೊಹಿಸಿನ್ ಪ್ರಸ್ತಾಪಿಸಿ, ಇದಕ್ಕೆ ಸೂಕ್ತ ಕ್ರಮ ಕೈಗೊಳ್ಳ ಬೇಕು. ಬೀದಿನಾಯಿಗಳಿಗೆ ಸಂತಾನ ಶಕ್ತಿಹರಣ ಶಸ್ತ್ರಚಿಕಿತ್ಸೆ ಮಾಡಿದರು ಮತ್ತೆ ಅವುಗಳ ಸಂಖ್ಯೆ ಹೆಚ್ಚಿರುವುದನ್ನು ಸಭೆಯ ಗಮನಕ್ಕೆ ತಂದರು. ಇದರಿಂದ ಉಂಟಾಗುವ ಅನಾಹುತಗಳ ಬಗ್ಗೆ ಸದಸ್ಯರನ್ನು ಎಚ್ಚರಿಸಿದರು. ಸ್ಥಾಯಿ ಸಮಿತಿ ಅಧ್ಯಕ್ಷ ಎಸ್.ಸಿ. ಸತೀಶ್ ಮಾತನಾಡಿ, ನಗರದ ಮಾರುಕಟ್ಟೆ ಆವರಣದಲ್ಲಿ ಟೆಂಡರ್‌ನಿಂದ ಪಡೆದ ಮೀನು, ಕೋಳಿ ಮಳಿಗೆಗಳಿವೆ. ಇವುಗಳಲ್ಲದೆ, ಬೀದಿ ಬೀದಿಗಳಲ್ಲಿ ಮೀನು, ಕೋಳಿ ಮಳಿಗೆಗಳಿದ್ದು, ಇವುಗಳಿಂದಲೇ ನಾಯಿಗಳ ಉಪಟಳ ಹೆಚ್ಚಿದೆ. ಬೀದಿ ಬದಿಯ ಇಂತಹ ಮಳಿಗೆ ಮುಚ್ಚಿಸಲು ಕ್ರಮ ಕೈಗೊಳ್ಳುವಂತೆ ಅಧ್ಯಕ್ಷರನ್ನು ಒತ್ತಾಯಿಸಿದರಾದರು, ಇದಕ್ಕೆ ವಿರೋಧ ಪಕ್ಷದ ಹಲ ಸದಸ್ಯರು ವಿರೋಧ ವ್ಯಕ್ತಪಡಿಸಿದ ಘಟನೆ ನಡೆಯಿತು. ಸಭೆಯಲ್ಲಿ ನಗರಸಭಾ ಉಪಾಧ್ಯಕ್ಷೆ ಸವಿತಾ ರಾಕೇಶ್, ಪೌರಾಯುಕ್ತ ವಿಜಯ ಅವರುಗಳು ಉಪಸ್ಥಿತರಿದ್ದರು.

ಸರಕಾರಕ್ಕೆ ಮಾಹಿತಿ ಇದೆ: ಈ ವೇಳೆ ನಗರಸಭಾ ಸಿಬ್ಬಂದಿ ತಾಹಿರ್ ಮಾತನಾಡಿ, ಇರುವ ಸಿಬ್ಬಂದಿಗಳು ವಿವಿಧ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿರುವುದರಿಂದ ಹೆಚ್ಚಿನ ಒತ್ತಡ ನಿರ್ಮಾಣವಾಗಿದೆ ಎಂದು ಮಾಹಿತಿ ನೀಡಿದರು. ಸದಸ್ಯ ಅಮಿನ್ ಮೊಹಿಸಿನ್ ಮಾತನಾಡಿ, ಈ ಬಗ್ಗೆ ಶಾಸಕರು, ಸರ್ಕಾರಕ್ಕೆ ಮಾಹಿತಿ ನೀಡಿ, ಖಾಲಿ ಹುದ್ದೆ ಭರ್ತಿ ಮಾಡುವ ಕೆಲಸ ಮಾಡಬೇಕೆಂದು ಆಗ್ರಹಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಅಧ್ಯಕ್ಷರು, ಈಗಾಗಲೇ ಈ ಬಗ್ಗೆ ಶಾಸಕರಿಗೆ, ಸರ್ಕಾರಕ್ಕೆ ಮಾಹಿತಿ ನೀಡಲಾಗಿದೆ ಎಂದು ತಿಳಿಸಿದರು. ಸ್ಥಾಯಿ ಸಮಿತಿ ಅಧ್ಯಕ್ಷ ಎಸ್.ಸಿ. ಸತೀಶ್, ಖಾಲಿ ಹುದ್ದೆಗಳ ಭರ್ತಿ ಮಾಡುವಲ್ಲಿ ವಿರೋಧ ಪಕ್ಷಗಳ ಜವಾಬ್ದಾರಿಯೂ ಇದೆಯೆಂದು ತೀಕ್ಷ್ಣವಾಗಿ ನುಡಿದರು. ಶಾಸಕರಿಗೆ ಈ ಬಗ್ಗೆ ಮನವರಿಕೆ ಮಾಡಿಕೊಟ್ಟು, ಸರ್ಕಾರದ ಮೂಲಕ ಖಾಲಿ ಹುದ್ದೆ ಭರ್ತಿಗೆ ಮುಂದಾಗುವಂತೆ ಹೇಳುವುದರೊಂದಿಗೆ ಚರ್ಚೆ ಕಾವೇರಿತು. ಈ ಸಂದರ್ಭ ಸದಸ್ಯ ಮನ್ಸೂರ್, ಈ ಹಿಂದೆ ನಿಮ್ಮದೆ ಶಾಸಕರು, ಸಂಸದರು, ಸರ್ಕಾರ ಇದ್ದಾಗ ಈ ಕೆಲಸ ಮಾಡಲಿಲ್ಲವಲ್ಲ ಎಂದು ತಿರುಗೇಟು ನೀಡಿದರು.

'ತಾಯಿತ ಕಟ್ಟಬೇಕು': ನಗರಸಭೆಯಲ್ಲಿ ಆರೋಗ್ಯ ಪರಿವೀಕ್ಷಕರ ಹುದ್ದೆ, ಸರ್ವೇಯರ್‌ಗಳು ಹೀಗೆ ಪ್ರಮುಖ ಹುದ್ದೆಗಳಲ್ಲಿ ಇರುವವರು ಒಂದೋ ವರ್ಗಾವಣೆಯಾಗಿ ಇಲ್ಲವೇ ಅನಾರೋಗ್ಯ ಸಮಸ್ಯೆಗಳಿಂದ ಕರ್ತವ್ಯದಲ್ಲಿ ಇಲ್ಲದೆ ಇರುವುದರತ್ತ ಸದಸ್ಯ ಮನ್ಸೂರ್ ಬೊಟ್ಟು ಮಾಡಿದರು. ನಗರಸಭೆಯಿಂದ ಪ್ರಮುಖವಾಗಿ ನಡೆಯಬೇಕಾದ ಕೆಲಸ ಕಾರ್ಯಗಳು ಅಗತ್ಯ ಸಿಬ್ಬಂದಿಗಳ ಕೊರತೆಯಿಂದ ನಡೆಯುತ್ತಿಲ್ಲ. ಎಲ್ಲರೂ ತೀವ್ರ ಕೆಲಸದ ಒತ್ತಡದಿಂದ ಅನಾರೋಗ್ಯ ಪೀಡಿತರಾಗುತ್ತಿದ್ದಾರೆ. ಹೀಗಾಗಿ ನಗರಸಭೆಗೆ ಒಂದು 'ತಾಯಿತ ಕಟ್ಟಬೇಕು' ಎಂದು ಹಾಸ್ಯದ ಧಾಟಿಯಲ್ಲಿ ನುಡಿದರು.

ವಿಷಯಕ್ಕೆ ಸಂಬಂಧಿಸಿದಂತೆ ಅಧ್ಯಕ್ಷರು, ಖಾಲಿ ಹುದ್ದೆಗಳ ಭರ್ತಿಗೆ ಸರ್ಕಾರಕ್ಕೆ ಮನವರಿಕೆ ಮಾಡಿಕೊಡಲು, ಸರ್ವ ಪಕ್ಷಗಳ ಸದಸ್ಯರ ನಿಯೋಗ ತೆರಳುವ ಸಲಹೆ ನೀಡಿದರು. ಇದನ್ನು ಸಭೆ ಅನುಮೋದಿಸಿತು.

ಕಕ್ಕಬ್ಬೆಯ ಪಾಡಿ ಇಗ್ಗುತ್ತಪ್ಪ ದೇವಾಲಯದ ಪೌಳಿ ಉದ್ಘಾಟನೆ

ಪ್ರವಾಸೋದ್ಯಮ ಇಲಾಖೆಯಿಂದ ನಿರ್ಮಿಸಿದ್ದ ಕಟ್ಟಡ ಸರ್ಕಾರದಿಂದ ದುರಸ್ತಿ





ನಾಪೋಕ್ಲು, ಆ.31– ಜಿಲ್ಲೆಯ ಪ್ರಮುಖ ದೇವಾಲಯವಾದ ಪಾಡಿ ಇಗ್ಗುತ್ತಪ್ಪ ದೇವಾಲಯಕ್ಕೆ ಮಾಜಿ ಸಂಸದ ಡಿ.ಕುಪೇಂದ್ರ ರೆಡ್ಡಿ ಅನುದಾನ ಹಾಗೂ ಸ್ವಂತ ದುಡ್ಡಿನಲ್ಲಿ ವಿಶಾಲವಾದ ಪೌಳಿ, ಬೋಧನಾ ಇತರ ಕಟ್ಟಡ ನಿರ್ಮಿಸಲಾಗಿದೆ ಎಂದು ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಸಮೀಪದ ಕಕ್ಕಬ್ಬೆಯ ಪಾಡಿ ಇಗ್ಗುತ್ತಪ್ಪ ದೇವಾಲಯದ ಪೌಳಿ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡು ನಂತರ ಮಾಧ್ಯಮದೊಂದಿಗೆ ಮಾತನಾಡಿದ ಅವರು, ಆರಾಧ್ಯ ದೈವ ಇಗ್ಗುತ್ತಪ್ಪ ದೇವಾಲಯದ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಲೋಕಾರ್ಪಣೆ ಮಾಡ ಲಾಗಿದೆ. ಪ್ರವಾಸೋದ್ಯಮ ಇಲಾಖೆಯು ಈ ಹಿಂದೆ ನಿರ್ಮಿಸಿದ್ದ ಕಟ್ಟಡವನ್ನು ಸರ್ಕಾರದ ವತಿಯಿಂದ ದುರಸ್ತಿ ಮಾಡಲಾಗುವುದು. ಈ ಬಗ್ಗೆ ಸಂಬಂಧಿಸಿದವರಿಗೆ ಸೂಚಿಸಲಾಗಿದೆ ಎಂದರು.

ದೇವಾಲಯಕ್ಕೆ ಅತ್ಯಗತ್ಯವಾದ ಊಟದ ಸಭಾಂಗಣವನ್ನು ಲೋಕಾರ್ಪಣೆ ಮಾಡಲಾಗಿದ್ದು, ಇದೊಂದು ಐತಿಹಾಸಿಕ ಕ್ಷಣ ಎಂದರು. ಈ ಸಂದರ್ಭ ದೇವಾಲಯದಲ್ಲಿ ವಿಶೇಷ ಪೂಜೆಯನ್ನು ನೆರವೇರಿಸಿ ಮಳೆ ಕೊರತೆ ನೀಗಿ ರೈತರು ಬೆಳೆದ ಬೆಳೆ ಸಮೃದ್ಧಿಯಾಗಿ ನಾಡು ಸುಭಿಕ್ಷೆಯಾಗಲಿ ಎಂದು ಪ್ರಾರ್ಥಿಸಿದರು.

ಮಾಜಿ ಸಂಸದ ಡಿ.ಕುಪೇಂದ್ರ ರೆಡ್ಡಿ ಮಾತನಾಡಿ ದೇವಾಲಯದಲ್ಲಿ ಇಂದು ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸಿ . ಭಕ್ತರ ಒಳಿತಿಗಾಗಿ ಅಭಿವೃದ್ಧಿಗೆ ಕಾರ್ಯಗಳನ್ನು ಹಮ್ಮಿಕೊಳ್ಳಲಾಗಿದೆ. ಎಲ್ಲರಿಗೂ ದೇವರು ಒಳ್ಳೆಯದನ್ನು ಅನುಗ್ರಹಿಸಲಿ. ಈ ಕಾರ್ಯದಲ್ಲಿ ಮಾಜಿ ಸಂಸದ ಸಿ.ಎಸ್ ಪುಟ್ಟರಾಜು ಅವರ ಸಹಕಾರ ತುಂಬಾ ಇದೆ ಎಂದರು.

ಮಾಜಿ ಸಂಸದ ಸಿ.ಎಸ್. ಪುಟ್ಟರಾಜು ಮಾತನಾಡಿ, ಭಕ್ತರ ಒಳಿತಿಗಾಗಿ ಅಭಿವೃದ್ಧಿ ಕಾರ್ಯಗಳನ್ನು ಹಮ್ಮಿಕೊಳ್ಳಲಾಗಿದೆ.85 ಲಕ್ಷ ರೂ ವೆಚ್ಚದಲ್ಲಿ ಮಾಜಿ ಸಂಸದ ಡಿ. ಕುಪೇಂದ್ರ ರೆಡ್ಡಿ ಸ್ವಂತ ಖರ್ಚಿನಲ್ಲಿ ಪೌಳಿಯನ್ನು ಹಾಗೂ ಸಂಸದರ ನಿಧಿಯಿಂದ 20 ಲಕ್ಷ ರೂ.ವೆಚ್ಚದಲ್ಲಿ ಭೋಜನಾಲಯ ನಿರ್ಮಿಸಲಾಗಿದೆ ಎಂದರು.

ಪೌಳಿ ಉದ್ಘಾಟನೆಯ ಅಂಗವಾಗಿ ಮಂಗಳವಾರ ಸಂಜೆ ಆಶ್ಲೇಷ ಬಲಿ, ವಾಸ್ತು ಹೋಮ, ಸುದರ್ಶನ ಹೋಮ, ವಾಸ್ತು ಬಲಿ ನಡೆಯಿತು. ಬುಧವಾರ ಬೆಳಗ್ಗೆ ಲಕ್ಷ್ಮಿ ಗಣಪತಿ ಹೋಮ, ರುದ್ರಾಭಿಷೇಕ, ಶತಾರುದ್ರಾಭಿಷೇಕ, ರುದ್ರ ಹೋಮ ಹಾಗೂ ಸುಬ್ರಹ್ಮಣ್ಯ ಹೋಮ ನಡೆಯಿತು. ಪೌಳಿ ಉದ್ಘಾಟನೆಯ ಬಳಿಕ ತುಲಾಭಾರ ಸೇವೆ, ಮಹಾಮಂಗಳಾರತಿ, ದೇವರ ನೃತ್ಯ ಬಲಿ ನಡೆಯಿತು. ಬಳಿಕ ಭಕ್ತಾದಿಗಳಿಗೆ ಅನ್ನದಾನ ಏರ್ಪಡಿಸಲಾಗಿತ್ತು.

ಈ ಸಂದರ್ಭ ಭಕ್ತ ಜನ ಸಂಘದ ಅಧ್ಯಕ್ಷ ಕಾಂಡಂಡ ಜೋಯಪ್ಪ. ಉಪ ಅಧ್ಯಕ್ಷ ಪರದಂಡ ಡಾಲಿ. ಕಾರ್ಯದರ್ಶಿ ಬೊಳದಂಡ ಲಲಿತಾ ನಂದಕುಮಾರ್. ಅಖಿಲ ಕೊಡವ ಸಮಾಜದ ಅಧ್ಯಕ್ಷ ಹಾಗೂ ದೇವತಕ್ಕರಾದ ಪರದಂಡ ಸುಬ್ರಮಣಿ ಕಾವೇರಪ್ಪ, ನಿರ್ದೇಶಕರುಗಳಾದ ಕಲಿಯಂಡ ಹ್ಯಾರಿ ಮಂದಣ್ಣ. ಡಾ. ಸಣ್ಣುವಂಡ ಕಾವೇರಪ್ಪ, ಪಾಂಡಂಡ ನರೇಶ್. ಮತ್ತು ಭಕ್ತ ಜನಸಂಘದ ಮಾಜಿ ಅಧ್ಯಕ್ಷ ಕಲ್ಯಾಟಂಡ ಮುತ್ತಪ್ಪ. ವ್ಯವಸ್ಥಾಪನ ಸಮಿತಿಯ ಮಾಜಿ ಅಧ್ಯಕ್ಷ ಬಾಚಮಂಡ ಪೂವಣ್ಣ, ಲವ ಚಿಣ್ಣಪ್ಪ, ಖಜಾಂಚಿ ನಂಬಡಮಂಡ ಸುಬ್ರಮಣಿ, ಪಾರುಪತ್ತೆಗಾರ ಪರದಂಡ ಪ್ರಿನ್ಸ್ ತಮ್ಮಯ್ಯ, ಕಂದಾಯ ಪರಿವೀಕ್ಷಕ ರವಿಕುಮಾರ್ ಮತ್ತು ಸಿಬ್ಬಂದಿ. ನಾಡಿನ ತಕ್ಕ ಮುಖ್ಯಸ್ಥರು, ವಿವಿಧ ಸಂಘ ಸಂಸ್ಥೆ ಗಳ ಪದಾಧಿಕಾರಿಗಳು, ಭಕ್ತಾದಿಗಳು ಉಪಸ್ಥಿತರಿದ್ದರು

ದೇವಾಲಯದ ಮುಖ್ಯ ಅರ್ಚಕ ಕುಶ ಭಟ್ ಹಾಗೂ ಜಗದೀಶ್, ಶ್ರೀಕಾಂತ್ ದೇವಾಲಯದಲ್ಲಿ ತುಲಾಭಾರ ಸೇವೆ, ವಿಶೇಷ ಮಹಾ ಪೂಜೆ, ದೇವರ ನೃತ್ಯ ಬಲಿ ಪೂಜಾ ವಿಧಿ ವಿಧಾನಗಳನ್ನು ನೆರವೇರಿಸಿದರು.

ಪರಿಹಾರ ಆದೇಶ ಪಾಲಿಸದ ಕೆಎಸ್‌ಆರ್‌ಟಿಸಿ ಸಂಸ್ಥೆ

ವಿರಾಜಪೇಟೆ ನ್ಯಾಯಾಲಯದಿಂದ ಬಸ್ ಜಪ್ತಿ



ವಿರಾಜಪೇಟೆ, ಆ.31– ವಾಹನ ಅಪಘಾತ ಪ್ರಕರಣವೊಂದರಲ್ಲಿ ನ್ಯಾಯಾಲಯದ ಪರಿಹಾರ ಆದೇಶ ಪಾಲಿಸದ ಕೆಎಸ್‌ಆರ್‌ಟಿಸಿ ಸಂಸ್ಥೆಯ ಬಸ್ ಒಂದನ್ನು ನ್ಯಾಯಾಲಯ ಜಪ್ತಿ ಮಾಡಿದ ಘಟನೆ ವಿರಾಜಪೇಟೆಯಲ್ಲಿ ನಡೆದಿದೆ. ಮುಂದಿನ ಕಾನೂನು ಪ್ರಕ್ರಿಯೆಗಳು ನ್ಯಾಯಾಲಯದಲ್ಲಿ ನಡೆಯಲಿದೆ ಎಂದು ಫಿರ್ಯಾದಿ ಪರವಾಗಿ ವಾದಿಸಿದ್ದ ವಕೀಲರಾದ ಟಿ.ಪಿ. ಕೃಷ್ಣ ಅವರು ಮಾಹಿತಿ ನೀಡಿದ್ದಾರೆ.

ಏನಿದು ಪ್ರಕರಣ: ಫಾತಿಮಾ ಅಫ್ಸರ್ ಎಂಬವರ ಸ್ಯಾಂಟ್ರೋ ಕಾರು ಮತ್ತು ಕೆಎಸ್‌ಆರ್‌ಟಿಸಿ ಬಸ್ ನಡುವೆ 2015ರಲ್ಲಿ ವಿರಾಜಪೇಟೆ–ಹುಣಸೂರು ಮುಖ್ಯ ರಸ್ತೆಯಲ್ಲಿ ಅಪಘಾತ ಸಂಭವಿಸಿ, ಕಾರು ಸಂಪೂರ್ಣ ಜಖಂಗೊಂಡಿತ್ತು ಈ ಹಿನ್ನೆಲೆಯಲ್ಲಿ ವಿರಾಜಪೇಟೆ ಜಿಲ್ಲಾ ನ್ಯಾಯಾಲಯದಲ್ಲಿ ಫಾತಿಮಾ ಅಫ್ಸರ್ ಅವರು ಕಾರು ಜಖಂ ಆಗಿರುವುದಕ್ಕೆ ಪರಿಹಾರ ನೀಡುವಂತೆ ದಾವೆ ಹೂಡಿದ್ದರು. ಅರ್ಜಿ ಪರಿಗಣಿಸಿ ವಿಚಾರಣೆ ನಡೆಸಿದ ನ್ಯಾಯಾಲಯ 1 ಲಕ್ಷ 48 ಸಾವಿರ ರೂ.ಗಳ ಪರಿಹಾರವನ್ನು ಬಡ್ಡಿ ಸಹಿತ ಪಾವತಿಸಲು ಆದೇಶ ಹೊರಡಿಸಿತ್ತು. ಈ ಬೆಳವಣಿಗೆಗಳ ನಡುವೆ ಕೆಎಸ್ ಆರ್‌ಟಿಸಿ ಸಂಸ್ಥೆ ಕೆಳ ನ್ಯಾಯಾಲಯದ ಆದೇಶ ಪ್ರಶ್ನಿಸಿ ಹೈಕೋಟ್‌ಗೆ ಮೇಲ್ಮನವಿ ಸಲ್ಲಿಸಿತ್ತು. ಈ ನಡುವೆ ಕೆಎಸ್‌ಆರ್‌ಟಿಸಿ ಸಂಸ್ಥೆಯ ಮೇಲ್ಮನವಿಯನ್ನು ಹೈಕೋರ್ಟ್ ವಜಾಗೊಳಿಸಿತ್ತು.

ಬಸ್ ಜಪ್ತಿಗೆ ಆದೇಶ: ಈ ನಡುವೆ ವಿರಾಜಪೇಟೆ ಕೋರ್ಟ್‌ನಲ್ಲಿ ಪರಿಹಾರಕ್ಕೆ ಸಂತ್ರಸ್ತರು ತಮ್ಮ ವಕೀಲರ ಮೂಲಕ ಅಮಲ್ಜಾರಿಕೆ ಅರ್ಜಿ ಸಲ್ಲಿಸಿದ್ದರು. ಕೆಎಸ್‌ಆರ್ ಟಿಸಿ ಸಂಸ್ಥೆ ಪರಿಹಾರ ನೀಡಲು ಸಾಕಷ್ಟು ಸಮಯ ವ್ಯರ್ಥ ಮಾಡಿರುವುದನ್ನು ಮನಗಂಡ ಜಿಲ್ಲಾ 2ನೇ ಅಪರ ನ್ಯಾಯಾಧೀಶರಾದ ಸುಜಾತ ಅವರು ಬಸ್ ಅನ್ನು ಜಪ್ತಿ ಮಾಡುವಂತೆ ಆದೇಶಿಸಿದ್ದರು. ಈ ಹಿನ್ನೆಲೆ ವಿರಾಜಪೇಟೆಗೆ ಆಗಮಿಸಿದ್ದ ಕೊಳ್ಳೆಗಾಲ ಡಿಪೋಗೆ ಸಂಬಂಧಿಸಿದ ಬಸ್(ಕೆ.ಎ.57–ಎಫ್.4527) ಅನ್ನು ನ್ಯಾಯಾಲಯ ಆದೇಶದಂತೆ ಸಿಬ್ಬಂದಿಗಳಾದ ಸ್ಟೀಫನ್ ಮತ್ತು ಕುಂಞಪ್ಪ ಅವರುಗಳು ಬಸ್ ನಿಲ್ದಾಣದಿಂದಲೇ ವಶಕ್ಕೆ ಪಡೆದುಕೊಂಡರು. ಬಳಿಕ ನ್ಯಾಯಾಲಯದ ವಶಕ್ಕೆ ಬಸ್ ಅನ್ನು ಒಪ್ಪಿಸಲಾಯಿತು. ಈ ಸಂದರ್ಭ ಸಂತ್ರಸ್ತರ ಪರ ವಕೀಲರುಗಳಾದ ಟಿ.ಪಿ.ಕೃಷ್ಣ, ವಿ.ಜಿ.ರಾಕೇಶ್, ದರ್ಶನ್ ಕುಮಾರ್ ಅವರುಗಳು ಹಾಜರಿದ್ದರು.

> **“ಈ ಹಿಂದೆ ವಿರಾಜಪೇಟೆ ಜಿಲ್ಲಾ ನ್ಯಾಯಾಲಯ ನೀಡಿದ ತೀರ್ಪಿನ ಕುರಿತು ಕೆಎಸ್‌ಆರ್‌ಟಿಸಿ ಸಂಸ್ಥೆ ಹೈಕೋರ್ಟ್‌ಗೆ ಅಪೀಲು ಹೋಗಿತ್ತು. ಅವರ ಮೇಲ್ಮನವಿಯನ್ನು ಹೈಕೋರ್ಟ್ ವಜಾಗೊಳಿಸಿದೆ. ಸಂಸ್ಥೆಗೆ ಪರಿಹಾರ ನೀಡಲು ಸಾಕಷ್ಟು ಕಾಲಾವಕಾಶ ನೀಡಿದ್ದರೂ, ಪಾವತಿ ಮಾಡಿರಲಿಲ್ಲ. ಈ ಹಿನ್ನೆಲೆಯಲ್ಲಿ ಬಸ್ ಅನ್ನು ಜಪ್ತಿ ಮಾಡುವಂತೆ ನ್ಯಾಯಾಲಯ ಆದೇಶಿಸಿದ್ದು, ಅದರಂತೆ ನ್ಯಾಯಾಲಯ ಸಿಬ್ಬಂದಿಗಳು ಬಸ್ ಜಪ್ತಿ ಮಾಡಿದ್ದಾರೆ. ಈ ಪ್ರಕರಣದಲ್ಲಿ ರಾಕೇಶ್ ಮತ್ತು ದರ್ಶನ್ ಕೂಡ ಸಂತ್ರಸ್ತರ ಪರವಾಗಿ ವಾದ ಮಂಡಿಸಿದ್ದಾರೆ.**
> -ಟಿ.ಪಿ. ಕೃಷ್ಣ, ಸಂತ್ರಸ್ತರ ಪರ ವಕೀಲರು.

ಶ್ರೀಲಕ್ಷ್ಮಿಕಾಂತ ದೇವಾಲಯದಲ್ಲಿ ಇಂದು, ನಾಳೆ ಶ್ರೀ ರಾಮಪಾದುಕ ಸಹಸ್ರಹೋಮ, ಬ್ರಹ್ಮ ರಥೋತ್ಸವ

ಚಾಮರಾಜನಗರ, ಆ.31– ನಗರದ ಹಳೇ ಖಾಸಗಿ ಬಸ್ ನಿಲ್ದಾಣದ ಸಮೀಪದ ಶ್ರೀ ಲಕ್ಷ್ಮಿ ಕಾಂತಸ್ವಾಮಿ ದೇವಾಲಯದಲ್ಲಿ ಸೆ.1 ಮತ್ತು ಸೆ.2 ರಂದು ಎರಡು ದಿನಗಳ ಕಾಲ ವಿಶೇಷ ಪೂಜಾ ಕಾರ್ಯಗಳು ಜರುಗಲಿವೆ.

ಸೆ.1 ರಂದು ಬೆಳಗ್ಗೆ ಶ್ರೀ ರಾಮ ಪಾದುಕ ಸಹಸ್ರಹೋಮ, ಸೆ.2 ರಂದು ಸಂಜೆ ಶ್ರೀ ಲಕ್ಷ್ಮಿ ಕಾಂತಸ್ವಾಮಿ ಬ್ರಹ್ಮ ರಥೋತ್ಸವ ಮತ್ತು ಶಯನೋತ್ಸವ ಕಾರ್ಯಕ್ರಮದ ಜೊತೆಗೆ ವಿವಿಧ ದೇವತಾ ಕಾರ್ಯಗಳು ನಡೆಯಲಿದೆ. ಭಕ್ತಾದಿಗಳು ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಶ್ರೀ ಲಕ್ಷ್ಮಿ ಕಾಂತಸ್ವಾಮಿ ಸೇವಾ ಸಮಿತಿ ದಾಸಬಣಿ ಜಿಗರ ಸಂಘ ಹಾಗೂ ದೇವಾಲಯದ ಅರ್ಚಕರ ವೃಂದ ಪ್ರಕಟಣೆಯಲ್ಲಿ ಮನವಿ ಮಾಡಿದೆ.

ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಖಂಡಿಸಿ ಪ್ರತಿಭಟನೆ

ಕಾವೇರಿ ನಿರ್ವಹಣಾ ಮಂಡಳಿ ಆದೇಶ ಅಣಕು ಪ್ರತಿ ಹರಿದು ಆಕ್ರೋಶ



ಚಾಮರಾಜನಗರ, ಆ.31– ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಖಂಡಿಸಿ ಕರ್ನಾಟಕ ಸೇನಾಪಡೆ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಶ್ರೀಚಾಮರಾಜೇಶ್ವರ ಉದ್ಯಾನವನದ ಮುಂಭಾಗದಲ್ಲಿ ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ ಶ್ರೀನಿವಾಸ ಗೌಡ ಅವರ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ಕರ್ನಾಟಕ ಸರ್ಕಾರ, ತಮಿಳುನಾಡು ಸರ್ಕಾರಗಳ ವಿರುದ್ಧ ಘೋಷಣೆ ಕೂಗಿ ಕಾವೇರಿ ನಿರ್ವಹಣಾ ಮಂಡಳಿ ಆದೇಶ ಅಣಕು ಪ್ರತಿ ಹರಿದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಚಾ.ರಂ.ಶ್ರೀನಿವಾಸಗೌಡ ಮಾತನಾಡಿ, ಕಾವೇರಿ ನಿರ್ವಹಣಾ ಮಂಡಳಿ ರಚನೆಯಿಂದ ಕರ್ನಾಟಕಕ್ಕೆ ನಿರಂತರ ಅನ್ಯಾಯವಾಗಿದೆ. ರಾಜ್ಯದಲ್ಲಿ ಸರಿಯಾಗಿ ಮಳೆಯಾಗಿಲ್ಲ. ಜಲಾಶಯಗಳಲ್ಲಿ ನೀರು ಇಲ್ಲ. ಆದರೂ ಕೂಡ ತಮಿಳುನಾಡು ಸರ್ಕಾರ ರಾಜಕೀಯ ತೀಟೆಗಾಗಿ ಪದೇ ಪದೆ ಕಾವೇರಿ ವಿಷಯದಲ್ಲಿ ಕ್ಯಾತೆ ತೆಗೆಯುತ್ತಿದೆ. ಸುಪ್ರೀಂಕೋರ್ಟ್, ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ತಮಿಳುನಾಡಿಗೆ ಕಾವೇರಿ ನೀರು ಬಿಡುವಂತೆ ಒತ್ತಾಯ ಮಾಡುವುದು ಅತ್ಯಂತ ಖಂಡನೀಯವಾಗಿದೆ ಎಂದರು.

ಕಾವೇರಿ ನಿರ್ವಹಣಾ ಮಂಡಳಿ ತಮಿಳುನಾಡು ಏಜೆಂಟ್ ಆಗಿ ಕೆಲಸ ಮಾಡುತ್ತಿದೆ. ಈ ನಿರ್ವಹಣಾ ಮಂಡಳಿ ಕರ್ನಾಟಕಕ್ಕೆ ಒಳ್ಳೆಯದು ಮಾಡಿಲ್ಲ. ತೀರ್ಪು ನೀಡಿಲ್ಲ. ತಮಿಳುನಾಡಿನ ಪರ ತೀರ್ಪು ನೀಡುತ್ತಾ ಬಂದಿದೆ. ಕರ್ನಾಟಕದಲ್ಲಿ ಕುಡಿಯುವ ನೀರಿಗೆ ತೊಂದರೆ ಇದ್ದರೂ ಕೂಡ ತಮಿಳುನಾಡು ಸರ್ಕಾರ 3 ನೇ ಬೆಳೆಗೆ ನೀರು ಕೇಳುತ್ತಿದೆ. ಹೀಗೆ ನಿರಂತರವಾಗಿ ತಮಿಳುನಾಡಿಗೆ ನೀರು ಬಿಟ್ಟರೇ ಜಲಾಶಯಗಳು ಬರಿದಾಗಿ ರಾಜ್ಯದ ಜನತೆ ತುಂಬಾ ತೊಂದರೆ ಆಗುತ್ತೆ ಎಂದರು.

ರಾಜ್ಯದ 28 ಸಂಸದರು, 12 ರಾಜ್ಯಸಭಾ ಸದಸ್ಯರು, 4 ಕೇಂದ್ರ ಸಚಿವರು ಇದ್ದು ರಾಜ್ಯ ಪರವಾಗಿ ಚಕಾರವೆತ್ತಿಲ್ಲ. ನೀವೆಲ್ಲರೂ ಮುಂದಿನ ದಿನಗಳಲ್ಲಿ ರಾಜ್ಯದ ಪರ ಹೋರಾಟ ಮಾಡಬೇಕು ಇಲ್ಲದಿದ್ದರೆ ನಿಮ್ಮಗಳ ನಿವಾಸದ ಮುಂದೆ ಪ್ರತಿಭಟಿಸುವುದಾಗಿ ಚಾ.ರಂ. ಶ್ರೀನಿವಾಸಗೌಡ ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಶಾ.ಮುರಳಿ, ಚಾ.ವೆಂ.ರಾಜ್ ಗೋಪಾಲ್, ನಿಜಧ್ವನಿ ಗೋವಿಂದರಾಜು, ಮಹೇಶ್ ಗೌಡ, ಗು. ಪುರುಷೋತ್ತಮ್, ಚಾ.ರಾ.ಕುಮಾರ್, ಪಣ್ಯದಹುಂಡಿ ರಾಜು, ಲಿಂಗರಾಜು, ತಾಂಡವಮೂರ್ತಿ, ಸೋಮವಾರಪೇಟೆ, ನಂಜುಂಡಸ್ವಾಮಿ, ಸಾಗರ್ ಸಾವತ್ ಇತರರು ಭಾಗವಹಿಸಿದ್ದರು.

ಬಂಡೀಪುರ ಬಳಿ ಗಜಪಯಣಕ್ಕೆ ಶಾಸಕರಿಂದ ಚಾಲನೆ

ಆನೆಗಳಿಗೆ ಕಬ್ಬು–ಬೆಲ್ಲ ತಿನ್ನಿಸಿ ಶುಭ ಹಾರೈಕೆ



ಗುಂಡ್ಲುಪೇಟೆ, ಆ.31– ವಿಶ್ವವಿಖ್ಯಾತ ಮೈಸೂರು ದಸರಾದಲ್ಲಿ ನಮ್ಮ ಬಂಡೀಪುರದ ಸಾಕಾನೆಗಳು ಪಾಲ್ಗೊಳ್ಳುವ ಮೂಲಕ ತಾಲೂಕಿನ ಕೀರ್ತಿ ಹೆಚ್ಚಿಸುತ್ತಿವೆ. ಇದು ನಮ್ಮೆಲ್ಲರಿಗೂ ಹೆಮ್ಮೆಯ ವಿಚಾರ ಎಂದು ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಹೇಳಿದರು.

ತಾಲೂಕಿನ ಮದ್ದೂರು ವಲಯಾರಣ್ಯ ಕಚೇರಿಯ ಆವರಣದಲ್ಲಿ ಅರಣ್ಯ ಇಲಾಖೆ ಗುರುವಾರ ಆಯೋಜಿಸಿದ್ದ ಗಜಪಯಣ ಕಾರ್ಯಕ್ರಮದಲ್ಲಿ ದಸರಾ ಮಹೋತ್ಸವದಲ್ಲಿ ಭಾಗಿಯಾಗಲು ಹೊರಟಿರುವ ಆನೆಗಳಿಗೆ ಕಬ್ಬು ಬೆಲ್ಲ ತಿನ್ನಿಸಿ ಶುಭಹಾರೈಸಿ ಮಾತನಾಡಿದರು. ಈ ಬಾರಿ ಮೈಸೂರಿನಲ್ಲಿ ನಡೆಯುವ ಜಂಬೂಸವಾರಿಗೆ ಬಂಡೀಪುರದ ಸಾಕಾನೆಗಳಾದ ಪಾರ್ಥಸಾರಥಿ, ರೋಹಿತ್ ಹಾಗೂ ಹಿರಣ್ಯಾ ಭಾಗವಹಿಸುತ್ತಿರುವುದು ತಾಲೂಕಿನ ಹೆಮ್ಮೆಯಾಗಿದೆ. ಮುಂದಿನ ದಿನಗಳಲ್ಲಿ ನಮ್ಮ ಪಾರ್ಥಸಾರಥಿಯು ಅಂಬಾರಿ ಹೊರುವಂತಾಗಲಿ ಎಂದು ಹಾರೈಸಿದರು. ಬಂಡೀಪುರ ಹುಲಿ ಯೋಜನೆಯ ನಿರ್ದೇಶಕ ಎಸ್.ಪ್ರಭಾಕರನ್ ಮಾತನಾಡಿ, ಬಂಡೀಪುರದ ಸಾಕಾನೆಗಳಿಗೆ ದಸರೆಯಲ್ಲಿ ಪಾಲ್ಗೊಳ್ಳುವ ಎಲ್ಲಾ ತರಬೇತಿಗಳನ್ನು ನೀಡಲಾಗುತ್ತಿದೆ. ಸದ್ಯ ಮೂರು ಆನೆಗಳು ನಾಡಹಬ್ಬದಲ್ಲಿ ಪಾಲ್ಗೊಂಡು ಉತ್ತಮ ಪ್ರದರ್ಶನ ನೀಡಲಿವೆ ಎಂದು ಹೇಳಿದರು.

ಪುರೋಹಿತರು ಗಜ ಪಯಣಕ್ಕೆ ಸಾಂಪ್ರದಾಯಿಕ ಪೂಜೆ ನೆರವೇರಿಸಿದ ನಂತರ ಮಂಗಳವಾದ್ಯಗಳೊಂದಿಗೆ ಗಜ ಪಯಣ ಪ್ರಾರಂಭವಾಯಿತು.

ಈ ಸಂದರ್ಭದಲ್ಲಿ ತಹಸೀಲ್ದಾರ್ ರಮೇಶ್‌ಬಾಬು, ಎಸಿಎಫ್‌ಗಳಾದ ನವೀನ್, ರವೀಂದ್ರ, ಕೆ.ಪರಮೇಶ್, ಆರ್‌ಎಫ್‌ಓಗಳಾದ ನವೀನ್, ಮಂಜುನಾಥ್ ಪ್ರಕಾಶ್, ಮಂಜುನಾಥ್, ಚಾಮುಲ್ ನಿರ್ದೇಶಕ ಹೆಚ್.ಎಸ್.ನಂಜುಂಡ ಪ್ರಸಾದ್, ಮುಖಂಡರಾದ ಮಹೇಶ್, ಬಿ.ಎಂ.ಮುನಿರಾಜು, ಬಿ.ಕೆ. ಬೊಮ್ಮಯ್ಯ ಇತರರು ಇದ್ದರು.

ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹುಟ್ಟುಹಬ್ಬ: ಹಣ್ಣು ಹಂಪಲು ವಿತರಣೆ



ಚಾಮರಾಜನಗರ, ಆ.31– ಸುತ್ತೂರು ಶೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರ 68ನೇ ಹುಟ್ಟುಹಬ್ಬದ ಅಂಗವಾಗಿ ಜಿಲ್ಲಾ ವೀರಶೈವ ಲಿಂಗಾಯಿತ ಮಹಾಸಭಾದ ವತಿಯಿಂದ ನಗರದ ಜಿಲ್ಲಾ ತಾಯಿ–ಮಗು ಆಸ್ಪತ್ರೆಯಲ್ಲಿ ತಾಯಂದಿರಿಗೆ ಹಣ್ಣು–ಹಂಪಲು ವಿತರಣೆ, ಮೂಡಲಧ್ವನಿ ಆಶ್ರಮದಲ್ಲಿ ಊಟದ ವ್ಯವಸ್ಥೆ ಮಾಡಲಾಯಿತು.

ಮಹಾಸಭಾದ ಜಿಲ್ಲಾ ಘಟಕದ ಗೌರವಾಧ್ಯಕ್ಷರಾದ ಹರವೆ ವಿರಕ್ತ ಮಠದ ಸರ್ಪಭೂಷಣ ಸ್ವಾಮೀಜಿ ಈ ಸಂದರ್ಭದಲ್ಲಿ ಮಾತನಾಡಿ, ತ್ರಿವಿಧ ದಾಸೋಹದಲ್ಲಿ ಅದರಲ್ಲೂ ಶೈಕ್ಷಣಿಕವಾಗಿ ಕ್ರಾಂತಿಯನ್ನೇ ಮಾಡುತ್ತಿರುವ ಸುತ್ತೂರು ಜೆಎಸ್‌ಎಸ್ ಸಂಸ್ಥೆಯ ಮಹತ್ತರ ಜವಾಬ್ದಾರಿ ಹೊತ್ತು ದೇಶ ವಿದೇಶಗಳಲ್ಲಿ ಜೆಎಸ್‌ಎಸ್ ಸಂಸ್ಥೆಯನ್ನು ಬೆಳೆಸುತ್ತಿರುವ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರ 68ನೇ ಹುಟ್ಟುಹಬ್ಬ ಪ್ರಯುಕ್ತ ಮಹಾಸಭಾ ವತಿಯಿಂದ ಜಿಲ್ಲಾ ತಾಯಿ– ಮಗು ಆಸ್ಪತ್ರೆಯಲ್ಲಿ ತಾಯಂದಿರಿಗೆ ಹಣ್ಣು–ಹಂಪಲು ವಿತರಣೆ ಮಾಡಲಾಗಿದೆ ಎಂದರು.

ಭಗವಂತ ಶ್ರೀಗಳಿಗೆ ಮತ್ತಷ್ಟು ಆಯುರಾರೋಗ್ಯ ಕೊಟ್ಟು ಜನರಿಗೆ ಮತ್ತಷ್ಟು ಸೇವೆಗಳು ಅವರಿಂದ ದೊರೆಯಲಿ ಎಂದು ಆಶಿಸಿದರು. ಈ ಸಂದರ್ಭದಲ್ಲಿ ಮಹಾಸಭಾದ ಜಿಲ್ಲಾಧ್ಯಕ್ಷ ಮೂಡ್ಲುಪುರ ನಂದೀಶ್, ಪ್ರಧಾನ ಕಾರ್ಯದರ್ಶಿ ನಾಗೇಂದ್ರ (ಪುಟ್ಟು) ಡಾ. ಮಹೇಶ್, ಡಾ. ನವೀನ್‌ಚಂದ್, ಡಾ. ಪ್ರದೀಪ್, ಕಾಡಹಳ್ಳಿ ಮಧು, ಡೈರಿ ಪ್ರಸಾದ್, ಆಟೋ ನಾಗೇಂದ್ರ ಪ್ರತಾಪ್ ಇತರರು ಇದ್ದರು.

ಸರ್ಕಾರಿ ಸವಲತ್ತುಗಳನ್ನು ಪಡೆದುಕೊಳ್ಳಲು ಇ–ಶ್ರಮ ಕಾರ್ಡ್ ಸಹಕಾರಿ



ಚಾಮರಾಜನಗರ, ಆ 31– ಅಸಂಘಟಿತ ಕಾರ್ಮಿಕ ವಲಯದಲ್ಲಿರುವ ಇಎಸ್‌ಐ, ಪಿಎಫ್ ಸೌಲಭ್ಯಗಳು ಇಲ್ಲದ ಪತ್ರಕರ್ತರು, ಪತ್ರಿಕಾ ಪ್ರತಿನಿಧಿಗಳು ಹಾಗೂ ವಿತರಕರಿಗೆ ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಇ–ಶ್ರಮ್ ಕಾರ್ಡ್ ನೋಂದಣಿ ಹಾಗೂ ವಿತರಣೆ ಕಾರ್ಯಕ್ರಮ ಗುರುವಾರ ಯಶಸ್ವಿಯಾಗಿ ನಡೆಯಿತು.

ರಾಜ್ಯದಲ್ಲಿಯೇ ಪ್ರಥಮ ಬಾರಿಗೆ ಜಿಲ್ಲಾ ಕೇಂದ್ರದಲ್ಲಿ ಕಾರ್ಮಿಕ ಇಲಾಖೆಯ ಸಹಯೋಗದಲ್ಲಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಹಾಗೂ ತಾಲೂಕು ಪತ್ರಿಕಾ ಪ್ರತಿನಿಧಿಗಳ ಸಂಘದ ಸಹಯೋಗದಲ್ಲಿ ನಡೆದ ಇ–ಶ್ರಮ ಕಾರ್ಡು ನೋಂದಣಿ ಸಮಾರಂಭಕ್ಕೆ ಜಿಲ್ಲಾ ಕಾರ್ಮಿಕ ಅಧಿಕಾರಿ ಡಾ. ಸವಿತಾ ಅವರು ಗಿಡಕ್ಕೆ ನೀರೆರೆಯುವ ಮೂಲಕ ಚಾಲನೆ ನೀಡಿದರು. ಬಳಿಕ 50ಕ್ಕೂ ಹೆಚ್ಚು ಪತ್ರಕರ್ತರು, ಪತ್ರಿಕಾ ಪ್ರತಿನಿಧಿಗಳು ಹಾಗೂ ವಿತರಕರು ನೋಂದಾಯಿಸಿಕೊಂಡು ಇ– ಶ್ರಮ ಕಾರ್ಡುಗಳನ್ನು ಸ್ಥಳದಲ್ಲಿಯೇ ಪಡೆದುಕೊಂಡರು.

ರಾಜ್ಯದಲ್ಲಿ ಪ್ರಥಮವಾಗಿ ಜಿಲ್ಲಾ ಕೇಂದ್ರದಲ್ಲಿ ನಡೆದ ಇ–ಶ್ರಮ ಕಾರ್ಡು ವಿತರಣಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಜಿಲ್ಲಾ ಕಾರ್ಮಿಕ ಕಲ್ಯಾಣಾಧಿಕಾರಿ ಡಾ.ಸವಿತಾ, ಇಎಸ್‌ಐ ಹಾಗೂ ಪಿಎಫ್ ಸೌಲಭ್ಯಗಳನ್ನು ಪಡೆದುಕೊಳ್ಳದ ಪತ್ರಕರ್ತರು, ಪತ್ರಿಕಾ ಪ್ರತಿನಿಧಿಗಳಿಗೆ ಇ–ಶ್ರಮ್ ಕಾರ್ಡ್ ನೀಡಲಾಗುತ್ತದೆ. ಇವರನ್ನು ಸಹ ಅಸಂಘಟಿತ ಕಾರ್ಮಿಕರ ವಲಯದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರ ಸೇರ್ಪಡೆಯಾಗಿದೆ. ಇದನ್ನು ಮನಗಂಡು ಜಿಲ್ಲೆಯಲ್ಲಿ ಪತ್ರಕರ್ತರು, ವಿತರಕರು ಹಾಗೂ ಪ್ರತಿನಿಧಿಗಳಿಗೆ ಈ ಸೌಲಭ್ಯವನ್ನು ಕಲ್ಪಿಸಲಾಗುತ್ತದೆ ಎಂದರು.

ಇದೊಂದು ಕಾರ್ಮಿಕ ಇಲಾಖೆ ಅಸಂಘಟಿತ ಕಾರ್ಮಿಕರ ಮಾಹಿತಿಯನ್ನು ಸಂಗ್ರಹಿಸುವ ಡೇಟಾ ಆಗಿದೆ. ಈ ಮೂಲಕ ಸರ್ಕಾರಗಳಿಗೆ ಅಸಂಘಟಿತ ಕಾರ್ಮಿಕರಿಗೆ ಯೋಜನೆ ರೂಪಿಸಲು ಹಾಗೂ ವಿವಿಧ ಯೋಜನೆಯಡಿ ಸವಲತ್ತು ಕಲ್ಪಿಸಿಕೊಡಲು ಸಹಕಾರಿಯಾಗುತ್ತದೆ. ಕೇಂದ್ರ ಸರ್ಕಾರ ಮುಂದಿನ ದಿನಗಳಲ್ಲಿ ಇ–ಶ್ರಮ ಕಾರ್ಡು ನೋಂದಾಯಿತರಿಗೆ ನೀಡುವ ಸವಲತ್ತುಗಳು ಲಭಿಸಲಿದೆ. ಇದರಿಂದ ದೇಶದ ಆರ್ಥಿಕ ಅಭಿವೃದ್ಧಿಗೆ ಹೆಚ್ಚಿನ ಸಹಕಾರಿಯಾಗಿದೆ ಎಂದರು.

ಜಿಲ್ಲಾ ಪತ್ರಕರ್ತರು ಹಾಗೂ ಪ್ರತಿನಿಧಿಗಳ ಮನವಿಯ ಹಿನ್ನೆಲೆಯಲ್ಲಿ ಇ–ಶ್ರಮ್ ಕಾರ್ಡ್ ನೋಂದಣಿ ಮಾಡಿಸಲಾಗುತ್ತಿದೆ. ಇವರಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸವಲತ್ತುಗಳನ್ನು ತಲುಪಿಸುವುದು ನಮ್ಮ ಜವಾಬ್ದಾರಿಯಾಗಿದೆ. ಅವರ ಕೌಶಲ್ಯ ಅಭಿವೃದ್ಧಿ ಒತ್ತು, ಜಾಗೃತಿ ಶಿಬಿರ ಇ–ಶ್ರಮ್ ಫಲಾನುಭವಿ ಮಕ್ಕಳಿಗೆ ವಿದ್ಯಾರ್ಥಿ ವೇತನ, ಅಪಘಾತ ವಿಮೆ ಪರಿಹಾರ 5 ಲಕ್ಷದವರೆಗೆ ಇರುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಕಾರ್ಮಿಕ ಹಿರಿಯ ನಿರೀಕ್ಷಕಿ ವೀಣಾ, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ದೇವರಾಜು ಕಪ್ಪಸೋಗೆ, ಪ್ರಧಾನ ಕಾರ್ಯದರ್ಶಿ ಗೌಡಹಳ್ಳಿ ಮಹೇಶ್, ತಾಲೂಕು ಪತ್ರಿಕಾ ಪ್ರತಿನಿಧಿಗಳ ಸಂಘದ ಅಧ್ಯಕ್ಷ ದೊಡ್ಡರಾಯಪೇಟೆ ಪುರುಷೋತ್ತಮ್, ಪ್ರಧಾನ ಕಾರ್ಯದರ್ಶಿ ಅಕ್ಷಯ್ ಹಾಗೂ ಪತ್ರಕರ್ತರು, ಪ್ರತಿಕಾ ಪ್ರತಿನಿಧಿಗಳು ಹಾಜರಿದ್ದರು.



ಗುಂಡ್ಲುಪೇಟೆ ಪುರಸಭಾಧ್ಯಕ್ಷ ಪಿ. ಗಿರೀಶ್ ಅವರು ಚಿಕ್ಕಾಟಿ ಗ್ರಾಪಂಗೆ ಭೇಟಿ ನೀಡಿ, ಗ್ರಾಪಂ ನೂತನ ಅಧ್ಯಕ್ಷ ಟಿ.ಸಿ. ಓಂಕಾರ ನಾಯ್ಕ, ಉಪಾಧ್ಯಕ್ಷರಾದ ಪದ್ಮ ಮಹೇಶ್ ಅವರನ್ನು ಸನ್ಮಾನಿಸಿದರು. ಈ ಸಂದರ್ಭದಲ್ಲಿ ಗ್ರಾಪಂ ಸದಸ್ಯರು, ಪಿಡಿಓ, ಸಿಬ್ಬಂದಿ, ಗ್ರಾಮದ ಮುಖಂಡರು, ಗ್ರಾಮಸ್ಥರು ಹಾಜರಿದ್ದರು.

ಟೆನ್ನಿಸ್‌ಬಾಲ್ ಕ್ರಿಕೆಟ್: ನಿಟ್ರೆಯ ಭಜರಂಗಿ ಬಾಯ್ಸ್ ತಂಡ ಜಯಭೇರಿ



ಬೇಗೂರು(ಗುಂಡ್ಲುಪೇಟೆ), ಆ.31– ಸಮೀಪದ ರಂಗನಾಥಪುರ ಗ್ರಾಮದಲ್ಲಿ ಯುವಕರು ಆಯೋಜಿಸಿದ್ದ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಗೆ ಶಾಸಕ ಹೆಚ್.ಎಂ. ಗಣೇಶ್ ಪ್ರಸಾದ್ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಯುವಕರು ಹೆಚ್ಚಿನ ರೀತಿಯಲ್ಲಿ ಕ್ರೀಡೆಯಲ್ಲಿ ಆಸಕ್ತಿ ಹೊಂದಿ ಬೇರೆ ಬೇರೆ ಕ್ರೀಡೆಗಳಲ್ಲಿ ತೊಡಗಿಕೊಂಡರೆ ಉತ್ತಮ ಸ್ನೇಹ ಬಾಂಧವ್ಯ ಜೊತೆಗೆ ಆರೋಗ್ಯವು ಉತ್ತಮವಾಗಿರುತ್ತದೆ ಎಂದರು. ಪಂದ್ಯಾವಳಿಯಲ್ಲಿ ನಿಟ್ರೆ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ ಗ್ರಾಮಗಳಾದ ನಿಟ್ರೆ, ಹಾಲಹಳ್ಳಿ, ಕಮರಹಳ್ಳಿ, ರಂಗನಾಥಪುರ, ತೊರವಳ್ಳಿ ಗ್ರಾಮದ ಯುವಕರು ಭಾಗವಹಿಸಿದ್ದರು. ನಿಟ್ರೆ ಮತ್ತು ಹಾಲಹಳ್ಳಿ ಗ್ರಾಮದ ತಂಡಗಳು ರೋಚಕ ಆಟದೊಂದಿಗೆ ನಿಟ್ರೆ ಗ್ರಾಮದ ಭಜರಂಗಿ ಬಾಯ್ಸ್ ತಂಡವು ಪ್ರಥಮ ಸ್ಥಾನ ಪಡೆದು ಜಯಭೇರಿ ಬಾರಿಸಿದೆ. ದ್ವಿತೀಯ ಸ್ಥಾನವನ್ನು ಹಾಲಹಳ್ಳಿ ಗ್ರಾಮದ ಯುವಕರು ಪಡೆದುಕೊಂಡಿದ್ದಾರೆ. ಈ ಸಂದರ್ಭದಲ್ಲಿ ಪಿಡಿಓ ನಾಗಭೂಷಣ್, ಗ್ರಾಪಂ ಮಾಜಿ ಅಧ್ಯಕ್ಷ ಮಹೇಶ್, ಹೆಚ್.ಎನ್ ಬಸವರಾಜು, ಮುಖಂಡ ನಾಗಶೆಟ್ಟಿ, ಯುವ ಮುಖಂಡ ಡಾ. ಸ್ವಾಮಿ, ಗೌಡಿಕೆ ಸುನೀಲ್ ಹಾಜರಿದ್ದರು.

ಒಂದನೇ ಪುಟದಿಂದ

ತಮಿಳುನಾಡು ಪಟ್ಟು

ಮನವಿ ಮಾಡುತ್ತೇವೆ. ಜಲಾಶಯ ತುಂಬಿದಂತೆ ಕಾಣುತ್ತದೆ. ಆದರೆ ಎಷ್ಟು ಪ್ರಮಾಣದಲ್ಲಿ ನೀರಿದೆ ಎಂಬುದು ಮುಖ್ಯ. ನಾವು ಯಾವ ವಿಚಾರವನ್ನು ಮುಚ್ಚಿಡುವ ಪ್ರಶ್ನೆಯೇ ಇಲ್ಲ. ಕಾವೇರಿ ಜಲಾನಯನ ಪ್ರದೇಶದ ಜಲಾಶಯಗಳ ಪರಿಸ್ಥಿತಿಯನ್ನು ಅವರೇ ಬಂದು ಅರಿತುಕೊಳ್ಳಲಿ. ಆ ನಂತರ ತೀರ್ಮಾನ ಮಾಡಲಿ ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು. ತಮಿಳುನಾಡಿಗೆ ಈಗಾಗಲೇ ನೀರು ಬಿಟ್ಟಿದ್ದೇವೆ. ಎಷ್ಟು ಪ್ರಮಾಣದಲ್ಲಿ ನೀರು ಬಿಟ್ಟಿದ್ದೇವೆ ಎಂಬ ಲೆಕ್ಕ ಬಿಳಿಗುಂಡ್ಲುವಿನಲ್ಲಿ ಇದೆ. ಅಲ್ಲದೆ ಈಗ ಬಿಟ್ಟಿರುವ ನೀರು ಬಿಳಿಗುಂಡ್ಲು ತಲುಪಲು ಇನ್ನು ಮೂರ್ನಾಲ್ಕು ದಿನ ಬೇಕು. ಈ ವಾಸ್ತವತೆಯನ್ನು ಸುಪ್ರೀಂಕೋರ್ಟ್‌ಗೆ ತಿಳಿಸುತ್ತೇವೆ. ಆದರೆ ನಾವು ಬಿಟ್ಟಿರುವ ನೀರನ್ನು ತಮಿಳುನಾಡಿನವರು ಹೇಗೆ ಬಳಕೆ ಮಾಡಿಕೊಂಡಿದ್ದಾರೆ ಎಂಬ ವಿಚಾರ ನಮಗೆ ಅಪ್ರಸ್ತುತ. ಆ ಬಗ್ಗೆ ನಾನು ಮಾತನಾಡುವುದಿಲ್ಲ ಎಂದರು.

ಈ ಎಲ್ಲಾ ವಿಚಾರಗಳ ಬಗ್ಗೆ ಕಾನೂನು ತಜ್ಞರು ಸೇರಿದಂತೆ ಅಧಿಕಾರಿಗಳ ಜೊತೆ ಚರ್ಚೆ ಮಾಡಿದ್ದೇನೆ. ಹಿರಿಯ ವಕೀಲರಾದ ಶ್ಯಾಮ್ ದಿವಾನ್ ಅವರ ಜೊತೆ ಕೂಡ ಚರ್ಚೆ ಮಾಡುತ್ತೇನೆ ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು.

ಒಟ್ಟಾರೆ ನಮಗೆ ನಮ್ಮ ರೈತರ ಹಿತ ಮುಖ್ಯ. ಈ ಹಿನ್ನೆಲೆ ಸಾಧಕ ಬಾಧಕಗಳ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡಿದ್ದೇನೆ ಎಂದು ಡಿ.ಕೆ.ಶಿವಕುಮಾರ್ ಹೇಳಿದರು.

ನೀರು 100 ಅಡಿಗೆ ಕುಸಿತ

ಈ ಮೂಲಕ ಒಟ್ಟು 9,279 ಕ್ಯೂಸೆಕ್ ನೀರು ತಮಿಳುನಾಡಿಗೆ ಹರಿದು ಹೋಗುತ್ತಿದೆ.

ಮಂಡ್ಯದ ರೈತರು ತಮಿಳುನಾಡಿಗೆ ನೀರು ಬಿಡದಂತೆ ತೀವ್ರ ರೀತಿಯ ಹೋರಾಟ ಮಾಡುತ್ತಿದ್ದರೂ ಕೇರ್ ಮಾಡದ ರಾಜ್ಯ ಸರ್ಕಾರ ನೀರು ಹರಿಸುತ್ತಿದೆ. ಇದರಿಂದ ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ 100 ಅಡಿಗೆ ಇಳಿದಿದೆ. ಕೆಆರ್‌ಎಸ್ ಜಲಾಶಯದ ಗರಿಷ್ಠ ಮಟ್ಟ 124.80 ಅಡಿಗಳಾಗಿದೆ. ಇಂದಿನ ಮಟ್ಟ 100.96 ಅಡಿಗಳಾಗಿದೆ. ಜಲಾಶಯಕ್ಕೆ ಕೇವಲ 1,610 ಕ್ಯೂಸೆಕ್ ಒಳ ಹರಿವಿದೆ. ಆದರೆ ಜಲಾಶಯದಿಂದ ತಮಿಳುನಾಡಿಗೆ 7,279 ಕ್ಯೂಸೆಕ್ ನೀರು ಬಿಡಲಾಗುತ್ತಿದೆ.

ಕಬಿನಿ ಜಲಾಶಯದ ಪರಿಸ್ಥಿತಿ ಕೂಡ ಇದಕ್ಕಿಂತ ಭಿನ್ನವಾಗಿಲ್ಲ. ಕಬಿನಿ ಜಲಾಶಯದ ಗರಿಷ್ಠ ಮಟ್ಟ 2,284 ಅಡಿಗಳಾಗಿದ್ದು, ಇಂದಿನ ಮಟ್ಟ 2,273 ಅಡಿಗಳಾಗಿದೆ. ಜಲಾಶಯಕ್ಕೆ 2,038 ಕ್ಯೂಸೆಕ್ ನೀರು ಮಾತ್ರ ಹರಿದು ಬರುತ್ತಿದೆ. ಆದರೆ ಜಲಾಶಯದಿಂದ 2,000 ಕ್ಯೂಸೆಕ್ ನೀರನ್ನು ತಮಿಳುನಾಡಿಗೆ ಬಿಡಲಾಗುತ್ತಿದೆ.

ಮುಂಗಾರು ಕೈಕೊಟ್ಟ ಕಾರಣ ವಾಡಿಕೆಯಷ್ಟು ಮಳೆಯಾಗಿಲ್ಲ. ಈಗ ಹಿಂಗಾರು ಮಾರುತದ ಮೇಲೆ ನಿರೀಕ್ಷೆ ಹೊಂದಲಾಗಿದೆ. ಆದರೆ ಮುಂಗಾರಿನಷ್ಟು ಹಿಂಗಾರಿನಲ್ಲಿ ಹೆಚ್ಚಿನ ಮಳೆ ಬರುವ ಸಾಧ್ಯತೆ ಕಡಿಮೆ. ಇಂತಹ ಪರಿಸ್ಥಿತಿಯಲ್ಲಿ ನಮ್ಮ ಜಲಾಶಯದಲ್ಲಿ ಅಷ್ಟೋ ಇಷ್ಟೋ ಉಳಿದಿರುವ ನೀರನ್ನು ತಮಿಳುನಾಡಿಗೆ ಹರಿಸಲಾಗುತ್ತಿದೆ. ಹೀಗಾದರೆ ನಮ್ಮ ಪಾಡೇನು ಎಂಬ ಪ್ರಶ್ನೆ ಎದುರಾಗಿದೆ. ತಮಿಳುನಾಡಿನ ರೈತರು ಒಟ್ಟೂಯ್ಯಲು ನೀರಿನ ಅವಶ್ಯಕತೆ ಇದೆ ಎಂದು ಕೇಳುತ್ತಿದ್ದಾರೆ. ಇದಕ್ಕಾಗಿ ಕಾವೇರಿ ನೀರು ಬಿಡಬೇಕೆಂದು ತಮಿಳುನಾಡು ಸರ್ಕಾರ ಪಟ್ಟು ಹಿಡಿದಿದೆ. ಈಗ ಹೊಟ್ಲು (ಸಸಿ ಮಡಿ) ನೀರು ಕೇಳಿರುವ ತಮಿಳುನಾಡು, ಮತ್ತೆ ನಾಟಿ ಮಾಡುವ ವೇಳೆಯಲ್ಲೂ ಪುನಃ ನೀರು ಕೇಳುತ್ತದೆ. ಹಾಗಾದರೆ ತಮಿಳುನಾಡಿನವರು ಕೇಳಿದಷ್ಟು ನೀರು ಹರಿಸುತ್ತಾ ಹೋಗಲು ಸಾಧ್ಯವೆ? ಎಂಬ ಪ್ರಶ್ನೆ ಎದುರಾಗಿದೆ.

ನೀರು ಬಿಟ್ಟು ತಡವಾಗಿ ಮನವಿ ಸಲ್ಲಿಸಿದ್ರೆ ಏನು ಪ್ರಯೋಜನ?

ತಮಿಳುನಾಡು ಸರ್ಕಾರ 25 ಸಾವಿರ ಕ್ಯೂಸೆಕ್ ನೀರು ಕೇಳಿದಾಗ ಕಾವೇರಿ ನಿರ್ವಹಣಾ ಪ್ರಾಧಿಕಾರ 5 ಸಾವಿರ ಕ್ಯೂಸೆಕ್ ನೀರು ಬಿಡಲು ಆದೇಶ ನೀಡಿತು. ಕರ್ನಾಟಕ ಸರ್ಕಾರ ನೀರು ಬಿಡದೆ ಕಾವೇರಿ ನಿರ್ವಹಣಾ ಪ್ರಾಧಿಕಾರದ ಮುಂದೆ ಮನವಿ ಮಾಡಬೇಕಿತ್ತು. ಈಗಾಗಲೇ ಸಾಕಷ್ಟು ನೀರು ಬಿಟ್ಟು ತಡವಾಗಿ ಮನವಿ ಸಲ್ಲಿಸಿದರೆ ಏನು ಪ್ರಯೋಜನ. ಬಾಯಲ್ಲಿ ಹೇಳುವುದೊಂದಾದರೆ, ಇವರು ಮಾಡುತ್ತಿರುವುದು ಮತ್ತೊಂದಾಗಿದೆ. ಹೀಗೆ ತಮಿಳುನಾಡಿಗೆ ನೀರು ಬಿಡುತ್ತಿದ್ದರೆ ಈಗಾಗಲೇ ನಮ್ಮಲ್ಲಿ ಬೆಳೆದಿರುವ ಬೆಳೆಗೆ ನೀರು ಎಲ್ಲಿಂದ ತರುವುದು. ಮುಂದೆ ಬೇಸಿಗೆಯಲ್ಲಿ ಕುಡಿಯುವ ನೀರಿಗೆ ಏನು ಮಾಡುವುದು. ಇದನ್ನು ಅರ್ಥ ಮಾಡಿಕೊಂಡು ರಾಜ್ಯ ಸರ್ಕಾರ ಯಾವುದೇ ಕಾರಣಕ್ಕೂ ನೀರು ಬಿಡದೆ ಗಟ್ಟಿಯಾಗಿ ನಿಲ್ಲಬೇಕಿತ್ತು. ತಮಿಳುನಾಡಿನ ಕ್ಯಾತೆ ಇಷ್ಟಕ್ಕೆ ಮುಗಿಯುವುದಿಲ್ಲ. ಮತ್ತೆ ಕೇಳುತ್ತಲೇ ಇರುತ್ತಾರೆ. ಇವರು ಬಿಡುತ್ತಲೆ ಇರುತ್ತಾರೆ. ಆದರೆ ನಮ್ಮ ಹೋರಾಟವಂತೂ ನಿಲ್ಲುವುದಿಲ್ಲ.



– ಬಡಗಲಪುರ ನಾಗೇಂದ್ರ, ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ

“ನೀರು ಬಿಟ್ಟು ವಚನಭ್ರಷ್ಟರಾಗಿದ್ದಾರೆ

ಕರ್ನಾಟಕದ ರೈತರನ್ನು ತಮಿಳುನಾಡಿಗೆ ಬಲಿ ಕೊಟ್ಟಿದ್ದಾರೆ. ನಮ್ಮ ಜಲಾಶಯ ಬರಿದು ಮಾಡಿ, ತಮಿಳುನಾಡಿಗೆ ಭಾರಿ ಪ್ರಮಾಣದಲ್ಲಿ ನೀರು ಹರಿಸುತ್ತಿದ್ದಾರೆ. ನೀರು ಬಿಡಲ್ಲ ಅಂತ ಜನತೆಯ ಮುಂದೆ ಹೇಳಿ ನಂಬಿಸಿದ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ವಚನಭ್ರಷ್ಟವಾಗಿದೆ. ಈ ಮೂಲಕ ಡ್ರಾಮಾ ಮಾಡುತ್ತಿದ್ದಾರೆ. ಇವರ ನಾಟಕೀಯ ವರ್ತನೆಯನ್ನು ರಾಜ್ಯದ ಜನತೆ ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ. ಸಮಯ ಬಂದಾಗ ತಕ್ಕ ಪಾಠ ಕಲಿಸುತ್ತಾರೆ. ಜಲಸಂಪನ್ಮೂಲ ಸಚಿವರೂ ಆದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸ್ವೇಚ್ಛಾಚಾರಿಯಾಗಿ ವರ್ತಿಸುತ್ತಿದ್ದಾರೆ. ಇದು ರಾಜ್ಯದ ಹಿತದೃಷ್ಟಿಯಿಂದ ಒಳ್ಳೆಯದಲ್ಲ. ಈಗಲಾದರೂ ಅವರ ವರ್ತನೆ ಬದಲಾಗಬೇಕು.

‘ಲೋಕ’ ಸಮರಕ್ಕೆ ಬಿಜೆಪಿ ವರಿಷ್ಠರ ಸಿದ್ಧತೆ

ರಾಜ್ಯ ನಾಯಕರೇ ಕಾರಣ ಎಂಬ ಮಾಹಿತಿ ಹಿನ್ನೆಲೆಯಲ್ಲಿ ವರಿಷ್ಠರು, ಮುಖಂಡರಿಲ್ಲದೆ, ಸಾರ್ವತ್ರಿಕ ಚುನಾವಣೆ ಎದುರಿಸಲು ಸಜ್ಜಾಗಿದ್ದಾರೆ. ರಾಜ್ಯ ಮುಖಂಡರ ಆಂತರಿಕ ಕಚ್ಚಾಟ ವರಿಷ್ಠರಿಗೆ ತಲೆನೋವಾಗಿ ಪರಿಣಮಿಸಿದೆ. ಇದನ್ನು ಪರಿಹರಿಸಲು ಆಸಕ್ತಿ ತೋರದ ದೆಹಲಿ ನಾಯಕರು ಇದುವರೆಗೂ ವಿಧಾನಸಭೆ ಪ್ರತಿಪಕ್ಷದ ನಾಯಕನ ಆಯ್ಕೆ ಹಾಗೂ ಅವಧಿ ಮುಗಿದಿರುವ ರಾಜ್ಯಾಧ್ಯಕ್ಷರ ಬದಲಾವಣೆ ಬಗ್ಗೆ ಯಾವುದೇ ತೀರ್ಮಾನ ಕೈಗೊಂಡಿಲ್ಲ. ಪ್ರಧಾನಿ ನರೇಂದ್ರ ಮೋದಿ ಅವರು ಇಸ್ರೋ ವಿಜ್ಞಾನಿಗಳನ್ನು ಅಭಿನಂದಿಸಲು ರಾಜ್ಯಕ್ಕೆ ಆಗಮಿಸಿದ್ದ ಸಂದರ್ಭದಲ್ಲಿ ರಾಜ್ಯದ ಯಾವುದೇ ನಾಯಕರನ್ನು ಹತ್ತಿರಕ್ಕೆ ಬಿಟ್ಟುಕೊಳ್ಳದಿರುವುದನ್ನು ಇಲ್ಲಿ ಸ್ಮರಿಸಬಹುದು.

ಈ ಹುದ್ದೆಗಳ ನೇಮಕಾತಿ ಪಕ್ಷದಲ್ಲಿ ಮತ್ತಷ್ಟು ಆಂತರಿಕ ಬಿಕ್ಕಟ್ಟು ಸೃಷ್ಟಿಸಬಹುದು ಎಂಬ ಕಾರಣಕ್ಕೆ ವಿಳಂಬ ಮಾಡಿದ್ದಾರೆ. ಜೊತೆ ಜೊತೆಯಲ್ಲೇ ಮುಖಂಡರಿಲ್ಲದೆ, ಚುನಾವಣೆ ಎದುರಿಸಲು ವೇದಿಕೆ ಸಜ್ಜುಗೊಳಿಸಿದ್ದಾರೆ. ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರ ಸರ್ಕಾರ ಪತನಗೊಳಿಸಲು ಪಕ್ಷಕ್ಕೆ ಸೇರ್ಪಡೆಗೊಂಡಿದ್ದ ಕಾಂಗ್ರೆಸ್ ಮತ್ತು ಜೆಡಿಎಸ್ ಶಾಸಕರೇ ಮತ್ತೆ ಮಾತೃ ಪಕ್ಷಕ್ಕೆ ತೆರಳಲು ಮುಂದಾಗಿರುವುದರಲ್ಲೂ ರಾಜ್ಯ ನಾಯಕರ ಕೈವಾಡವಿದೆ ಎಂಬ ಸಂಶಯ ವರಿಷ್ಠರಲ್ಲಿ ಮನೆ ಮಾಡಿದೆ.

ಆಪರೇಷನ್ ಹಸ್ತಕ್ಕೆ ಪ್ರತಿ ತಂತ್ರ ರೂಪಿಸುವುದು ಹಾಗೂ ರಾಜ್ಯದ 28 ಕ್ಷೇತ್ರಗಳಿಗೂ ವರ್ಚಸ್ಸುಳ್ಳ ಸಮರ್ಥ ಅಭ್ಯರ್ಥಿಗಳನ್ನು ಕಣಕ್ಕಿಳಿಸಲು ಸಂಭನೀಯ ಅಭ್ಯರ್ಥಿಗಳ ಮಾಹಿತಿ ಮತ್ತು ಹಿನ್ನೆಲೆಯನ್ನು ಪಡೆಯುತ್ತಿದ್ದಾರೆ ಎನ್ನಲಾಗಿದೆ. ಪಕ್ಷದಲ್ಲಿದ್ದುಕೊಂಡೇ ಚುನಾವಣಾ ಸಂದರ್ಭದಲ್ಲಿ ಆಡಳಿತಾರೂಢ ಕಾಂಗ್ರೆಸ್‌ಗೆ ಪರೋಕ್ಷವಾಗಿ ಬೆಂಬಲಿಸಲಿರುವ ಮುಖಂಡರ ಬಗ್ಗೆ ಮಾಹಿತಿ ಕಲೆ ಹಾಕುತ್ತಿದ್ದಾರೆ. ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್ 20 ಲೋಕಸಭಾ ಕ್ಷೇತ್ರಗಳನ್ನು ಗೆಲ್ಲಲ್ಲೇಬೇಕು ಎಂದು ಪಣತೊಟ್ಟು, ಶೇಕಡವಾರು ಮತ ಹೆಚ್ಚಿಸಿಕೊಳ್ಳಲು ದೊಡ್ಡ ಪ್ರಮಾಣದಲ್ಲಿ ಆಪರೇಷನ್ ಹಸ್ತಕ್ಕೆ ಮುಂದಾಗಿದೆ. ಸೆಪ್ಟೆಂಬರ್ ತಿಂಗಳ ಮೊದಲ ವಾರದಲ್ಲಿ ಶಾಸಕರು ಹಾಗೂ ಪ್ರಭಾವಿ ನಾಯಕರನ್ನು ಪಕ್ಷಕ್ಕೆ ಸೇರ್ಪಡೆ ಮಾಡಿಕೊಳ್ಳಲಿದೆ ಎನ್ನುವ ಸುಳಿವರಿತ ಬಿಜೆಪಿ ವರಿಷ್ಠರು ಪರ್ಯಾಯ ವ್ಯವಸ್ಥೆ ಹೊಣೆಯನ್ನು ಸಂತೋಷ್‌ಗೆ ವಹಿಸಿದ್ದಾರೆ.

ವೆಂಕಟೇಶ್ ಬಲಿ

ಖ್ಯಾತರಾಗಿದ್ದ ವೆಂಕಟೇಶ್ ಸಾವಿನಿಂದ ದುಃಖಿತನಾಗಿದ್ದೇನೆ ಎಂದು ತಿಳಿಸಿದ್ದಾರೆ. ಇಂದು ಆಲೂರು ವಲಯದ ರಾಯರಕೊಪ್ಪಲು ಬಳಿ ಗಾಯಗೊಂಡಿದ್ದ “ಭೀಮ” ಎಂದು ಸ್ಥಳೀಯರು ಕರೆಯುತ್ತಿದ್ದ ಕಾಡಾನೆಗೆ ಚಿಕಿತ್ಸೆ ನೀಡುವ ಸಲುವಾಗಿ ಅರವಳಿಕೆ ಚುಚ್ಚುಮದ್ದನ್ನು ಶೂಟ್ ಮಾಡುವ ವೇಳೆ ಕಾಡಾನೆ ದಾಳಿ ನಡೆಸಿದ್ದು, ವೆಂಕಟೇಶ್ ಅವರು ಮೃತಪಟ್ಟಿರುವುದಾಗಿ ತಿಳಿದು ತೀವ್ರ ನೋವಾಗಿದೆ. ಮೃತರ ಆತ್ಮಕ್ಕೆ ಶಾಂತಿ ದೊರಕಲಿ. ವೆಂಕಟೇಶ್ ಅವರ ಅಕಾಲಿಕ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ಭಗವಂತ ಕರುಣಿಸಲಿ ಎಂದು ದೇವರಲ್ಲಿ ಪಾರ್ಥಿಸುತ್ತೇನೆ ಎಂದು ಈಶ್ವರ ಖಂಡ್ರೆ ತಿಳಿಸಿದ್ದಾರೆ. ವೆಂಕಟೇಶ್ ಅವರ ಪುತ್ರ ಮೋಹಿತ್ ಅವರಿಗೆ ಪತ್ರ ಬರೆದು ಈಶ್ವರ ಖಂಡ್ರೆ ಸಂತಾಪ ಸೂಚಿಸಿದ್ದಾರೆ.

ದಸರಾ ಗಜ ಪಯಣಕ್ಕೆ ಇಂದು ಚಾಲನೆ

ಮಹೋತ್ಸವ ಅ.15 ರಿಂದ 24(ಜಂಬೂಸವಾರಿ)ರವರೆಗೆ ಜರುಗಲಿದ್ದು, ಸೆ.1ರಂದು ಆಗಮಿಸುವ ಮೊದಲ ತಂಡದಲ್ಲಿ ಬರುವ ಆನೆಗಳಿಗೆ ಹೆಚ್ಚಿನ ಜವಾಬ್ದಾರಿ ಇರುವುದರಿಂದ ತರಬೇತಿ, ವಿವಿಧ ತಾಲೀಮು ನಡೆಸುವ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಮೊದಲ ತಂಡದಲ್ಲಿ ಅಂಬಾರಿ ಆನೆ, ಗಜಪಡೆಯ ನಾಯಕ ಅಭಿಮನ್ಯು(ಮತ್ತಿಗೂಡು) ನೇತೃತ್ವದಲ್ಲಿ ಮತ್ತಿಗೂಡಿನಿಂದ ಭೀಮ, ಮಹೇಂದ್ರ, ಬಳ್ಳೆ ಶಿಬಿರದಿಂದ ಮಾಜಿ ನಾಯಕ ಅರ್ಜುನ, ದುಬಾರೆಯಿಂದ ಧನಂಜಯ, ಗೋಪಿ, ಕಂಜನ್, ಹೆಣ್ಣಾನೆಗಳಾದ ವಿಜಯ (ದುಬಾರೆ) ಹಾಗೂ ಭೀಮನಕಟ್ಟೆಯಿಂದ ವರಲಕ್ಷ್ಮೀ ಆನೆ ಮೈಸೂರಿಗೆ ಆಗಮಿಸಲಿವೆ.

ಸೆ.4ಕ್ಕೆ ಅರಮನೆ ಅಂಗಳಕ್ಕೆ: ಮೈಸೂರಿನ ಅಶೋಕಪುರಂನಲ್ಲಿರುವ ಅರಣ್ಯ ಭವನದಲ್ಲಿ ಸೆ.4ರವರೆಗೂ ಮೊದಲ ತಂಡದ ಆನೆಗಳು ಬೀಡು ಬಿಡಲಿವೆ. ಅರಮನೆಯಿಂದ ರಾಜವಂಶಸ್ಥರು ನೀಡುವ ಸೂಕ್ತ ಸಮಯಕ್ಕೆ ಸರಿಯಾಗಿ ಸೆ.4ರಂದು ಅರಣ್ಯ ಭವನದಿಂದ ಬಲ್ಲಾಳ್ ವೃತ್ತ, ಜೆಎಲ್‌ಬಿ ರಸ್ತೆ, ಚಾಮರಾಜ ಜೋಡಿ ರಸ್ತೆ ಮೂಲಕ ಜಯಮಾರ್ತಾಂಡ ದ್ವಾರದಿಂದ ಅರಮನೆ ಅಂಗಳಕ್ಕೆ ಗಜಪಡೆ ಅಡಿಯಿಡುತ್ತವೆ. ಸೆ.6ರಂದು ಆನೆಗಳ ತೂಕ ಮಾಡಿಸಿ, ಸೆ.7ರಿಂದ ತಾಲೀಮು ಆರಂಭಿಸಲಾಗುತ್ತದೆ.

ಮದದ ಲಕ್ಷಣದಿಂದ ಪಾರ್ಥಸಾರಥಿ ಔಟ್, ಹೊಸ ಆನೆ ಕಂಜನ್ ಇನ್

- 2014ರಲ್ಲಿ ಹಾಸನದಲ್ಲಿ ಸೆರೆ ಹಿಡಿದ 24 ವರ್ಷದ ಗಂಡಾನೆ
- ಸೌಮ್ಯ ಸ್ವಭಾವ, ಕಾಡಾನೆ, ಹುಲಿ ಸೆರೆ ಕಾರ್ಯಾಚರಣೆಯಲ್ಲಿ ಭಾಗಿ ಅನುಭವ
- ಭವಿಷ್ಯದ ಅಂಬಾರಿ ಆನೆ ಆಗುವ ಲಕ್ಷಣ ಹೊಂದಿರುವ ಕಂಜನ್



ದಸರಾ ಮಹೋತ್ಸವದಿಂದ ದೂರ ಉಳಿಯಲಿರುವ ಪಾರ್ಥಸಾರಥಿ

ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಆ.31– ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ವಿವಿಧ ಕ್ಯಾಂಪ್‌ಗಳಿಂದ ಗಜಪಯಣದ ಮೂಲಕ ಸಾಂಸ್ಕೃತಿಕ ನಗರಿ ಮೈಸೂರಿಗೆ ಆಗಮಿಸಬೇಕಾಗಿದ್ದ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ರಾಂಪುರ ಕ್ಯಾಂಪ್‌ನ 'ಪಾರ್ಥಸಾರಥಿ' ಆನೆಗೆ ಮದದ ಲಕ್ಷಣ ಕಂಡು ಬಂದಿರುವ ಹಿನ್ನೆಲೆಯಲ್ಲಿ ಕೊನೆ ಕ್ಷಣದಲ್ಲಿ ಗಜಪಡೆಯ ಮೊದಲ ತಂಡದಿಂದ ಸ್ಥಾನ ಕಳೆದುಕೊಂಡಿದ್ದು, ಅದರ ಬದಲಿಗೆ ದುಬಾರೆ ಕ್ಯಾಂಪ್‌ನಲ್ಲಿರುವ ಹೊಸ ಆನೆ 'ಕಂಜನ್' ಇದೇ ಮೊದಲ ಬಾರಿಗೆ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುವ ಅವಕಾಶ ಗಿಟ್ಟಿಸಿಕೊಂಡಿದೆ.

ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯಾದ ಗಜಪಡೆ ಆಯ್ಕೆ ಪ್ರಕ್ರಿಯೆನ್ನು ಈ ಬಾರಿ ಸೂಕ್ಷ್ಮ ರೀತಿ ಮಾಡಲಾಗಿದೆ. ನಾಲ್ಕು ಹೆಣ್ಣಾನೆಗಳಿಗೆ ಕಡ್ಡಾಯವಾಗಿ ಪ್ರೆಗ್ನೆನ್ಸಿ ಟೆಸ್ಟ್ ಮಾಡಿಸಲಾಗಿತ್ತು. ಗಂಡಾನೆಗಳ ಮಸ್ತ್ (ಮದ) ಬಂದಿರುವ ಸ್ಥಿತಿ, ಆರೋಗ್ಯ ಸೇರಿದಂತೆ ಇನ್ನಿತರ ಮಾನದಂಡಗಳ ಮೇಲೆ ಆನೆಗಳ ಆಯ್ಕೆ ಮಾಡಲಾಗಿತ್ತು. 14 ಆನೆಗಳಲ್ಲಿ ಮೊದಲ ತಂಡದಲ್ಲಿ ಎರಡು ಹೆಣ್ಣಾನೆ, 7 ಗಂಡಾನೆ ತರಲು ನಿರ್ಧರಿಸಲಾಗಿತ್ತು.

ಮೊದಲ ತಂಡದಲ್ಲಿ ಸ್ಥಾನ ಪಡೆದಿದ್ದ ಬಂಡೀಪುರದ ರಾಂಪುರ ಕ್ಯಾಂಪ್‌ನ 20 ವರ್ಷದ ಪಾರ್ಥಸಾರಥಿ ಗಜಪಯಣದ ಮೂಲಕ ಮೈಸೂರಿಗೆ ಆಗಮಿಸಬೇಕಾಗಿತ್ತು. ಆದರೆ, ಗಜಪಯಣಕ್ಕೂ 3–4 ದಿನ ಇರುವಾಗಲೇ ಪಾರ್ಥಸಾರಥಿಗೆ ಮದದ ಅಂಶ ಕಾಣಿಸಿಕೊಂಡಿದ್ದು, ಈ ಕಾರಣದಿಂದ ಗಜಪಡೆಯ ಮೊದಲ ತಂಡದಿಂದ ಪಾರ್ಥಸಾರಥಿಯನ್ನು ಕೈ ಬಿಡಲಾಗಿದೆ. ಇದರಿಂದ ಹೊಸ ಆನೆಯಾದ 'ಕಂಜನ್' ಎಂಟ್ರಿ ಪಡೆದಿದೆ. ಮೊದಲ ತಂಡದಲ್ಲೇ ಮೈಸೂರಿಗೆ ಆಗಮಿಸುತ್ತಿದೆ.



ರಾಂಪುರದ ಕ್ಯಾಂಪ್‌ನ ಮರಿ ಅಶ್ವತ್ಥಾಮನೊಂದಿಗೆ ಹಿರಣ್ಯಾ.

ಕಂಜನ್ ಮೇಲೆ ಹೆಚ್ಚಿದ ಒಲವು: ದಸರಾ ಮಹೋತ್ಸವದಲ್ಲಿ ಇದೇ ಮೊದಲ ಬಾರಿಗೆ ಪಾಲ್ಗೊಳ್ಳುತ್ತಿರುವ 24 ವರ್ಷದ ಕಂಜನ್ ಆನೆ ಮೇಲೆ ಅರಣ್ಯಾಧಿಕಾರಿಗಳಿಗೆ ನಿರೀಕ್ಷೆಯಿದೆ ಎರಡನೇ ತಲೆಮಾರಿನ ಅಂಬಾರಿ ಆನೆಗಳನ್ನು ಸಜ್ಜುಗೊಳಿಸುವ ಸವಾಲನ್ನು ಎದುರಿಸುತ್ತಿರುವ ಅರಣ್ಯ ಇಲಾಖೆ ಅಧಿಕಾರಿಗಳು ಈ ವರ್ಷದಿಂದಲೇ ಹೊಸ ಗಂಡಾನೆಗಳಿಗೆ ತರಬೇತಿ ನೀಡಲು ಮುಂದಾಗಿದ್ದಾರೆ. ಆ ಕಾರಣದಿಂದ ಈ ಬಾರಿ ನಾಲ್ಕು ಹೊಸ ಆನೆಗಳಿಗೆ ಅವಕಾಶ ನೀಡಲು ನಿರ್ಧರಿಸ ಲಾಗಿತ್ತು. ಎರಡನೇ ತಂಡದಲ್ಲಿ ಬರಬೇಕಾಗಿದ್ದ ಕಂಜನ್, ಇದೀಗ ಮೊದಲ ತಂಡದಲ್ಲೇ ಮೈಸೂರಿಗೆ ಆಗಮಿಸುತ್ತಿರುವುದು ವಿಶೇಷ.

ಯಾರಿದು ಕಂಜನ್: ಹಾಸನದ ಆಲೂರು ಸೇರಿದಂತೆ ವಿವಿಧೆಡೆ ಉಪಟಳ ನೀಡುತ್ತಿದ್ದ ಕೆಲ ಆನೆಗಳಲ್ಲಿ ಕಂಜನ್ ಒಂದಾಗಿದ್ದು, 2014ರಲ್ಲಿ ಈ ಆನೆಯನ್ನು ಸೆರೆ ಹಿಡಿಯಲಾಗಿತ್ತು. 14–15ನೇ ವಯಸ್ಸಿಗೆ ಪುಂಡಾಟಿಕೆ ಮೆರೆಯುತ್ತಿದ್ದ ಗಂಡಾನೆಯನ್ನು ಸೆರೆ ಹಿಡಿದು ದುಬಾರೆ ಕ್ಯಾಂಪ್‌ನಲ್ಲಿಟ್ಟು ಪಳಗಿಸಲಾಗಿತ್ತು. ಎರಡೇ ವರ್ಷದಲ್ಲಿ ಮಾವುತ, ಕಾವಾಡಿಗಳ ಹಿಡಿತಕ್ಕೆ ಬಂದ ಕಂಜನ್, ಈಗಾಗಲೇ ಕಾಡಾನೆ ಸೆರೆ ಹಾಗೂ ನಾಡಿಗೆ ಬಂದ ಕಾಡಾನೆಯನ್ನು ಕಾಡಿಗೆ ಹಿಮ್ಮೆಟ್ಟಿಸುವ ಕಾರ್ಯಾಚರಣೆ ಹಾಗೂ ಹುಲಿ ಸೆರೆ ಕಾರ್ಯಾಚರಣೆಯಲ್ಲೂ ಭಾಗವಹಿಸಿರುವ ಅನುಭವ ಹೊಂದಿದೆ.

ಪಟಾಕಿ ಶಬ್ದ ಹಾಗೂ ವಾಹನಗಳ ಶಬ್ದಕ್ಕೆ ಹೊಂದಿಕೊಂಡಿದ್ದು, ಇದೀಗ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ತರಬೇತಿ ನೀಡಲು ಉದ್ದೇಶಿಸಲಾಗಿದೆ. ಅಂಬಾರಿ ಆನೆಗೆ ಇರಬೇಕಾದ ಮುಖ್ಯ ಲಕ್ಷಣವೂ ಕಂಜನ್‌ಗೆ ಇದೆ. ಎರಡು ದಂತವೂ ಉದ್ದವಾಗಿದ್ದು, ಆಕರ್ಷಕವಾಗಿದೆ. ಈ ಹಿನ್ನೆಲೆಯಲ್ಲಿ ಈ ಭಾರಿ ಎಲ್ಲರ ನಿರೀಕ್ಷೆ ಹೊಸ ಆನೆ ಕಂಜನ್ ಮೇಲಿದೆ. ಪ್ರಸ್ತುತ ಕಂಜನ್‌ನನ್ನು ವಿಜಯ್ ಹಾಗೂ ಮಣಿಕಂಠ ಮಾವುತ ಮತ್ತು ಕಾವಾಡಿಯಾಗಿ ಪಾಲನೆ ಮಾಡುತ್ತಿದ್ದಾರೆ.

ಪಾರ್ಥಸಾರಥಿಯ ಮೇಲೂ ಭರವಸೆ: ರಾಂಪುರ ಕ್ಯಾಂಪ್‌ನಿಂದ ಬರಬೇಕಾಗಿದ್ದ 20 ವರ್ಷದ ಪಾರ್ಥಸಾರಥಿ ಕಳೆದ ವರ್ಷ ದಸರಾ ಮಹೋತ್ಸವದಲ್ಲಿ ಮೊದಲ ಬಾರಿಗೆ ಪಾಲ್ಗೊಂಡಿದ್ದ ಅನುಭವ ಹೊಂದಿತ್ತು ಆದರೆ, ಈ ಬಾರಿ ಮದದ ಗುಣಲಕ್ಷಣದಿಂದ ದಸರಾ ಮಹೋತ್ಸವದಿಂದ ದೂರ ಉಳಿದಿದ್ದು, ಮುಂಬರುವ ದಿನಗಳಲ್ಲಿ ಪಾರ್ಥಸಾರಥಿಯೂ ಜಂಬೂಸವಾರಿಯಲ್ಲಿ ಪ್ರಮುಖ ಪಾತ್ರವಹಿಸುವ ಆನೆಯಾಗಿ ಹೊರಹೊಮ್ಮುವ ವಿಶ್ವಾಸವಿದೆ. ಇನ್ನು 15 ದಿನ ಪಾರ್ಥಸಾರಥಿಯ ಆರೋಗ್ಯದ ಮೇಲೆ ಗಮನ ಹರಿಸಲಾಗುತ್ತಿದ್ದು, ಒಂದು ವೇಳೆ ಮದ ಇಲ್ಲದಿದ್ದರೆ, ಎರಡನೇ ತಂಡದಲ್ಲಿ ಕರೆತರಲು ಉದ್ದೇಶಿಸಲಾಗಿದೆ. ಆದರೆ, ಮದ ಮುಂದುವರೆದರೆ ಈ ಬಾರಿ ದಸರಾ ಮಹೋತ್ಸವದಿಂದ ಪಾರ್ಥಸಾರಥಿ ದೂರ ಉಳಿಯಲಿದೆ.

ಎರಡನೇ ತಂಡದಲ್ಲಿ ಹಿರಣ್ಯಾ: ಅಂಬಾರಿ ಆನೆ ಪಕ್ಕ ಕುಮ್ಕಿ ಆನೆಯಾಗಿ ಸಾಗುವ ಹೆಣ್ಣಾನೆಗಳ ಕೊರತೆ ಎದ್ದು ಕಾಣುತ್ತಿದೆ. ಮೈಸೂರು, ಕೊಡಗು, ಚಾಮರಾಜನಗರ ಜಿಲ್ಲಾ ವ್ಯಾಪ್ತಿಯಲ್ಲಿರುವ ಆನೆ ಶಿಬಿರಗಳಲ್ಲಿ ಹಲವು ಹೆಣ್ಣಾನೆಗಳಿವೆ. ಆದರೆ, ಕೆಲವು ಆನೆಗಳು ಗರ್ಭಿಣಿಯಾಗಿದ್ದರೆ, ಮತ್ತೆ ಕೆಲವು ಆನೆಗಳಿಗೆ ಚಿಕ್ಕ ಮರಿಗಳಿವೆ. ಈ ಹಿನ್ನೆಲೆಯಲ್ಲಿ ಹೆಣ್ಣಾನೆಗಳ ಲಭ್ಯತೆಯ ಸಮಸ್ಯೆ ಕಾಡುತ್ತಿದೆ. ಈ ನಿಟ್ಟಿನಲ್ಲಿ ರಾಂಪುರ ಕ್ಯಾಂಪ್‌ನಲ್ಲಿದ್ದ ಚೈತ್ರ ಆನೆ ಈ ಬಾರಿ ಗರ್ಭಿಣಿಯಾಗಿರುವುದರಿಂದ ದಸರಾ ಮಹೋತ್ಸವಕ್ಕೆ ಗೈರಾಗುತ್ತಿದೆ. ಅದರ ಬದಲಾಗಿ ರಾಂಪುರ ಕ್ಯಾಂಪ್‌ನಲ್ಲಿರುವ 35 ವರ್ಷದ ಹಿರಣ್ಯಾ ಆನೆಯನ್ನು ಕರೆತರಲಾಗುತ್ತಿದೆ. ಹಿರಣ್ಯಾ ಆನೆಗೆ ಅಶ್ವತ್ಥಾಮ ಎಂಬ ಎರಡು ವರ್ಷದ ಗಂಡು ಮರಿಯಿದ್ದು, ಅದನ್ನು ತಾಯಿಯಿಂದ ಬೇರ್ಪಡಿಸುವ ಕಾರ್ಯ ಆರಂಭವಾಗಿದೆ. ನಿಯಮದಂತೆ ಎರಡು ವರ್ಷದ ನಂತರ ತಾಯಿಯಿಂದ ಮರಿಯನ್ನು ಬೇರ್ಪಡಿಸಿ, ಅದಕ್ಕೆ ತರಬೇತಿ ನೀಡಲಾಗುತ್ತದೆ. ಅದೇ ಮಾದರಿಯಲ್ಲಿ ಹಿರಣ್ಯಾಗಳಿಂದ ಮರಿಯನ್ನು ಬೇರ್ಪಡಿಸಿರುವುದರಿಂದ ಈ ಬಾರಿ ದಸರಾ ಮಹೋತ್ಸವಕ್ಕೆ ಕರೆತರಲಾಗುತ್ತದೆ.

ವಿಶೇಷ ಮಕ್ಕಳ ಶಾಲೆಯಲ್ಲಿ ಸುನೀಲ್ ಬೋಸ್ ಹುಟ್ಟುಹಬ್ಬ



ಮೈಸೂರು, ಆ.31– ಅಖಿಲ ಕರ್ನಾಟಕ ಡಾ. ಎಚ್.ಸಿ.ಮಹದೇವಪ್ಪನವರ ಅಭಿಮಾನಿ ಬಳಗದ ವತಿಯಿಂದ ಕಾಂಗ್ರೆಸ್ ಮುಖಂಡ ಸುನೀಲ್ ಬೋಸ್ ಅವರ 42ನೇ ಹುಟ್ಟುಹಬ್ಬವನ್ನು ತಿಲಕ್‌ನಗರದ ವಿಶೇಷ ಮಕ್ಕಳ ಶಾಲೆಯಲ್ಲಿ ಆಚರಿಸಿದರು.

ಬಳಗದ ವತಿಯಿಂದ 35 ವಿಶೇಷ ಮಕ್ಕಳಿಗೆ ಸಮವಸ್ತ್ರ ವಿತರಿಸಲಾಯಿತು. ಅಲ್ಲದೇ ಸಿಹಿ ಹಂಚಿ, ಅನ್ನ ಸಂತರ್ಪಣೆ ಮಾಡಲಾಯಿತು. ಬೃಹತ್ ಗುಲಾಬಿ ಹಾರವನ್ನು ಹಾಕಿ ಮುಖಂಡ ಸುನೀಲ್ ಬೋಸ್ ಅವರಿಗೆ ಹುಟ್ಟುಹಬ್ಬದ ಶುಭ ಕೋರಲಾಯಿತು.

ಈ ವೇಳೆ ಮಾತನಾಡಿದ ಸುನೀಲ್ ಬೋಸ್, ನನ್ನ ತಂದೆಯ ಅಭಿಮಾನಿಗಳು ಸಂಘ–ಸಂಸ್ಥೆಯನ್ನು ಸ್ಥಾಪಿಸಿ ಸಮಾಜಮುಖಿಯಾಗಿ ತಮ್ಮನ್ನು ತೊಡಗಿಸಿಕೊಂಡಿದ್ದು ಸಂತೋಷನ್ನುಂಟು ಮಾಡಿದೆ. ವಿಶೇಷ ಮಕ್ಕಳ ನಡುವೆ ನನ್ನ ಹುಟ್ಟುಹಬ್ಬ ಆಚರಿಸಿರುವುದರಿಂದ ಕಾರ್ಯಕರ್ತರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದರು.

ಡಾ. ಎಚ್.ಸಿ.ಮಹದೇವಪ್ಪ ಅಭಿಮಾನಿ ಬಳಗದ ರಾಜ್ಯಾಧ್ಯಕ್ಷ ಹಿನಕಲ್ ನಂಜುಂಡ, ಕಾರ್ಯಾಧ್ಯಕ್ಷ ಮಾವಿನಹಳ್ಳಿ ಸಿ.ರವಿ, ಉಪಾಧ್ಯಕ್ಷ ಪ್ರೊ. ಬಸವರಾಜು, ಪದಾಧಿಕಾರಿಗಳಾದ ಕಡಕೋಳ ಭರತ್, ಪ್ರಧಾನ ಕಾರ್ಯದರ್ಶಿ ಚಾಮರಾಜು, ಬಸವರಾಜು, ಮಹೇಶ್, ಹುಣಸೂರು ರವಿ, ಬಾಬು ಹಾಗೂ ಅಭಿಮಾನಿಗಳು, ಹಿತೈಷಿಗಳು ಹಾಜರಿದ್ದರು.

ಮಹಿಳೆಯರಿಗೆ ಉಚಿತ ಬಸ್ ಪ್ರಯಾಣದ 'ಶಕ್ತಿ' ಯೋಜನೆ ವಿರುದ್ಧ ಸಲ್ಲಿಸಿದ್ದ ಪಿಐಎಲ್ ವಾಪಸ್

ಬೆಂಗಳೂರು: ರಾಜ್ಯದಲ್ಲಿ 'ಶಕ್ತಿ' ಯೋಜನೆಯಡಿ ಮಹಿಳೆಯರಿಗೆ ಒದಗಿಸುತ್ತಿರುವ ಉಚಿತ ಬಸ್ ಪ್ರಯಾಣವನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಹಿಂಪಡೆಯಲು ಹೈಕೋರ್ಟ್ ಗುರುವಾರ ಅನುಮತಿ ನೀಡಿದೆ ಈ ಸಂಬಂಧ ಮೂವರು ಕಾನೂನು ವಿದ್ಯಾರ್ಥಿಗಳು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಅಸ್ಪಷ್ಟವಾಗಿದ್ದು, ಯಾವುದೇ ಅಧ್ಯಯನದ ಬೆಂಬಲವಿಲ್ಲ ಎಂಬುದನ್ನು ನ್ಯಾಯಾಲಯ ಪರಿಗಣಿಸಿತು.

ಶಕ್ತಿ ಯೋಜನೆಯು ಅವ್ಯವಸ್ಥೆ, ಗದ್ದಲ ಮತ್ತು ಬಸ್ ನಿಲ್ದಾಣಗಳಲ್ಲಿ ಗುಂಪಿನ ಅಶಿಸ್ತಿನ ವರ್ತನೆಗೆ ಕಾರಣವಾಗಿದ್ದು, ಮಕ್ಕಳು ಮತ್ತು ಹಿರಿಯ ನಾಗರಿಕರ ಮೇಲೆ ಪರಿಣಾಮ ಬೀರುತ್ತಿದೆ ಮತ್ತು ಆರ್ಥಿಕತೆಗೆ ತೀವ್ರ ನಷ್ಟವನ್ನುಂಟು ಮಾಡಿದೆ ಎಂದು ಅಶ್ವಿನ್ ಶಂಕರ್ ಭಟ್, ನೇಹಾ ವೆಂಕಟೇಶ್ ಮತ್ತು ಯಶಿಕಾ ಶರವಣನ್ ಅವರು ಪಿಐಎಲ್‌ನಲ್ಲಿ ದೂರಿದ್ದರು. ಸರ್ಕಾರಿ ಸ್ವಾಮ್ಯದ ಬಸ್‌ಗಳಲ್ಲಿ ಉಚಿತ ಪ್ರಯಾಣವು ಮಹಿಳೆಯರಿಗೆ ಪ್ರಯೋಜನಕ್ಕಿಂತ ಹೆಚ್ಚು ಹಾನಿಯನ್ನುಂಟು ಮಾಡುತ್ತಿದೆ ಎಂದು ಅರ್ಜಿಯಲ್ಲಿ ಉಲ್ಲೇಖಿಸಿದ್ದರು.

ಈ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಪ್ರಸನ್ನ ಬಿ ವರಾಳೆ ಮತ್ತು ನ್ಯಾಯಮೂರ್ತಿ ಎಂಜಿಎಸ್ ಕಮಲ್ ಅವರನ್ನೊಳಗೊಂಡ ಪೀಠ, 'ಶಕ್ತಿ' ಯೋಜನೆ ಪ್ರಾರಂಭಕ್ಕೂ ಮುನ್ನಾ ಸರ್ಕಾರಿ ಬಸ್‌ಗಳಲ್ಲಿ ಮಹಿಳೆಯರ ಪ್ರಯಾಣ ಆರಾಮದಾಯಕವಾಗಿತ್ತೇ ಎಂದು ದೂರುದಾರರ ಪರ ವಕೀಲರನ್ನು ಪ್ರಶ್ನಿಸಿತು. ಅಲ್ಲದೇ ಎಲ್ಲೆಲ್ಲಿ ಜನದಟ್ಟಣೆ ಉಂಟಾಗುತ್ತಿದೆ. ಈ ಯೋಜನೆ ಯಾವುದೇ ನಿರ್ದಿಷ್ಟ ಗುಂಪಿನ ಜನರಿಗೆ ಸೀಮಿತವಾಗಿದೆಯೇ ? ಈ ನಿಟ್ಟಿನಲ್ಲಿ ಅಧ್ಯಯನ ನಡೆಸಲಾಗಿದೆಯೇ ಎಂಬುದರ ಕುರಿತು ನ್ಯಾಯಾಲಯ ಉತ್ತರ ಬಯಸಿತು.

ಜನದಟ್ಟಣೆಗಾಗಿ ಪಿಐಎಲ್ ಪರಿಹಾರವನ್ನು ಹುಡುಕುತ್ತಿದೆಯೇ ಅಥವಾ ಯೋಜನೆಯನ್ನು ಪ್ರಶ್ನಿಸುತ್ತಿದೆಯೇ ಎಂದು ಅರ್ಜಿದಾರರನ್ನು ಪ್ರಶ್ನಿಸಿದ ನ್ಯಾಯಪೀಠ, ಮುಂಬೈ ಲೋಕಲ್ ರೈಲುಗಳತ್ತ ಬೊಟ್ಟು ಮಾಡಿ ಅಲ್ಲಿ ಎಷ್ಟು ಜನಸಂದಣಿ ಇದೆ ಎಂದು ತಿಳಿದಿದೆಯೇ ಎಂದು ಕೇಳಿತು. ಸೂಕ್ತ ಸಿದ್ಧತೆಗಳ ನಂತರವೇ ಪಿಐಎಲ್ ಸಲ್ಲಿಸಬೇಕು ಎಂದು ಅರ್ಜಿದಾರರಿಗೆ ಸಲಹೆ ನೀಡಿತು. ನಂತರ ಅರ್ಜಿದಾರರ ಪರ ವಕೀಲರು ಪಿಐಎಲ್ ಹಿಂಪಡೆಯಲು ನ್ಯಾಯಾಲಯದ ಅನುಮತಿ ಕೋರಿದರು.

ಅರಸು ಸಮಾಜದ ಎಲ್ಲಾ ವರ್ಗದ ಬಡ ಜನರಿಗೆ ಅವಕಾಶ ಕಲ್ಪಿಸಿದರು

- ಮಾಜಿ ಸಚಿವ ಪಿ.ಜಿ.ಆರ್.ಸಿಂಧ್ಯಾ ಸ್ಮರಣೆ
- ಅರಸು ಸಮಾಜ ಸ್ವಾರ್ಥ ರಹಿತವಾದ ಸಮುದಾಯ
- ದೇವರಾಜ ಅರಸು 108ನೇ ಜನ್ಮ ದಿನಾಚರಣೆ ; ಪ್ರಶಸ್ತಿ ಪ್ರದಾನ

ಮೈಸೂರು, ಆ.31(ಜಿಎ)– ದೇವರಾಜ ಅರಸು ಕೇವಲ ಒಂದು ಜನಾಂಗದ ನಾಯಕರಲ್ಲ ಎಂದು ಮಾಜಿ ಸಚಿವರೂ ಆದ ಭಾರತ ಸ್ಕೌಟ್ ಅಂಡ್ ಗೈಡ್ಸ್ ಆಯುಕ್ತ ಪಿ.ಜಿ.ಆರ್.ಸಿಂಧ್ಯಾ ತಿಳಿಸಿದರು.

ನಗರದ ದಿ ಇನ್ಸಿಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಅನ್ವೇಷಣಾ ಸೇವಾ ಟ್ರಸ್ಟ್ ಹಾಗೂ ಅರಸು ಜಾಗೃತಿ ಅಕಾಡೆಮಿ ಚಾರಿಟಬಲ್ ಟ್ರಸ್ಟ್ ವತಿಯಿಂದ ಏರ್ಪಡಿಸಿದ್ದ ಧ್ವನಿಕೊಟ್ಟ ದಣಿ ಡಿ.ದೇವರಾಜೇ ಅರಸ್ 108ನೇ ಹುಟ್ಟುಹಬ್ಬದ ಸಂಭ್ರಮ ಹಾಗೂ ಸಾಧಕರಿಗೆ 'ಧ್ವನಿ ಕೊಟ್ಟ ಧನಿ' ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದರು.

ದೇವರಾಜ ಅರಸು ಕೇವಲ ಒಂದು ಜನಾಂಗದ ನಾಯಕರಲ್ಲ. ಸಮಾಜದಲ್ಲಿ ತುಳಿತಕ್ಕೆ ಒಳಗಾದ ಜನರಿಗೆ ಅವಕಾಶ ಸಿಗಬೇಕೆಂದು ಅಂತಹವರನ್ನು ಗುರುತಿಸಿ ಪ್ರೋತ್ಸಾಹಿಸುವಲ್ಲಿ ಅರಸು ಮುಂದಿದ್ದರು. ಅದರಂತೆ ಅರಸು ಅವರು ಸಮಾಜದ ಎಲ್ಲ ವರ್ಗದ ಜನರನ್ನು ಗುರುತಿಸಿ ಅವಕಾಶ ನೀಡಿದ್ದರು ಎಂದರು.

1967ರಲ್ಲಿ ಅರಸು ಅವರನ್ನು ಮಂತ್ರಿ ಮಂಡಲದಿಂದ ಕೈಬಿಡಲಾಗಿತ್ತು. ಕಾಂಗ್ರೆಸ್ ಇಬ್ಭಾಗ ಆದಾಗ ಅರಸು ಇಂದಿರಾ ಪರ ಗುರುತಿಸಿಕೊಂಡಿದ್ದರು. 1978ರಲ್ಲಿ 186 ಸೀಟು ಗೆಲ್ಲಲು ಅರಸು ಪರಿಶ್ರಮ ಕಾರಣವಾಗಿತ್ತು. ಎಲ್.ಜಿ. ಹಾವನೂರ ವರದಿ ಆಧರಿಸಿ ಮೀಸಲಾತಿ ಜಾರಿಗೊಳಿಸಿದರು. ಮಲ್ಲಿಕಾರ್ಜುನ ಖರ್ಗೆ ಹಾಗೂ ಧರ್ಮಸಿಂಗ್ ಅವರಂತಹ ನಾಯಕರನ್ನು ಅರಸು ಗುರುತಿಸಿದ್ದರು ಎಂದು ದೇವರಾಜ ಅರಸು ಅವರ ನೆನಪನ್ನು ಮೆಲುಕು ಹಾಕಿದರು.



ವಿಧಾನಸೌಧದಲ್ಲಿ ಪ್ರತಿಮೆ ನಿಲ್ಲಿಸಿದ್ದು ಬಿಟ್ಟರೆ ಅರಸು ಸ್ಮರಣೆ ಕಾರ್ಯ ಆಗಿಲ್ಲ. ತುರ್ತು ಪರಿಸ್ಥಿತಿ ತರುವಾಯ ದೇಶದ ಎಲ್ಲಡೆ ಕಾಂಗ್ರೆಸ್ ಸೋತರೂ ಕರ್ನಾಟಕದಲ್ಲಿ ಗೆಲ್ಲಲು ಅರಸು ಆಡಳಿತ ಕಾರಣ. ತುರ್ತು ಪರಿಸ್ಥಿತಿಯ ದುರ್ಬಳಕೆ ಮಾಡಿಕೊಳ್ಳದೇ ಅದನ್ನು ಬಡವರ ಪರವಾಗಿ ಉಪಯೋಗಿಸಿಕೊಂಡು ಜನಪರ ಕಾನೂನುಗಳನ್ನು ಜಾರಿಗೆ ತಂದರು ಎಂದರು.

ಈ ವೇಳೆ ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಮಾತನಾಡಿ, ರಾಜ್ಯದಲ್ಲಿ ಅನೇಕ ಸಂಘ–ಸಂಸ್ಥೆಗಳು ಸಮಾರಂಭ ಮಾಡುತ್ತವೆ. ಆದರೆ, ಅವುಗಳು ಯಾವುದಾದರೂ ಒಂದು ಸ್ವಾರ್ಥವನ್ನು ಇಟ್ಟುಕೊಂಡು ಮಾಡುತ್ತಾರೆ. ಆದರೆ, ಅರಸು ಸಮಾಜ ವಿಶಿಷ್ಟವಾದ ಮತ್ತು ಸ್ವಾರ್ಥ ರಹಿತವಾಗಿ ಯೋಚಿಸುವ ಸಮಾಜವಾಗಿದ್ದು, ಜಾತಿಭೇದವಿಲ್ಲದೆ ಪರೋಪಕಾರಿ ಕೆಲಸಗಳನ್ನು ಮಾಡುತ್ತಿದೆ ಎಂದರು.

ದೇವರಾಜ ಅರಸು ಅವರಿಗೆ ಅಸಾಧ್ಯ ಎಂಬುದು ಇರಲಿಲ್ಲ. ಎಲ್ಲವನ್ನೂ ಸಾಧ್ಯವಾಗಿಸಿ ಸಾಧಿಸುವ ಮನೋಭಾವ ಅವರಲ್ಲಿತ್ತು ಧ್ವನಿ ಇಲ್ಲದವರ ಪಾಲಿಗೆ ನಿಜವಾದ ಧಣಿಯಾಗಿ ಕೆಲಸ ಮಾಡಿದ್ದಾರೆ. ಸ್ವತಃ ನನಗೆ ವೈದ್ಯಕೀಯ ಕೋರ್ಸ್ ಓದಲು ಸಹಾಯ ಮಾಡಿದರು. ಅವರ ಅವಧಿಯಲ್ಲಿ ನೇರ ನೇಮಕಾತಿ ಮೂಲಕ ನನಗೆ ವೈದ್ಯಕೀಯ ಹುದ್ದೆ ನೀಡಿದರು. ಇದರಿಂದ ನಾನು ಅತ್ಯಂತ ಕಡಿಮೆ ವಯಸ್ಸಿಗೆ ಡಿಎಚ್‌ಓ ಆದೆ. ಅಪೌಷ್ಟಿಕತೆಯ ನಿರ್ಮೂಲನೆ ಮಾಡಲು ಶಾಲೆ ಮಕ್ಕಳಿಗೆ ಹಾಲು ವಿತರಿಸುವ ಯೋಜನೆ ತಂದರು. ಬಡತನದಲ್ಲಿ ಇದ್ದವರಿಗಷ್ಟೇ ಅದರ ನೋವು ಗೊತ್ತಿರುತ್ತದೆ. ಅದನ್ನು ದೇವರಾಜ ಅರಸು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದರು ಎಂದು ಅರಸು ಸಹಾಯ ನೆನೆದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಈ ನಾಡು ಕಂಡ ಅತ್ಯುತ್ತಮ ನಾಯಕ. ಮೈಸೂರಿಗೆ ಸಾಕಷ್ಟು ಕೊಡುಗೆ ನೀಡಿದ್ದಾರೆ. ಅಭಿವೃದ್ಧಿ ಹರಿಕಾರ. ಅದೇ ಹಾದಿಯಲ್ಲಿ ಸಾಗಿದ ದೇವರಾಜ ಅರಸು ಅವರ ಸಾಂಸ್ಕೃತಿಕ ನಗರಿಗೆ ಬಹಳಷ್ಟು ಸೌಲಭ್ಯಗಳನ್ನು ಕಲ್ಪಿಸಿದ್ದಾರೆ. ಬಡವರು ದೀನ ದುರ್ಬಲರು, ಅಸಂಘಟಿತ ಕಾರ್ಮಿಕರು, ಮಹಿಳೆಯರು ಹಾಗೂ ರೈತರಿಗೆ ಅನುಕೂಲವಾಗುವಂತಹ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ದೇವರಾಜ ಅರಸು ಅವರು ಒಂದು ಸಮುದಾಯಕ್ಕೆ ಕೆಲಸ ಮಾಡಲಿಲ್ಲ. ಎಲ್ಲಾ ವರ್ಗದವರಿಗೆ ಪ್ರಯೋಜನ ಆಗುವಂತಹ ಕಾರ್ಯಕ್ರಮಗಳನ್ನು ರೂಪಿಸಿದರು. ಸಾಮಾಜಿಕ ಪಿಡುಗಾಗಿದ್ದ ಜೀತ ಪದ್ಧತಿಯನ್ನು ನಿರ್ಮೂಲನೆ ಮಾಡಿದ ಹೆಗ್ಗಳಿಕೆ ಅರಸು ಅವರಿಗೆ ಸಲ್ಲುತ್ತದೆ. ರೈತರಿಗೆ ಸಾಲ ಸೌಲಭ್ಯ ನೀಡಿದರು. ಮಲ ಹೊರುವ ಪದ್ಧತಿ ನಿಷೇಧಿಸಿದರು. ಉಳುವವನೆ ಭೂಮಿಯ ಒಡೆಯ ಎಂಬ ಕಾನೂನು ಜಾರಿಗೆ ತಂದರು ಎಂದು ಅವರ ಆಡಳಿತವನ್ನು ಬಣ್ಣಿಸಿದರು.

“ಅರಸು ಜಯಂತಿ ಕೇವಲ ನಾಲ್ಕು ಜಿಲ್ಲೆಗೆ ಸೀಮಿತವಾಗಿದೆ. ಇದು ರಾಜ್ಯಾದ್ಯಂತ ನಡೆಯಬೇಕು. ಧ್ವನಿ ಇಲ್ಲದವರಿಗೆ ಅರಸರು ಧನಿ ಕೊಟ್ಟರು. ಮುಂದಿನ ವರ್ಷ ರಾಜ್ಯಾದ್ಯಂತ ಅರಸು ದಿನಾಚರಣೆ ನಡೆಯಬೇಕು. ಮೈಸೂರು ಜಿಲ್ಲೆಯಲ್ಲಿ ಅರಸು ಪ್ರತಿಮೆ ನಿರ್ಮಾಣ ಆಗಬೇಕು.

-ಡಾ.ಎಂ.ಜಿ.ಆರ್. ಅರಸು, ಅಧ್ಯಕ್ಷರು, ಅನ್ವೇಷಣ ಸೇವಾ ಟ್ರಸ್ಟ್

ಕಾರ್ಯಕ್ರಮದಲ್ಲಿ ಲೋಕಸೇವಾ ಆಯೋಗದ ಸದಸ್ಯ ಎಚ್.ಜಿ.ಪವಿತ್ರ, ನೇತ್ರ ಚಿಕಿತ್ಸಾ ತಜ್ಞೆ ಕೆ.ಅನಸೂಯ ಗೋಪಾಲ್, ಛಾಯಾಚಿತ್ರಕಾರ ಅನುರಾಗ್ ಬಸವರಾಜ್, ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಾರಾಯಣ ವಿ. ಹೆಗಡೆ, ಸಾಹಿತಿ ಎಸ್. ಉಮೇಶ್ ಹಾಗೂ ಉದ್ಯಮಿ ದೀಪಕ್ ಅರಸ್ ಅವರಿಗೆ ಧ್ವನಿ ಕೊಟ್ಟ ಧಣಿ ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು.

ಕುವೆಂಪು ಭಾಷಾ ಭಾರತಿ ಮಾಜಿ ಅಧ್ಯಕ್ಷ ಡಾ.ಪ್ರಧಾನ ಗುರುದತ್, ಮೈಸೂರು ಜಿಲ್ಲಾ ಸಣ್ಣ ಕೈಗಾರಿಕಾಗಳ ಸಂಘದ ಅಧ್ಯಕ್ಷ ಎ.ಎಸ್.ಸತೀಶ್, ಅನ್ವೇಷಣಾ ಸೇವಾ ಟ್ರಸ್ಟ್ ಸ್ಥಾಪಕ ಅಧ್ಯಕ್ಷ ಅಮರನಾಥರಾಜೇ ಅರಸ್, ಎಚ್.ಎಂ.ಟಿ.ಲಿಂಗರಾಜೇ ಅರಸ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.





'ಫೈಟರ್' ಟೀಸರ್

ನಿನ್ ಪಾಲಿಗೆ ಪುಂಗಿ ಊದೋ ಯಮನೂ ನಾನೇ

ವಿನೋದ್ ಪ್ರಭಾಕರ್ ಅಭಿನಯದ 'ಫೈಟರ್' ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಯಾಗಿ, ಎರಡೇ ದಿನಗಳಲ್ಲಿ 3 ಲಕ್ಷಕ್ಕೂ ಹೆಚ್ಚು ವೀಕ್ಷಣೆಯಾಗಿದೆ. ನೂತನ್ ಉಮೇಶ್ ನಿರ್ದೇಶನದ ಹಾಗೂ ಸೋಮಶೇಖರ್ ಕಟ್ಟಿಗೇನಹಳ್ಳಿ ಅವರ ನಿರ್ಮಾಣದ ಈ ಚಿತ್ರದ ಟೀಸರ್‌ನಲ್ಲಿ ವಿನೋದ್ ಪ್ರಭಾಕರ್ ಅವರು ವಿಭಿನ್ನ ಗೆಟಪ್‌ಗಳಲ್ಲಿ ಕಾಣಿಸಿಕೊಂಡಿದ್ದಾರೆ.

ಟೀಸರ್‌ನಲ್ಲಿ ಖಳನಾಯಕ ರಾಜ್‌ದೀಪಕ್ ಶೆಟ್ಟಿ 'ಯಾರೋ ನೀನು... ಎಂದು ಸಿಟ್ಟಿನಿಂದ ಕೇಳಿದಾಗ ಅದಕ್ಕೆ ಭಂಗಿ' ಊದೋ ಶಿವನೂ ನಾನೇ, ಪುಂಗಿ ಊದೋ ಯಮನೂ ನಾನೇ, ಬಂದಿರೋದು ಫೈಟರ್ ಕಣೋ... ಎಂದು ವಿನೋದ್ ಪ್ರಭಾಕರ್ ಅಬ್ಬರಿಸುತ್ತಾರೆ. ಈಗ ಎಲ್ಲರ ಬಾಯಲ್ಲೂ ಇದೇ ಡೈಲಾಗ್ ವೈರಲ್ ಆಗುತ್ತಿದೆ, ಚಿತ್ರದಲ್ಲಿ ನಾಯಕನ ಪಾತ್ರಕ್ಕೆ ಹಲವಾರು ಶೇಡ್‌ಗಳಿದ್ದು, ಇಬ್ಬರು ಬೆಡಗಿಯರು ನಾಯಕಿಯರು ಕಾಣಿಸಿಕೊಂಡಿದ್ದಾರೆ,

ಫೈಟರ್ ಅಂದರೆ ಬರೀ ಹೊಡೆದಾಡುವವನು ಎಂದಲ್ಲ, ಅನ್ಯಾಯದ ವಿರುದ್ಧ ಹಾಗೂ ತನ್ನ ಕುಟುಂಬಕ್ಕಾಗಿ ಹೋರಾಡುವವನು. ವಿನೋದ್ ಪ್ರಭಾಕರ್ ಅವರನ್ನು ಈವರೆಗೂ ನೋಡಿರದಂಥ ವಿಶೇಷ ಲುಕ್‌ನಲ್ಲಿ ಕಾಣಬಹುದಾಗಿದೆ. ನಿರ್ಮಾಪಕ ಸೋಮಶೇಖರ್ ಅವರು ಅದ್ದೂರಿಯಾಗಿ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಗುರು ಕಿರಣ್ ಅವರ ಸಂಗೀತದಲ್ಲಿ ಉತ್ತಮ ಹಾಡುಗಳು ಮೂಡಿಬಂದಿವೆ. ನಾಯಕಿಯರಾದ ಪಾವನಾ ಗೌಡ ಹಾಗೂ ಲೇಖಾಚಂದ್ರ ಪೈಪೋಟಿಗೆ ಬಿದ್ದವರಂತೆ ನಟಿಸಿದ್ದಾರೆ. ಸುಮಾರು ವರ್ಷಗಳ ನಂತರ ನಟಿ ನಿರೋಷ ಅವರು ಈ ಚಿತ್ರದಲ್ಲಿ ನಾಯಕನ ತಾಯಿಯಾಗಿ ಅಭಿನಯಿಸಿದ್ದಾರೆ. ನಿರ್ಮಾಪಕ ಸೋಮಶೇಖರ್ ಅವರು ಈ ಹಿಂದೆ ಲವ್ ಈಸ್ ಫಾಯ್ಸನ್ ಎಂಬ ಚಿತ್ರವನ್ನು ನಿರ್ಮಿಸಿದ್ದರು, ಇದು ಅವರ ಬ್ಯಾನರ್‌ನಿಂದ ಹೊರಬರುತ್ತಿರುವ 2ನೇ ಚಿತ್ರ. ಚಿತ್ರದಲ್ಲಿ ತಂದೆ-ತಾಯಿ ಹಾಗೂ ಮಗನ ಬಾಂಧವ್ಯದ ಸನ್ನಿವೇಶಗಳು ಎಲ್ಲರ ಮನಮುಟ್ಟಲಿದೆ. ಜೊತೆಗೆ ಥ್ರಿಲ್ಲರ್ ಅಂಶಗಳು ಪ್ರೇಕ್ಷಕರನ್ನು ಹಿಡಿದಿಡುತ್ತವೆ. ನಿರ್ದೇಶಕರು ನನ್ನನ್ನು ಹಿಂದಿನ ಚಿತ್ರಗಳಿಗಿಂತ ತುಂಬಾನೇ ಸ್ಟೈಲಿಷ್ ಆಗಿ ತೋರಿಸಿದ್ದಾರೆ. ನಿರ್ಮಾಪಕರು ಯಾವುದಕ್ಕೂ ಕೊರತೆಯಾಗದ ಹಾಗೆ ನಿರ್ಮಾಣ ಮಾಡಿದ್ದಾರೆ. ಈ ಚಿತ್ರದಲ್ಲಿ ಸಮಾಜದ ವ್ಯವಸ್ಥೆಯ ವಿರುದ್ಧ ಹೋರಾಡುವ ಫೈಟರ್ ಆಗಿ ಕಾಣಿಸಿಕೊಂಡಿದ್ದೇನೆ ಎಂದು ವಿನೋದ್ ಪ್ರಭಾಕರ್ ಹೇಳಿದ್ದಾರೆ. ಥ್ರಿಲ್ಲರ್ ಮಂಜು, ವಿನೋದ್ ಹಾಗೂ ಕೆ.ಗಣೇಶ್ ಅವರು ವಿಶೇಷ ಸಾಹಸ ದೃಶ್ಯಗಳನ್ನು ಕಂಪೋಜ್ ಮಾಡಿದ್ದಾರೆ.



ಭೂಗತ ಲೋಕದಲ್ಲಿ ಗನ್ಸ್ ಅಂಡ್ ರೋಸಸ್

ಕಥೆಗಾರ ಅಜಯ್‌ಕುಮಾರ್ ಪುತ್ರ ಅರ್ಜುನ್ ಈಗ ನಾಯಕನಾಗುತ್ತಿದ್ದಾನೆ. ಸುಮಾರು ವರ್ಷಗಳಿಂದ ಯಶಸ್ವೀ ಚಿತ್ರಗಳಿಗೆ ಕಥೆ ಬರೆದಿರುವ ಅಜಯ್‌ಕುಮಾರ್ ತಮ್ಮ ಪುತ್ರನನ್ನು "ಗನ್ಸ್ ಅಂಡ್ ರೋಸಸ್" ಚಿತ್ರದ ಮೂಲಕ ನಾಯಕನಾಗಿ ಪರಿಚಯಿಸುತ್ತಿದ್ದಾರೆ. ಶ್ರೀನಿವಾಸಕುಮಾರ್ ಆಕ್ಷನ್ ಕಟ್ ಹೇಳುತ್ತಿರುವ ಈ ಚಿತ್ರದ ಮುಹೂರ್ತ ಬಂಡೆ ಮಹಾಕಾಳಿ ದೇವಸ್ಥಾನದಲ್ಲಿ ನೆರವೇರಿತು. ಮೂಲತ: ಬಿಲ್ಡರ್ ಆದ ನಿರ್ಮಾಪಕ ಹೆಚ್.ಆರ್.ನಟರಾಜ್ ಮಾತನಾಡುತ್ತಾ, ಶ್ರೀನಿವಾಸಮೂರ್ತಿ ನನ್ನ ಸ್ನೇಹಿತರು. ಒಮ್ಮೆ ಅವರು ಈ ಕಥೆಯನ್ನು ನನಗೆ ಹೇಳಿದರು. ಕಂಟೆಂಟ್ ಇಷ್ಟವಾಗಿ ನಿರ್ಮಾಣಕ್ಕೆ ಮುಂದಾದೆ. ಅಂದುಕೊಂಡಂತೆ ಆದರೆ, ಈ ವರ್ಷದ ಕೊನೆಯಲ್ಲಿ ಚಿತ್ರವನ್ನು ರಿಲೀಸ್ ಮಾಡುವ ಯೋಚನೆಯಿದೆ ಎಂದರು.

ಕೆಲ ವರ್ಷಗಳ ಕಾಲ ಸಹನಿರ್ದೇಶಕನಾಗಿ ಕೆಲಸ ಮಾಡಿ ಅನುಭವ ಪಡೆದುಕೊಂಡ ನಂತರ, ಒಂದೊಳ್ಳೆ ಕಥೆ ಇಟ್ಟುಕೊಂಡು ನಿರ್ದೇಶನಕ್ಕೆ ಕೈಹಾಕಿರುವ ಶ್ರೀನಿವಾಸ್‌ಕುಮಾರ್ ಮಾತನಾಡುತ್ತಾ, ನನ್ನ ನಿರ್ದೇಶನದ ಮೊದಲ ಚಿತ್ರದಲ್ಲಿ ಅರ್ಜುನ್ ನಾಯಕನಾಗಿ ಪರಿಚಯವಾಗುತ್ತಿದ್ದಾರೆ, ಯಶ್ವಿಕ ನಿಷ್ಕಲ ನಾಯಕಿಯಾಗಿ ನಟಿಸುತ್ತಿದ್ದಾರೆ, ಕಥೆ ತುಂಬಾ ಇಂಟರೆಸ್ಟಿಂಗ್ ಆಗಿದೆ. ಶಶಿಕುಮಾರ್ ಅವರ ಸಂಗೀತ ಸಂಯೋಜನೆ, ಜನಾರ್ಧನ್ ಅವರ ಛಾಯಾಗ್ರಹಣ, ಸಂಜೀವ್‌ರೆಡ್ಡಿ ಅವರ ಸಂಕಲನ ಹಾಗೂ ಥ್ರಿಲ್ಲರ್ ಮಂಜು ಅವರ ಸಾಹಸ ನಿರ್ದೇಶನ ನಮ್ಮ ಚಿತ್ರಕ್ಕಿದ್ದು, ಕಥೆ, ಚಿತ್ರಕಥೆ ಹಾಗೂ ಸಂಭಾಷಣೆಯನ್ನು ಶರತ್ ಬರೆದಿದ್ದಾರೆ ಎಂದು ನಿರ್ದೇಶಕರು ತಿಳಿಸಿದರು. ಈ ಚಿತ್ರದ ಮೂಲಕ ನಾನು ನಾಯಕನಾಗಿ ಚಿತ್ರರಂಗ ಪ್ರವೇಶಿಸುತ್ತಿದ್ದೇನೆ. ಕಥೆ ಹಾಗೂ ನನ್ನ ಪಾತ್ರ ಚೆನ್ನಾಗಿದೆ ಎಂದು ನಾಯಕ ಅರ್ಜುನ್ ಹೇಳಿದರು. ನಾಯಕಿ ಯಶ್ವಿಕ ನಿಷ್ಕಲ ತನ್ನ ಪಾತ್ರ ಕುರಿತಂತೆ ಸಂಕ್ಷಿಪ್ತವಾಗಿ ಮಾತನಾಡಿದರು. 'ಗನ್ಸ್ ಅಂಡ್ ರೋಸಸ್' ಚಿತ್ರದಲ್ಲಿ ಅಂಡರ್‌ವರ್ಲ್ಡ್ ಹಾಗೂ ಪ್ರೇಮಕಥೆ ಎರಡನ್ನು ಬೆಂಡ್ ಮಾಡಿ ಸ್ಕ್ರಿಪ್ಟ್ ಮಾಡಿದ್ದೇವೆ ಎಂದು ಕಥೆಗಾರ ಶರತ್ ಹೇಳಿದರು.

ಅಜಯ್‌ಕುಮಾರ್ ಮಾತನಾಡುತ್ತಾ, ಈ ಚಿತ್ರದ ಮೂಲಕ ನನ್ನ ಮಗ ನಾಯಕನಾಗುತ್ತಿದ್ದಾನೆ. ಸಾಕಷ್ಟು ವರ್ಷಗಳಿಂದ ನನಗೆ ನೀವೆಲ್ಲ ಪ್ರೋತ್ಸಾಹ ನೀಡಿದ್ದೀರಿ. ನನ್ನ ಮಗನನ್ನೂ ಅದೇ ರೀತಿ ಬೆಳಸಿ ಎಂದು ಹೇಳಿಕೊಂಡರು. ಸಾಹಸ ನಿರ್ದೇಶಕ ಥ್ರಿಲ್ಲರ್ ಮಂಜು, ಸಂಗೀತ ನಿರ್ದೇಶಕ ಶಶಿಕುಮಾರ್, ಛಾಯಾಗ್ರಹಕ ಜನಾರ್ದನ್ ಮಾತ್ತು ನಟರಾದ ಜೀವನ್ ರಿಚಿ ಹಾಗೂ ಹರೀಶ್ ಚಿತ್ರ ಕುರಿತಂತೆ ಮಾತನಾಡಿದರು.

ಕೋರ್ಟ್‌ನಲ್ಲೇ ನಡೆಯುವ ಕಥೆ 'ಯಥಾಭವ'!


ಕೋರ್ಟ್ ಹಾಲ್‌ನಲ್ಲಿ ನಡೆಯುವ ಥ್ರಿಲ್ಲರ್ ಜಾನರ್ ಕಥಾಹಂದರ ಹೊಂದಿರುವ ಚಿತ್ರ 'ಯಥಾಭವ'. ಗೌತಮ್ ಬಸವರಾಜು ಅವರ ನಿರ್ಮಾಣ ಹಾಗೂ ನಿರ್ದೇಶನವಿರೋ ಈ ಚಿತ್ರದ ಟೀಸರ್ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು. ಈ ಸಂದರ್ಭದಲ್ಲಿ ನಿರ್ದೇಶಕ ಗೌತಮ್ ಬಸವರಾಜು ಮಾತನಾಡಿ, ಕಳೆದ ವರ್ಷ ಹೈದರಾಬಾದ್‌ನಲ್ಲಿ ರೆಡಿಮಾಡಿಕೊಂಡಿದ್ದ ಕಥೆಯಿದು, ಇಪ್ಪತ್ತೊಂದು ದಿನಗಳಲ್ಲಿ ಚಿತ್ರದ ಚಿತ್ರೀಕರಣ ಪೂರ್ಣಗೊಳಿಸಿದ್ದೇವೆ. 'ಯಥಾಭವ' ಚಿತ್ರದ ವಿಶೇಷ ಏನೆಂದರೆ ಶೇಕಡಾ 70ರಷ್ಟು ಭಾಗದ ಕಥೆ ಕೋರ್ಟ್‌ನಲ್ಲೇ ನಡೆಯುತ್ತದೆ. ನ್ಯಾಯಾಧೀಶರಾಗಿ ಹಿರಿಯ ನಟ ದತ್ತಣ್ಣ ಅಭಿನಯಿಸಿದ್ದು, ಗೋಪಾಲಕೃಷ್ಣ ದೇಶಪಾಂಡೆ ವಕೀಲರಾಗಿ ಹಾಗೂ ಬಲ ರಾಜವಾಡಿ ಗೃಹಮಂತ್ರಿಗಳಾಗಿ ಕಾಣಿಸಿಕೊಂಡಿದ್ದಾರೆ. ಪವನ್‌ಶಂಕರ್ ಹಾಗೂ ಸಹನ ಸುಧಾಕರ ನಾಯಕ, ನಾಯಕಿಯಾಗಿ ನಟಿಸಿದ್ದು, ರಾಕ್‌ಲೈನ್ ಸುಧಾಕರ್ ಪುತ್ರ ಗೌತಮ್ ಸುಧಾಕರ್ ಮತ್ತೊಂದು ಪ್ರಮುಖ ಪಾತ್ರದಲ್ಲಿದ್ದಾರೆ. ಚಿತ್ರದಲ್ಲಿ ನಾಲ್ಕು ಹಾಡುಗಳಿದ್ದು, ಟೀಸರ್ ಕೂಡ ನೋಡಿದವರ ಮನ ಸೂರೆಗೊಳ್ಳುತ್ತಿದೆ. ಹೈದರಾಬಾದ್ ಹಾಗೂ ಮುಂಬೈನಲ್ಲಿ ಚಿತ್ರದ ಪೋಸ್ಟ್ ಪ್ರೊಡಕ್ಷನ್ ವರ್ಕ್ ನಡೆಯುತ್ತಿದೆ. ಸದ್ಯದಲ್ಲೇ ಚಿತ್ರ ಬಿಡುಗಡೆಯಾಗಲಿದೆ ಎಂದು ತಿಳಿಸಿದರು. ಕನ್ನಡದಲ್ಲೀಗ ಸಾಕಷ್ಟು ಹೊಸ ಪ್ರತಿಭೆಗಳ ಅನಾವರಣವಾಗುತ್ತಿದೆ. ಹೊಸ ಚಿತ್ರಗಳು ಗೆಲ್ಲುತ್ತಿವೆ. ಈ ಚಿತ್ರದಲ್ಲಿ ನಾನು ನ್ಯಾಯಾಧೀಶನಾಗಿ ಕಾಣಿಸಿಕೊಂಡಿದ್ದೇನೆ ಎಂದು ಹಿರಿಯನಟ ದತ್ತಣ್ಣ ತಿಳಿಸಿದರು. ನಟ ಬಲ ರಾಜವಾಡಿ ಅವರು ಗೃಹ ಸಚಿವ ಹಾಗೂ ನಾಯಕಿಯ ತಂದೆಯಾಗಿ ಕಾಣಿಸಿಕೊಂಡಿದ್ದಾರೆ. ಇದು ನನ್ನ ಮೊದಲ ಚಿತ್ರ, ಒಳೆಯ ಪಾತ್ರ ಸಿಕ್ಕಿದೆ ಎಂದು ನಾಯಕ ಪವನ್ ಶಂಕರ್ ಹೇಳಿದರು. ನಾಯಕಿ ಸಹನ ಸುಧಾಕರ್ ಮಾತನಾಡಿ, ಚಿತ್ರದಲ್ಲಿ ನಾನೊಬ್ಬ ಪತ್ರಕರ್ತೆಯಾಗಿ ಕಾಣಿಸಿಕೊಂಡಿದ್ದೇನೆ ಎಂದು ತಿಳಿಸಿದರು. ಕಲಾವಿದರಾದ ಗೌತಂ ಸುಧಾಕರ್, ನೀನಾಸಂ ಆನಂದ್, ಮಹೇಶ್ ಕಲಿ, ಯಶಸ್ವಿನಿ ರವೀಂದ್ರ, ಮಾಸ್ಟರ್ ಶಮಂತ್ ಮುಂತಾದವರು ತಮ್ಮ ಪಾತ್ರಗಳ ಕುರಿತಂತೆ ಮಾತನಾಡಿದರು.

ಬಾಲಿವುಡ್‌ನತ್ತ ಶಿವರಾಜ್‌ಕುಮಾರ್

ಸೂಪರ್‌ಸ್ಟಾರ್ ರಜನಿಕಾಂತ್ ಜೊತೆ ಶಿವರಾಜ್‌ಕುಮಾರ್ ಅಭಿನಯಿಸಿದ ಜೈಲರ್ ಸಿನಿಮಾ ಯಶಸ್ವೀ ಪ್ರದರ್ಶನ ಕಾಣುತ್ತಿರುವಾಗಲೇ, ಶಿವಣ್ಣ ಅವರಿಗೆ ಬೇರೆ ಬೇರೆ ಭಾಷೆಗಳಿಂದ ಸಾಕಷ್ಟು ಆಫರ್‌ಗಳು ಬರುತ್ತಿವೆ, ಈಗಾಗಲೇ ಶಿವರಾಜ್‌ಕುಮಾರ್ ತಮಿಳಿನ ಧನುಷ್ ಜೊತೆ ನಟಿಸಿರುವ 'ಕ್ಯಾಪ್ಟನ್ ಮಿಲ್ಲರ್' ರಿಲೀಸಿಗೆ ರೆಡಿಯಾಗಿದ್ದು, ಸದ್ಯದಲ್ಲೇ ತೆರೆಕಾಣಲಿದೆ. ಇದರ ಬೆನ್ನಲ್ಲೇ ಈಗ ಬಾಲಿವುಡ್ ನಿರ್ದೇಶಕರೊಬ್ಬರು ಶಿವಣ್ಣ ಅವರನ್ನು ಸಂಪರ್ಕಿಸಿ ಕಥೆ ಒಪ್ಪಿಸಿದ್ದಾರೆ. ಕಥೆ ಕೇಳಿ ಇಂಪ್ರೆಸ್ ಆಗಿರುವ ಶಿವಣ್ಣ ಆ ಸಿನಿಮಾದಲ್ಲಿ ಅಭಿನಯಿಸಲು ಆಸಕ್ತಿ ತೋರಿದ್ದು, ಎಲ್ಲಾ ಫೈನಲ್ ಆದರೆ ಸದ್ಯದಲ್ಲೇ ಆ ಚಿತ್ರಕ್ಕೆ ಚಾಲನೆಯೂ ದೊರಕಲಿದೆ.

ಹಾಗಾದರೆ ಶಿವಣ್ಣ ಒಂದೇ ಮಾತಿಗೆ ಒಪ್ಪುವಂತೆ ಮಾಡಿದ ಆ ನಿರ್ದೇಶಕ ಯಾರು ಗೊತ್ತೇ? ಅದಾಶರ್ಮಾ ನಟಿಸಿದ 'ದಿ ಕೇರಳ ಸ್ಟೋರಿ' ದೇಶಾದ್ಯಂತ ಯಶಸ್ವಿ ಪ್ರದರ್ಶನ ಕಂಡಿತ್ತು. ಆ ಚಿತ್ರದ ನಿರ್ದೇಶಕ ಸುದೀಪ್ತೋಸೇನ್ ಅವರೇ ಶಿವರಾಜಕುಮಾರ್ ಅವರಿಗೆ ಕಥೆ ಹೇಳಿ ಒಪ್ಪಿಸಿದವರು. ಇದಲ್ಲದೆ ಶ್ರೀನಿ ನಿರ್ದೇಶನದ 'ಘೋಸ್ಟ್' ಸಿನಿಮಾ ಅ.19ರಂದು ತೆರೆಕಾಣಲಿದೆ. ಇದರೊಂದಿಗೆ, ಯೋಗರಾಜ ಭಟ್ಟರ 'ಕರಟಕ ದಮನಕ', 45, ಮತ್ತು 'ಭೈರತಿ ರಣಗಲ್' ಸೇರಿದಂತೆ ಸಾಲು ಸಾಲು ಸಿನಿಮಾಗಳು ಶಿವಣ್ಣ ಅವರ ಬತ್ತಳಿಕೆಯಲ್ಲಿವೆ.

ಸಿನಿಪದಬಂಧ-489



ಹೆಸರು ________

ವಿಳಾಸ ________

ದೂರವಾಣಿ ಸಂಖ್ಯೆ ________

ವಿಜೇತರು: ಕೆ.ಎನ್.ಅಶ್ವತ್ಥ್‌ನಾರಾಯಣ, ನಂ. 332, 9ನೇ ಕ್ರಾಸ್, ಮಾಧವ ಪಾರ್ಕ್ ಹತ್ತಿರ, ಇಎಫ್ ಬ್ಲಾಕ್, ರಾಮಕೃಷ್ಣನಗರ, ಮೈಸೂರು-570022

ಎಡದಿಂದ ಬಲಕ್ಕೆ

1.	ಯಾರಿಗೂ ಗೊತ್ತಿಲ್ಲದಂತೆ ಇರುವಿಕೆ	5
3.	ರೆಬೆಲ್ ಸ್ಟಾರ್ ಅಂಬರೀಷ್ "ಪ್ರಾಧ್ಯಾಪಕ"	4
5.	ಫಲ ನೀಡಿದ 'ಕುಂಡಲಿ'	3
6.	ರಮೇಶ್ ತಿಂಗಳು ಸ್ವೀಟಾಗಿದೆ	4
8.	ರಘುವೀರ್ ತಾರಾಪತ್ನಿ	2
9.	ಅಣ್ಣಯ್ಯ ಚಿತ್ರದ ನಾಯಕಿ	4
11.	ಗುಳಿ ಕೆನ್ನೆಯವಳೇ ನಿನ್ನನ್ನು ಪ್ರೀತಿಸುತ್ತೇನೆ	5
13.	ಆಪ್ತಮಿತ್ರ ಚಿತ್ರದಲ್ಲಿ ಇದೊಂದು ಪಾತ್ರವಿದೆ	4
15.	ದೇವರು ಕೊಟ್ಟ "ಅನುಗ್ರಹ"	2
16.	ತ್ರೇತಾಯುಗದವರು ಉಪ್ಪಿ, ಶಿವಣ್ಣ ಅಭಿನಯದಲ್ಲಿ ಪ್ರತ್ಯಕ್ಷ !	4
18.	ಸಂಪತ್ತಿಗೆ ಸವಾಲ್ ಹಾಕಿದಾತನ ಅತ್ತಿಗೆ ಚಿನ್ನದಂತಹವಳು	3
19.	ಅನಂತ್ ನಾಗ್ ನೇಯ್ದ ಪ್ರೀತಿಯ ಬಲೆ	4
20.	ಹ್ಯಾಟ್ರಿಕ್ ಹೀರೋ ಏಳನೇಯ ದಿನ ಎಳೆದ ತೇರು	5



ಉಮ್ಮತ್ತೂರು ಇಂದುಶೇಖರ್

ಮೊ.9880820462

ಸಿನಿ ಪದಬಂಧ 488ರ ಉತ್ತರ

ವ	ರ	ಮ	ಹಾ	ಲ	ಕ್ಷ್ಮೀ	■	ಲ	ಕ್ಷ್ಮೀ	ದೇ	ವಿ
ಸು	■	ನೆ	■	ಕು	■	■	ಕ್ಷ್ಮಿ	■	■	ಜ
ಧಾ	■	ಗೆ	■	ಮಿ	■	ಹೊ	ಬಾ	ಳೆ	■	ಯ
■	■	ಬಂ	■	■	■	■	ರ	■	■	ಲ
ಭಾ	ಗ್ಯ	ದ	ಲ	ಕ್ಷ್ಮೀ	ಬಾ	ರ	ಮ್ಮ	■	ಲ	ಕ್ಷ್ಮೀ
ಗ್ಯ	■	ಮ	■	■	■	ಕ್ಷ್ಮಾ	■	ಸೌ	■	■
ದ	■	ಹಾ	■	ಸೋ	■	■	■	ಭಾ	■	ಲ
ಬ	■	ಲ	ಕ್ಷ್ಮೀ	ಬಾ	ರ	ಮ್ಮ	ಭಾ	ಗ್ಯ	ಲ	ಕ್ಷ್ಮೀ
ಳೆ	■	ಕ್ಷ್ಮೀ	■	ನೆ	■	■	■	ಲ	■	ಕ
ಗಾ	■	■	■	ಪ	ದ್ಮಿ	ನಿ	■	ಕ್ಷ್ಮೀ	■	ಟಾ
ರ	ಮ	ಣ	■	ದ	■	■	■	■	ಲ	ಕ್ಷ

ಮೇಲಿನಿಂದ ಕೆಳಕ್ಕೆ

1.	ಶಿವರಂಜನ್ - ಶ್ರುತಿ ಅಭಿನಯಕ್ಕೆ ಎಸ್. ಆರ್. ಭಟ್ ನಿರ್ದೇಶಕ	5
2.	ದಶಾವತಾರಗಳಲ್ಲಿ ಐದನೇಯದು ಇಲ್ಲಿ ಅಸ್ತವ್ಯಸ್ತ	3
3.	ಎಂ.ಆರ್.ವಿಠಲ್ ನಿರ್ದೇಶಿಸಿ ನರಸಿಂಹರಾಜು ನಿರ್ಮಿಸಿ ಅಭಿನಯಿಸಿರುವ ಚಿತ್ರ	8
4.	ಟೈಗರ್ ಪ್ರಭಾಕರ್ ಯುದ್ಧ ಕೇಸರಿ	5
7.	" ___ ___ __ ಧಾರೆ	8
10.	ವಿಜಯ ಶಾಂತಿ ಹಿಡಿದ "ಅಸ್ತ್ರ"	3
12.	ಡಾ|| ರಾಜ್ ಕುಮಾರ್ ಕೊಡಲಿ ಹಿಡಿದ ಭಾರ್ಗವ	5
14.	ಮದುವೆಯ ಸಮಯದಲ್ಲಿ ನೀಡಿದ ವಚನವೇ ಈ ಚಿತ್ರ	5
17.	ಶಂಕರ್ ನಾಗ್ ಮಾಡಿದ "ಪ್ರತಿಜ್ಞೆ"	3

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಜಲಪಾತದಿಂದ ಹರಿದುಬಂದ ಸುಂದರ ಪರಿಸರ ಗೀತೆ

ಜಲಪಾತ ಹೆಸರೇ ಹೇಳುವ ಹಾಗೆ ಇದೊಂದು ಪರಿಸರ ಜಾಗೃತಿ ಮೂಡಿಸುವ ಕಥೆ ಒಳಗೊಂಡ ಚಿತ್ರ. ಟಿ.ಸಿ. ರವೀಂದ್ರ ತುಂಬರಮನೆ ಅವರ ನಿರ್ಮಾಣ ಹಾಗೂ ರಮೇಶ್ ಬೇಗಾರ್ ನಿರ್ದೇಶನವಿರುವ ಈ ಚಿತ್ರದ ಗೀತೆಯೊಂದರ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು. ಗಾಯಕ ನಗರ ಶ್ರೀನಿವಾಸ ಉಡುಪ ಅವರು ಈ ಹಾಡನ್ನು ಬಿಡುಗಡೆಗೊಳಿಸಿ ಚಿತ್ರತಂಡಕ್ಕೆ ಶುಭ ಕೋರಿದರು. ಎದೆಯ ದನಿಯ ಹಾಡು ಕೇಳು ಎಂಬ ಈ ಪರಿಸರ ಗೀತೆಯನ್ನು ಗಾಯಕ ವಿಜಯ್ ಪ್ರಕಾಶ್ ಅವರು ಹಾಡಿದ್ದಾರೆ. ಗಾಯಕಿಯಾಗಿದ್ದ ಸಾಧ್ವಿನಿ ಕೊಪ್ಪ ಈ ಚಿತ್ರದ ಮೂಲಕ ಸಂಗೀತ ನಿರ್ದೇಶಕಿಯಾಗಿದ್ದಾರೆ.

ಈ ಹಿಂದೆ ವೈಶಂಪಾಯನ ತೀರ ಎಂಬ ಚಿತ್ರವನ್ನು ನಿರ್ದೇಶಿಸಿದ್ದ ರಮೇಶ್ ಬೇಗಾರ್ ಅವರ ನಿರ್ದೇಶನದ ಎರಡನೇ ಚಿತ್ರ ಜಲಪಾತ. ಚಿತ್ರ ಹಾಗೂ ಹಾಡಿನ ಕುರಿತು ಮಾತನಾಡಿದ ರಮೇಶ್ ಬೇಗಾರ್, ಪರಿಸರ ಜಗೃತಿ ಮೂಡಿಸುವ ಹಾಡುಗಳು ಈಗಾಗಲೇ ಸಾಕಷ್ಟು ಬಂದಿದೆ. ಆದರೆ ಈ ಹಾಡು ಅದೆಲ್ಲಕ್ಕಿಂತ ಸ್ವಲ್ಪ ವಿಭಿನ್ನ. ಮೊದಲ ನುಡಿಯಲ್ಲಿ ಪರಿಸರ ನಮಗೆ ಏನೆಲ್ಲಾ ನೀಡಿದೆ ಎಂದಿದ್ದರೆ, ಎರಡನೇ ನುಡಿಯಲ್ಲಿ ನಮ್ಮಿಂದ ಪರಿಸರ ಯಾವ ರೀತಿ ಹಾಳಾಗುತ್ತಿದೆ ಎಂದಿದ್ದು, ವಿಜಯ್ ಪ್ರಕಾಶ್ ಅವರ ಕಂಠದಲ್ಲಿ ಈ ಹಾಡನ್ನು ಕೇಳುವುದೇ ಸೊಗಸು. ಅಷ್ಟೇ ಚೆನ್ನಾಗಿ ಸಾಧ್ವಿನಿ ಅವರು ಸಂಗೀತ ಸಂಯೋಜಿಸಿದ್ದಾರೆ.

ಬೃಹತ್ ಉದ್ಯೋಗ ಮೇಳದ ಮೂಲಕ ಸುನೀಲ್ ಹುಟ್ಟುಹಬ್ಬ ಆಚರಣೆ

ಐದು ಸಾವಿರಕ್ಕೂ ಅಧಿಕ ನಿರುದ್ಯೋಗಿಗಳು ಭಾಗಿ, 1826 ಮಂದಿಗೆ ಸ್ಥಳದಲ್ಲೇ ಉದ್ಯೋಗ



ತಿ.ನರಸೀಪುರ ಪಟ್ಟಣದ ಎಪಿಎಂಸಿ ಆವರಣದಲ್ಲಿ ಕೆಡಿಪಿ ಸದಸ್ಯ ಸುನೀಲ್ ಬೋಸ್ ಹುಟ್ಟುಹಬ್ಬದ ಅಂಗವಾಗಿ ಏರ್ಪಡಿಸಲಾಗಿದ್ದ ಬೃಹತ್ ಉದ್ಯೋಗ ಮೇಳವನ್ನು ಸಚಿವ ಡಾ.ಎಚ್.ಸಿ.ಮಹದೇವಪ್ಪ ಉದ್ಘಾಟಿಸಿದರು.

ತಿ.ನರಸೀಪುರ.ಆ.31– ರಾಜಕೀಯ ಅಧಿಕಾರ ಸಿಗಲಿ, ಸಿಗದಿರಲಿ ಜನಪರ ಕೆಲಸ ಮಾಡುವುದು ಬಹು ಮುಖ್ಯ ಎಂದು ಸಮಾಜ ಕಲ್ಯಾಣ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಅಭಿಪ್ರಾಯ ಪಟ್ಟರು.

ಕಾಂಗ್ರೆಸ್ ಪಕ್ಷದ ಯುವ ಮುಖಂಡ, ಕೆಡಿಪಿ ಸದಸ್ಯ ಸುನೀಲ್ ಬೋಸ್ ಅವರ 41ನೇ ವರ್ಷದ ಹುಟ್ಟುಹಬ್ಬದ ಅಂಗವಾಗಿ ಪಟ್ಟಣದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಆವರಣದಲ್ಲಿ ಆಯೋಜಿಸಲಾಗಿದ್ದ ಬೃಹತ್ ಉದ್ಯೋಗ ಮೇಳದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಒಬ್ಬ ವ್ಯಕ್ತಿಗೆ ಸಮಾಜ ಸೇವೆ ಮಾಡಲು ರಾಜಕೀಯ ಅಧಿಕಾರವೇ ಸಿಗಬೇಕೆಂದಿಲ್ಲ. ಅಧಿಕಾರ ಸಿಗಲಿ, ಸಿಗದಿರಲಿ ಆತ ಜನಪರವಾದ ಕೆಲಸ ಮಾಡುವ ಮನೋಭಾವನೆ ಬೆಳೆಸಿಕೊಂಡಾಗ ಉತ್ತಮ ಫಲಿತಾಂಶ ಕಾಣಲು ಸಾಧ್ಯವಾಗುತ್ತದೆ ಎಂದರು.

ಅವಕಾಶ ದೊರೆತಾಗ ಯುವಕರಿಗೆ–ಜನರಿಗೆ ನೆರವು ನೀಡುವುದು ಸಾರ್ವಜನಿಕ ಜೀವನಕ್ಕೆ ಅತ್ಯಂತ ಯೋಗ್ಯವಾದ ಸಂಗತಿಗಳಾಗಿವೆ, ಇರುವ ತನಕ ಜನಪರವಾದ ಕೆಲಸಕ್ಕೆ ನಮ್ಮನ್ನು ನಾವು ತೊಡಗಿಸಿಕೊಳ್ಳಬೇಕು, ಬಡವರ ಪರ, ರೈತರ, ಮಹಿಳೆಯರ ಅಭಿವೃದ್ಧಿ ಪರವಾದಂತಹ ಕೆಲಸಕ್ಕೆ ಮುಂದಾಗಬೇಕು. ಇದಕ್ಕಾಗಿಯೇ ಸಾರ್ವಜನಿಕ ಕ್ಷೇತ್ರ ಮೀಸಲಾಗಿದೆ ಎಂದು ತಿಳಿಸಿದರು.

ಮೋದಿಗೆ ಕಾಂಗ್ರೆಸ್ ಗ್ಯಾರಂಟಿಯ ಭಯ!

ರಾಜ್ಯ ಸರ್ಕಾರದ ಅತ್ಯಂತ ಮಹತ್ವಾಕಾಂಕ್ಷೆಯ ಯೋಜನೆ ಗೃಹಲಕ್ಷ್ಮಿ ಜಾರಿಗೊಳ್ಳುತ್ತಿದ್ದಂತೆ ಭಯ ಭೀತರಾದ ಪ್ರಧಾನಿ ನರೇಂದ್ರ ಮೋದಿಯವರು ಸಿಲಿಂಡರ್ ಬೆಲೆಯಲ್ಲಿ 200 ರೂ. ಇಳಿಕೆ ಮಾಡಿದ್ದಾರೆ. ಆದರೆ ಔಷಧ, ಗೊಬ್ಬರದ ಮೇಲೆ ಶೇ.18 ರಷ್ಟು ಜಿಎಸ್ಟಿ ಹೆಚ್ಚು ಮಾಡಿದ್ದಾರೆ ಎಂದು ಸಚಿವರು ಲೇವಡಿ ಮಾಡಿದರು.

ನಾನು ಯಾರಿಗೂ ವಿಷ್ ಮಾಡಲ್ಲ!

ಸಾಮಾನ್ಯವಾಗಿ ನಾನು ನನ್ನ ಸಂಸಾರದ ಯಾವುದೇ ಸದಸ್ಯರಿಗೂ ಹುಟ್ಟುಹಬ್ಬದಂದು ವಿಷ್ ಮಾಡುವುದಿಲ್ಲ ಆದರೆ ಇಂದು ಸುನೀಲ್ ಬೋಸ್ ಹುಟ್ಟುಹಬ್ಬ ಉತ್ತಮವಾದ ಪರಿಕಲ್ಪನೆಯೊಂದಿಗೆ ಆಯೋಜನೆಯಾಗಿದೆ. ಹುಟ್ಟುಹಬ್ಬದ ನೆಪದಲ್ಲಿ ಸಾವಿರಾರು ಯುವಕ–ಯುವತಿಯರಿಗೆ ಉದ್ಯೋಗ ದೊರಕಿಸಿಕೊಡುವ ಉದ್ಯೋಗ ಮೇಳದ ಆಯೋಜನೆ ಖುಷಿ ತಂದಿದೆ. ನಿರುದ್ಯೋಗಿ ಯುವಕ ಯುವತಿಯರಿಗೆ ಮನೆ ಬಾಗಿಲಿಗೆ ಅವರ ಸಾಮರ್ಥ್ಯಕ್ಕೆ ತಕ್ಕಂತೆ ಉದ್ಯೋಗ ದೊರಕಲಿದೆ. ಹಾಗಾಗಿ ಬಂದಿರುವ ಎಲ್ಲ ಅಭ್ಯರ್ಥಿಗಳಿಗೂ ಕೆಲಸ ಸಿಗಲಿ. ಆ ಮೂಲಕ ಅವರು ಸ್ವತಂತ್ರ ಜೀವನ ಮಾಡುವಂತಹ, ಬದುಕನ್ನು ಕಟ್ಟಿಕೊಳ್ಳುವಂತಹ ಅವಕಾಶ ದೊರಕಲಿ ಎಂದು ಆಶಿಸಿದರು.

ಮಾಜಿ ಶಾಸಕ ಹಾಗೂ ಆಶ್ರಯ ಸಮಿತಿ ಅಧ್ಯಕ್ಷ ಯತೀಂದ್ರ ಸಿದ್ದರಾಮಯ್ಯ ಮಾತನಾಡಿ ಈ ಹಿಂದೆ ಅಧಿಕಾರದಲ್ಲಿದ್ದ ಬಿಜೆಪಿ ಸರ್ಕಾರ ಬಹಳಷ್ಟು ಭರವಸೆ ಕೊಟ್ಟು ಯಾವುದನ್ನೂ ಕಾರ್ಯರೂಪಕ್ಕೆ ತರಲಿಲ್ಲ. 2014 ರಲ್ಲಿ ಮೋದಿಯವರು ಪ್ರತಿ ವರ್ಷ 2 ಕೋಟಿ ಉದ್ಯೋಗ ಸೃಷ್ಟಿ ಮಾಡುತ್ತೇವೆ ಎಂದು ಭರವಸೆ ನೀಡಿದ್ದರು. 5 ವರ್ಷದಲ್ಲಿ 10 ಕೋಟಿ ಉದ್ಯೋಗ ಸೃಷ್ಟಿಯಾಗಬೇಕಿತ್ತು. ಆದರೆ ಮೋದಿ ಸರ್ಕಾರ ಬಂದ ಮೇಲೆ ನಿರುದ್ಯೋಗ ಸಮಸ್ಯೆ ಹೆಚ್ಚಾಯಿತು. ದಶಕದಲ್ಲೇ ಕಂಡಿರದ ಸಮಸ್ಯೆ ಎದುರಾಯಿತು ಎಂದರು.

ಈ ವೇಳೆ ತಾಪಂ ಮಾಜಿ ಅಧ್ಯಕ್ಷ ಎಂ. ಮಲ್ಲಿಕಾರ್ಜುನ ಸ್ವಾಮಿ ತರಲಾಗಿದ್ದ 42 ಕೆ.ಜಿ. ಗಾತ್ರದ ಕೇಕನ್ನು ಬೋಸ್ ಕತ್ತರಿಸುವ ಮೂಲಕ ಹುಟ್ಟುಹಬ್ಬವನ್ನು ಆಚರಿಸಲಾಯಿತು. ಕಾರ್ಯಕ್ರಮದ ಆಯೋಜಕ ತಾಪಂ ಮಾಜಿ ಅಧ್ಯಕ್ಷ, ಮೈಮುಲ್ ನಿರ್ದೇಶಕ ಆರ್.ಚೆಲುವರಾಜು ಕಾರ್ಯಕ್ರಮದಲ್ಲಿ ಸ್ವಾಗತ ಭಾಷಣ ಮಾಡಿದರು. ಶಾಸಕರಾದ ಅನಿಲ್ ಚಿಕ್ಕಮಾದು, ದರ್ಶನ್ ಧ್ರುವನಾರಾಯಣ್, ಚಿತ್ರನಟ ಸಾಧುಕೋಕಿಲ ಮಾತನಾಡಿದರು.

ಕೈಲಾದ ಅಳಿಲು ಸೇವೆ!

ಕ್ಷೇತ್ರದಲ್ಲಿ ನಮ್ಮ ತಂದೆಯವರಿಗೆ ಗೆಲುವು ನೀಡಿ ಮಂತ್ರಿ ಮಾಡಿದ್ದೀರಿ. ನೀವು ನೀಡಿರುವ ಸಹಕಾರಕ್ಕೆ ಪ್ರತಿಯಾಗಿ ನಾವೂ ಸಹ ನಮ್ಮ ಕೈಲಾದ ಅಳಿಲು ಸೇವೆ ಮಾಡುವ ಉದ್ದೇಶದಿಂದ ಉದ್ಯೋಗ ಮೇಳ ಮಾಡಿ ಚಾಮರಾಜನಗರ ಸೇರಿದಂತೆ ನಮ್ಮ ಕ್ಷೇತ್ರದ ನಿರುದ್ಯೋಗಿ ಯುವಕ ಯುವತಿಯರಿಗೆ ಉದ್ಯೋಗ ಕೊಡಿಸುವ ಕೆಲಸ ಮಾಡಿದ್ದೇವೆ. ಹುಟ್ಟುಹಬ್ಬವನ್ನು ಯಾವ ರೀತಿ ಬೇಕಾದರೂ ಆಚರಣೆ ಮಾಡಬಹುದು. ಆದರೆ ಅದು ಜನರಿಗೆ ಸ್ವಲ್ಪ ಮಟ್ಟಿಗೆ ಸಹಾಯವಾಗುವ ರೀತಿಯಲ್ಲಿ ಇರಬೇಕು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಾಗಲೀ, ನಮ್ಮ ತಂದೆಯವರಾಗಲಿ ಹುಟ್ಟುಹಬ್ಬ ಆಚರಣೆ ಮಾಡಿಕೊಳ್ಳುವುದಿಲ್ಲ. ಹುಟ್ಟುಹಬ್ಬದ ಪರಿಕಲ್ಪನೆಯೇ ಅವರಿಗೆ ಒಗ್ಗದು. ಇಂದು ನಡೆದ ಉದ್ಯೋಗ ಮೇಳದಲ್ಲಿ ಸುಮಾರು 5 ಸಾವಿರ ಮಂದಿ ಉದ್ಯೋಗಕ್ಕಾಗಿ ಹೆಸರು ನೊಂದಾಯಿಸಿದ್ದು, ಅವರ ಅರ್ಹತೆಗೆ ತಕ್ಕಂತೆ ಹುದ್ದೆ ಸಿಗಲಿದೆ. ನಾವು ಗೆಲ್ಲಲಿ, ಸೋಲಲಿ ಕ್ಷೇತ್ರದ ಜನತೆ ನಮ್ಮನ್ನು ಮನೆ ಮಕ್ಕಳಂತೆ ನೋಡಿದ್ದಾರೆ. ಮುಂದೆಯೂ ಈ ಬಾಂಧವ್ಯ ಹೀಗೆಯೇ ಮುಂದುವರೆಯಲಿ ಹುಟ್ಟುಹಬ್ಬಕ್ಕೆ ಶುಭಕೋರಿದ ಎಲ್ಲರಿಗೂ ಪ್ರೀತಿ ಪೂರ್ವಕ ಧನ್ಯವಾದಗಳು.

–ಸುನೀಲ್ ಬೋಸ್, ಕಾಂಗ್ರೆಸ್ ಯುವ ಮುಖಂಡ ಹಾಗೂ ಕೆಡಿಪಿ ಸದಸ್ಯ.



ತಿ.ನರಸೀಪುರ ಪಟ್ಟಣದಲ್ಲಿ ನಡೆದ ಉದ್ಯೋಗ ಮೇಳದ ವ್ಯವಸ್ಥಾಪಕ ರುಕ್ಮಾಂಗದ ಅವರನ್ನು ಆಯೋಜಕ ಮೈಮುಲ್ ನಿರ್ದೇಶಕ ಆರ್. ಚೆಲುವರಾಜ್ ಸನ್ಮಾನಿಸಿ ಅಭಿನಂದಿಸಿದರು. ಯಾಚನಹಳ್ಳಿ ಅಶೋಕ್ ಮತ್ತಿತರಿದ್ದಾರೆ.

ಮಾಜಿ ಶಾಸಕಿ ಸುನೀತಾ ವೀರಪ್ಪಗೌಡ, ಪಿ ಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ. ವಜ್ರೇಗೌಡ, ಪುರಸಭಾ ಮಾಜಿ ಅಧ್ಯಕ್ಷ ಮುನಾವರ್ ಪಾಷ, ಡಿ.ಪದ್ಮನಾಭ, ಹಿರಿಯ ಸಹಕಾರಿ ವೈ.ಎನ್.ಶಂಕರೇಗೌಡ, ಜಿ.ಪಂ. ಸದಸ್ಯರಾದ ಸುಧಾ ಮಹದೇವಯ್ಯ, ಎಂ. ಸುಧೀರ್, ಹಿಂದುಳಿದ ವರ್ಗಗಳ ಉಪಾಧ್ಯಕ್ಷ ಹಾಗೂ ಪ್ರಥಮ ದರ್ಜೆ ಗುತ್ತಿಗೆದಾರ ಎ.ಎನ್. ಸ್ವಾಮಿ, ಕಗ್ಗಲಿಪುರ ಕೆ.ಎಂ. ಮಧುಕುಮಾರ್, ಪ್ರೊಫೆಸರ್ ಜ್ಞಾನ ಪ್ರಕಾಶ್, ಆಪ್ತ ಸಹಾಯಕ ಲಕ್ಷ್ಮೀ ನಾರಾಯಣ, ಎಸ್.ಎಲ್.ವಿ ಡೆವಲಪರ್ಸ್ ಶ್ರೀಕಾಂತ್, ರಂಗಸಮುದ್ರ ರಮೇಶ್, ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ, ದಿವಾಕರ್, ಯುವ ಘಟಕದ ಅಧ್ಯಕ್ಷ ಟಿ.ಎಸ್. ಲೋಕೇಶ್, ಯಾಚೇನಹಳ್ಳಿ ಅಶೋಕ, ಕ್ಷೇತ್ರ ಅಧ್ಯಕ್ಷರಾದ ಎಂ.ಡಿ. ಬಸವರಾಜು, ಚನ್ನಕೇಶವ, ಸೋಸಲೆ ಪಿಎಸಿಸಿ ಅಧ್ಯಕ್ಷ ಪರಶಿವಮೂರ್ತಿ, ಅಲ್ಪಸಂಖ್ಯಾತ ವಿಭಾಗದ ಕಾರ್ಯದರ್ಶಿ ಮನ್ಸೂರ್ ಅಲಿ, ಪುರಸಭಾ ಮಾಜಿ ಅಧ್ಯಕ್ಷ ಬಸವಣ್ಣ, ಮಾಜಿ ಅಧ್ಯಕ್ಷ ಮದನ್‌ರಾಜ್, ಗ್ರಾ.ಪಂ ಮಾಜಿ ಅಧ್ಯಕ್ಷ ವಾಟಾಳ್ ನಾಗೇಶ, ನಾಗರಾಜು(ಚೀಕಾ), ಅಕ್ಕೂರು ಗುರುಮೂರ್ತಿ, ಎ.ಜೆ. ವೆಂಕಟೇಶ್, ಹೆಮ್ಮಿಗೆ ಶೇಷಾದ್ರಿ, ಗ್ರಾಪಂ ಸದಸ್ಯ ವಿಜಾಪುರ ಶಿವಶಂಕರ್, ಎಪಿಎಂಸಿ ಮಾಜಿ ಸದಸ್ಯ ಉಕ್ಕಲಗೆರೆ ಬಸವಣ್ಣ, ರಾಜು, ಮುಖಂಡರಾದ ಮಹೇಶ್ ಮತ್ತಿತರರಿದ್ದರು.



ಟಿ.ನರಸೀಪುರ ಪಟ್ಟಣದಲ್ಲಿ ಕೆಡಿಪಿ ಸದಸ್ಯ ಸುನಿಲ್ ಬೋಸ್ ಅವರ ಹುಟ್ಟುಹಬ್ಬದ ಅಂಗವಾಗಿ ಮುಸ್ಲಿಂ ಸಮುದಾಯದ ಅಸ್ಲಾಂ ಪಾಶಾ ತಮ್ಮ ಬೆಂಬಲಿಗರೊಂದಿಗೆ ಬೃಹತ್ ಗಾತ್ರದ ಕೇಕ್ ಅನ್ನು ಕತ್ತರಿಸಿ ಸನ್ಮಾನಿಸಿ ಅಭಿನಂದಿಸಿದರು.

ಯಶಸ್ವಿಯಾದ ಉದ್ಯೋಗ ಮೇಳ

ಕೆಡಿಪಿ ಸದಸ್ಯ ಸುನಿಲ್ ಬೋಸ್ ಅವರ ಹುಟ್ಟುಹಬ್ಬದ ಅಂಗವಾಗಿ ಪ್ರಥಮ ಬಾರಿಗೆ ಮೈಮುಲ್ ನಿರ್ದೇಶಕ ಆರ್.ಚೆಲುವರಾಜ್ ಅವರ ಪ್ರಾಯೋಜಕತ್ವದಲ್ಲಿ ಟಿ.ನರಸೀಪುರ ಪಟ್ಟಣದಲ್ಲಿ ಸಾವಿರಾರು ನಿರುದ್ಯೋಗ ಯುವಕರಿಗೆ ಉದ್ಯೋಗ ನೀಡಲು ಕರೆದಿದ್ದ ಮೇಳದಲ್ಲಿ ನೂರಾರು ಕಂಪನಿಗಳು ಭಾಗವಹಿಸಿದ್ದವು. ಸಾವಿರಾರು ವಿದ್ಯಾರ್ಥಿಗಳು ತಮ್ಮ ವಿವರಗಳೊಂದಿಗೆ ಪಾಲ್ಗೊಂಡಿದ್ದರು. ಉದ್ಯೋಗ ಮೇಳದಲ್ಲಿ 5580 ವಿದ್ಯಾರ್ಥಿಗಳು ಭಾಗವಹಿಸಿ ಅದರಲ್ಲಿ ವಿವಿಧ ಕಂಪನಿಗಳ ಇಂಟರ್ವ್ಯೂ ಮಾಡಿ 1826 ನಿರುದ್ಯೋಗ ವಿದ್ಯಾರ್ಥಿಗಳಿಗೆ ಆಫರ್ ಲೆಟರ್‌ಗಳನ್ನು ನೀಡಿದ್ದಾರೆ ಮತ್ತು ಉಳಿದ ವಿದ್ಯಾರ್ಥಿಗಳನ್ನು ತಮ್ಮ ಕಂಪನಿಗಳಲ್ಲಿ ಇಂಟರ್ವ್ಯೂಗಳಿಗೆ ಕರೆಯುತ್ತೇವೆ ಎಂದು ಹೇಳಿದ್ದಾರೆ. **–ಮೈಮುಲ್ ನಿರ್ದೇಶಕ ಆರ್ ಚೆಲುವರಾಜ್ (ಕೆಆರ್‌ಸಿ)**

ಹಳೆ ವೈಷಮ್ಯ, ಭೂ ವಿವಾದದ ಹಿನ್ನೆಲೆ

ಮಹಿಳೆ ಮೇಲೆ ಗುಂಪಿನಿಂದ ಹಲ್ಲೆ

ಹುಣಸೂರು,ಆ.31– ಹಳೆ ವೈಷಮ್ಯ ಮತ್ತು ಜಮೀನಿನ ವಿಚಾರವಾಗಿ ಗುಂಪೊಂದು ರಿಪೀಸ್ ಪಟ್ಟಿ ಮತ್ತು ಕಲ್ಲುಗಳಿಂದ ಮಹಿಳೆ ಮೇಲೆ ಹಲ್ಲೆ ನಡೆಸಿ ಪರಾರಿಯಾಗಿರುವ ಘಟನೆ ಹೊರವಲಯದ ಹಾಳಗೆರೆಯಲ್ಲಿ ಸಂಭವಿಸಿದೆ.



ಗ್ರಾಮದ ಸುರೇಶ್ ಅವರ ಪತ್ನಿ ನಾಗವೇಣಿ(43) ಹಲ್ಲೆಯಿಂದ ತೀವ್ರವಾಗಿ ಗಾಯಗೊಂಡಿದ್ದು, ಅವರನ್ನು ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ನಾಗಮಣಿ ಅವರ ಸಹೋದರ ನಾಗೇಶ್, ಅವರ ಪತ್ನಿ ಆಶಾ ಹಾಗೂ ಆಶಾ ಅವರ ತಾಯಿ ಕೆಂಪಮ್ಮ, ಇವರ ಮಗ ಪ್ರಸನ್ನ ಮತ್ತು ಸಂತೋಷ ಸೇರಿದಂತೆ ಹತ್ತರಿಂದ ಹನ್ನೆರಡು ಮಂದಿ ಹಲ್ಲೆ ನಡೆಸಿದ್ದಾರೆ ಎನ್ನಲಾಗಿದೆ.

ಮಂಗಳವಾರ ರಾತ್ರಿ 10 ಗಂಟೆ ಸಮಯದಲ್ಲಿ ಎರಡು ಬೈಕ್ ಮತ್ತು ಕಾರಿನಲ್ಲಿ ಮನೆ ಹತ್ತಿರ ಬಂದು ನಮ್ಮನ್ನು ಕೂಗಿದರು. ನನ್ನ ಮಕ್ಕಳು ಹೋಗಿ ಬಾಗಿಲು ತೆಗೆದಾಗ ಅವರನ್ನು ಹೊರಗೆ ಎಳೆದುಕೊಂಡು ಹೋಗಿ ಒಡೆಯಲಾರಂಭಿಸಿದರು. ಗಲಾಟೆ ಕೇಳಿ ನಾನು ಹೊರ ಬಂದಾಗ ತಮ್ಮನ ಹೆಂಡತಿ ಆಶಾ ಮತ್ತು ಅವರ ತಾಯಿ ಕೆಂಪಮ್ಮ ಮತ್ತವರ ಮಗ ಪ್ರಸನ್ನ ಹಾಗೂ ಸಂಶೋಷ ಸೇರಿದಂತೆ ಹತ್ತರಿಂದ ಹನ್ನೆರಡು ಜನರ ಗುಂಪು ನನ್ನನ್ನು ಕೆಳಗೆ ಬೀಳಿಸಿ ರಿಪೀಸ್ ಪಟ್ಟಿ ಮತ್ತು ಕಲ್ಲಿನಿಂದ ಬಲವಾಗಿ ಹಲ್ಲೆ ನಡೆಸಿದರು. ಗಲಾಟೆ ಕೇಳಿ ಅಕ್ಕ ಪಕ್ಕದವರು ಎದ್ದು ಬರುವಷ್ಟರಲ್ಲಿ ಕಾರು ಮತ್ತು ಬೈಕ್‌ಗಳಲ್ಲಿ ಎಲ್ಲರೂ ಪರಾರಿಯಾಗಿದ್ದಾರೆ ಎಂದು ಗಾಯಾಳು ನಾಗಮಣಿ ತಿಳಿಸಿದ್ದಾರೆ. ಹಳೆ ವೈಶಮ್ಯ ಮತ್ತು ಜಮೀನಿನ ವಿಚಾರವಾಗಿ ಈ ಹಲ್ಲೆ ನಡೆಸಲಾಗಿದೆ ಎಂದು ಅವರು ಪೊಲೀಸರಿಗೆ ತಿಳಿಸಿದ್ದಾರೆ. ಇನ್ಸ್‌ಪೆಕ್ಟರ್ ದೇವೇಂದ್ರ ಪಿಎಸ್ಐ ಜಮೀರ್ ಅಹಮದ್, ಸುನೀಲ್ ಕುಮಾರ್ ಹಾಗೂ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಹುಣಸೂರು ಕ್ರೈಸ್ತ ಸಭಾ ಒಕ್ಕೂಟಕ್ಕೆ ಪದಾಧಿಕಾರಿಗಳ ಆಯ್ಕೆ

ಹುಣಸೂರು, ಆ.31– ಹುಣಸೂರು ಕ್ರೈಸ್ತ ಸಭಾ ಪಾಲಕರ ಒಕ್ಕೂಟದ ನೂತನ ಪದಾಧಿಕಾರಿಗಳ ಆಯ್ಕೆಯು, ಹುಣಸೂರು ಪಟ್ಟಣದ ನರಸಿಂಹಸ್ವಾಮಿ ತಿಟ್ಟು ಬಡಾವಣೆಯಲ್ಲಿರುವ ಕಛೇರಿಯಲ್ಲಿ, ಒಕ್ಕೂಟದ ಈ ಹಿಂದಿನ ಸಾಲಿನ ಅಧ್ಯಕ್ಷ ಫಾ. ಗಂಗಾಧರ್ ಅವರ ಅಧ್ಯಕ್ಷತೆಯಲ್ಲಿ ಆಯ್ಕೆ ಮಾಡಲಾಯಿತು.

ಅಧ್ಯಕ್ಷರಾಗಿ ಫಾ.ವೈ.ಕೆ. ಸುರೇಶ್, ಉಪಾಧ್ಯಕ್ಷರಾಗಿ, ಫಾ.ಜಾಯ್, ಕಾರ್ಯದರ್ಶಿಯಾಗಿ ಫಾ. ಹೆಚ್. ರಮೇಶ್, ಸಂಘಟನಾ ಕಾರ್ಯದರ್ಶಿ ಫಾ. ಗಿರೀಶ್, ಖಜಾಂಚಿಯಾಗಿ ಫಾ.ರಿಜು ಜಾರ್ಜ್ ಅವರನ್ನು ಆಯ್ಕೆ ಮಾಡಲಾಗಿದೆ.

ಮೈಸೂರು ರೇಸುಗಳು

1ನೇ ದಿನ ಶುಕ್ರವಾರ 1-9-2023

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ)

I. **ಲಾವಸ ಪ್ಲೇಟ್** ಡಿ2–1400 ಮೀ. ರೇಟೆಡ್ 00 ರಿಂದ 25. ಮ.2.00ಕ್ಕೆ
1. ರಷ್ಯನ್ ರೋಮಾನ್ 2. ಯುನಿಟಿ 3. ಮೇಘ ಸಕ್ಸಸ್

II. **ಬಿ.ಕೆ. ಕೃಷ್ಣದೇವರಾಜೇ ಅರಸ್ ಮೆಮೋರಿಯಲ್ ಟ್ರೋಫಿ**–1200 ಮೀ. ರೇಟೆಡ್ 40 ರಿಂದ 65. ಮ.2.30ಕ್ಕೆ
1. ಸ್ಕೈ ಫೈರ್ 2. ಸೂಪರ್ ರಫೀನ್ 3. ಚೀಸಾಕ್ಸ್

III. **ಸ್ಟಾರ್ ಆಫ್ ಮೈಸೂರ್ ಟ್ರೋಫಿ**–1400 ಮೀ. ರೇಟೆಡ್ 40 ರಿಂದ 65. (ಮೈಸೂರ್ ಬೇಸ್ಡ್ ಹಾರ್ಸ್). ಮ.3.00ಕ್ಕೆ
1 ಲ್ಯಾಂಡ್ ಆಫ್ ಗೋಲ್ಡ್ 2. ಸರ್ ಕಾಲ್‌ಕ್ಯೂಲಸ್ 3 ಕ್ಲಿಟಸ್

IV. **ಹೆಚ್.ಹೆಚ್.ಶ್ರೀ ಜಯಚಾಮರಾಜ ಒಡೆಯರ್ ಮೆಮೋರಿಯಲ್ ಟ್ರೋಫಿ**–1200 ಮೀ. ರೇಟೆಡ್ 80 ಮತ್ತು ಮೇಲ್ವರ್ಗ. ಮ.3.30ಕ್ಕೆ
1. ಪಾಲಿಶೆಡ್ ಗರ್ಲ್ 2. ಸ್ಟಾರ್ ಗ್ಲೋರಿ 3. ಬಹಾನ್ ಸಿನಿ

V. **ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಮೆಮೋರಿಯಲ್ ಮಲ್ಟಿ ಮಿಲಿಯನ್** 1400 ಮೀ. 3 ವರ್ಷ(ಟರ್ಮ್ಸ್). ಸಂ.4.00ಕ್ಕೆ
1. ಟಚ್ ಆಫ್ ಗ್ರೇ 2. ಪ್ರಾಣ 3. ಗಲಾಹ್ಯಾಡ್

VI. **ಲಾವಸ ಪ್ಲೇಟ್** ಡಿ1–1400 ಮೀ. ರೇಟೆಡ್ 00 ರಿಂದ 25. ಸಂ.4.30ಕ್ಕೆ
1 ಪಿಯರ್‌ಲೆಸ್ ಜಾಯ್ 2 ಎಕೋ ಫ್ರೆಂಡ್ಲಿ 3. ಪೆಟ್ಟಿಸ್ ಚಾಯ್ಸ್

VII. **ವರದ ಪ್ಲೇಟ್**– 1100 ಮೀ. ರೇಟೆಡ್ 20 ರಿಂದ 45. (ಮೈಸೂರ್ ಬೇಸ್ಡ್ ಹಾರ್ಸ್) ಸಂ.5.00ಕ್ಕೆ
1. ಪೇಸ್ಟ್ ಆಫ್ ಲೈಟ್ 2. ಒಕ್ರೆ 3. ಯಾಸ್ಮೀನ್ ಫ್ರಮ್ ಯಾರ್ಕ್

ದಿನದ ಅತ್ಯುತ್ತಮ...........................	: **ಲ್ಯಾಂಡ್ ಆಫ್ ಗೋಲ್ಡ್**
ಡಬ್ಬಲ್..	: **ಟಚ್ ಆಫ್ ಗ್ರೇ, ಪೇಸ್ಟ್ ಆಫ್ ಲೈಟ್**
ಜಾಕ್‌ಪಾಟ್.....................................	: 3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್............................	: 4, 5, 6 ಮತ್ತು 7
I ಟ್ರಿಬಲ್..	: 2, 3, ಮತ್ತು 4
II ಟ್ರಿಬಲ್.......................................	: 5, 6 ಮತ್ತು 7
ಎಕ್ಸ್‌ಆಕ್ಟ್......................................	: 1 ರಿಂದ 7

ಟಿಪ್‌ಸ್ಟರ್ ಪಿಜಿಸಿ

ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನಾ ಮಹೋತ್ಸವ

ನಂಜನಗೂಡು, ಆ.31– ನಗರದ ರಾಷ್ಟ್ರಪತಿ ರಸ್ತೆಯಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿಗಳ ಪ್ರತೀಕ ಸನ್ನಿಧಾನದಲ್ಲಿ ಶ್ರೀರಾಘವೇಂದ್ರ ತೀರ್ಥ ಗುರು ಸಾರ್ವ ಭೌಮರ 352ನೇ ವರ್ಷದ ಆರಾಧನಾ ಮಹೋತ್ಸವಕ್ಕೆ ಪೂರ್ವಾರಾಧನೆಯೊಂದಿಗೆ ಗುರುವಾರ ಚಾಲನೆ ದೊರೆಯಿತು.



ರಾಘವೇಂದ್ರ ಸ್ವಾಮಿಗಳ ಮೂಲ ವಿಗ್ರಹ ವಿರುವ ಏಕೈಕ ಮಠ ಎನ್ನುವ ಹೆಗ್ಗಳಿಕೆ ಹೊಂದಿರುವ ನಂಜನಗೂಡಿನಲ್ಲಿ ರಾಯರ ಪಾದ ಪೂಜೆ ನಡೆಸಿದ ಬಳಿಕ ಮಠದ ಒಳಾವರಣದಲ್ಲಿ ರಥೋತ್ಸವ ಜರುಗಿತು. ರಾಯರಿಗೆ ವರ್ಣಾಂಕೃತದೊಂದಿಗೆ ಮುಂಜಾನೆ ಪಂಚಾಮೃತ ಅಭಿಷೇಕ ನಡೆಯಿತು. ನಂತರ ಮಹಾ ಮಂಗಳಾರತಿ ನೆರವೇರಿಸಲಾಯಿತು.

ಮಠದ ಗರ್ಭಗುಡಿ ಸೇರಿದಂತೆ ಒಳಾವರಣ, ಮುಖ್ಯ ಪ್ರಾಂಗಣದಲ್ಲಿ ಮಾಡಿದ್ದ ಬಗೆಬಗೆಯ ಹೂವಿನ ಅಲಂಕಾರ ಭಕ್ತರ ಕಣ್ಮನ ಸೆಳೆಯಿತು. ಬೆಳಗ್ಗೆಯಿಂದ ರಾತ್ರಿವರೆಗೂ ಭಕ್ತರು ಮಠಕ್ಕೆ ಭೇಟಿ ನೀಡಿ ರಾಯರ ದರ್ಶನ ಪಡೆದರು. ಮಧ್ಯಾಹ್ನ ಭಕ್ತರಿಗಾಗಿ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು.

ಮೊದಲ ದಿನ ವಿದುಷಿ ಕೋವಿಲಡಿ ಆರ್. ಕಲಾ ಹಾಗೂ ಅರ್ಚನ ಅವರು ನಡೆಸಿಕೊಟ್ಟ ದಾಸವಾಣಿ ಕಾರ್ಯಕ್ರಮ ಕೇಳುಗರನ್ನು ಮಂತ್ರಮುಗ್ಧಗೊಳಿಸಿತು.

ಆರಾಧನಾ ಮಹೋತ್ಸವ ಮುನ್ನಾ ದಿನವಾದ ಬುಧವಾರ ಧಾನ್ಯಪೂಜೆ, ಗೋಪೂಜೆ ಸಲ್ಲಿಸಿ ಧ್ವಜಾರೋಹಣ ನೆರವೇರಿಸಲಾಗಿತ್ತು. ಗುರುಸಾರ್ವಭೌಮರು ಬೃಂದಾವನ ಪ್ರವೇಶ ಮಾಡಿದ ಅಂಗವಾಗಿ ಶುಕ್ರವಾರ ಮಧ್ಯಾರಾಧನೆ ಹಾಗೂ ಶನಿವಾರ ಉತ್ತರಾಧನೆ ನೆರವೇರಲಿದೆ. ಭಕ್ತರು ಮಠಕ್ಕೆ ಸಾಗರೋಪಾದಿಯಲ್ಲಿ ಆಗಮಿಸಿ ರಾಯರ ಕೃಪೆಗೆ ಪಾತ್ರರಾದರು. ಸೆ.3ರಂದು ಸುಜ್ಞಾನೇಂದ್ರತೀರ್ಥರ ಆರಾಧನೆಯೊಂದಿಗೆ ಮಹೋತ್ಸವ ಸಂಪನ್ನಗೊಳ್ಳಲಿದೆ ಎಂದು ಮಠದ ವ್ಯವಸ್ಥಾಪಕ ಕೆ.ಸುಧಾಕರ್ ತಿಳಿಸಿದರು.

ಮಹಿಳೆಗೆ ಸಂದೇಶ ಕಳುಹಿಸಿದ ಆರೋಪ

ಹೆಚ್.ಡಿ.ಕೋಟೆ ಬಳಿ ಕೊಚ್ಚಿ ಯುವಕನ ಕಗ್ಗೊಲೆ

ನೇರಳೆ ಗ್ರಾಮದಲ್ಲಿ ಉದ್ವಿಗ್ನ ಪರಿಸ್ಥಿತಿ, ಪೊಲೀಸರು ಮೊಕ್ಕಾಂ

ಹೆಚ್.ಡಿ. ಕೋಟೆ, ಆ.31– ಮಹಿಳೆಯೊಬ್ಬರಿಗೆ ಮೊಬೈಲ್‌ನಲ್ಲಿ ಸಂದೇಶ ಕಳುಹಿಸಿದ ಆರೋಪದ ಮೇರೆ ಯುವಕನೋರ್ವನನ್ನು ಮಚ್ಚಿನಿಂದ ಕೊಚ್ಚಿ ಬರ್ಬರವಾಗಿ ಕೊಲೆ ಮಾಡಿರುವ ಘಟನೆ ತಾಲೂಕಿನ ನೇರಳೆ ಗ್ರಾಮದಲ್ಲಿ ಸಂಭವಿಸಿದೆ.





ಕೊಲೆಯಾದ ಜಾಗದಲ್ಲಿ ಜಮಾವಣೆಗೊಂಡಿರುವ ನೇರಳೆ ಗ್ರಾಮಸ್ಥರು.

ನೇರಳೆ ಗ್ರಾಮದ ನಿವಾಸಿ ಪುಟ್ಟಸ್ವಾಮಿ ಅವರ ಪುತ್ರ ಭಾನುಪ್ರಕಾಶ್ ಅಲಿಯಾಸ್ ಸಿದ್ದು(23) ಕೊಲೆಯಾದ ದುರ್ದೈವಿ.

ಭಾನುಪ್ರಕಾಶ್ ಟ್ರಾಕ್ಟರ್ ಚಾಲಕನಾಗಿ ಕೆಲಸ ನಿರ್ವಹಿಸುತ್ತಿದ್ದು, ಅದೇ ಗ್ರಾಮದ ಮಹಿಳೆಯೊಬ್ಬಳಿಗೆ ಮೊಬೈಲ್‌ನಲ್ಲಿ ಸಂದೇಶ ಕಳುಹಿಸಿದ್ದನೆನ್ನಲಾಗಿದೆ. ಈ ವಿಚಾರವಾಗಿ, ನೇರಳೆ ಗ್ರಾಮದಲ್ಲಿ ದೊಡ್ಡ ಗಲಾಟೆಯಾಗಿತ್ತು. ಆಗ ಗ್ರಾಮದ ಪ್ರಮುಖರ ಸಮ್ಮುಖದಲ್ಲಿ ಪಂಚಾಯಿತಿ ನಡೆಸಿ ಈ ವಿಚಾರ ಕುರಿತು ಎರಡು ಕುಟುಂಬದವರನ್ನು ಮಾತನಾಡಿಸಿ, ರಾಜಿ ಪಂಚಾಯಿತಿ ಮಾಡಲಾಗಿತ್ತು ಎಂದು ತಿಳಿದು ಬಂದಿದೆ.

ಗುರುವಾರ ಬೆಳಗಿನ ಜಾವ ಕಬಿನಿ ಎಡದಂಡೆ ನಾಲೆಯ ರಸ್ತೆಯ ಬಳಿ, ಯುವಕನ ಮೃತದೇಹ ಬಿದ್ದಿರುವುದನ್ನು ಕಂಡು ಸಾರ್ವಜನಿಕರು ತಕ್ಷಣ ಪೊಲೀಸ್ ಠಾಣೆಗೆ ವಿಚಾರ ತಿಳಿಸಿದ್ದಾರೆ. ಸ್ಥಳಕ್ಕೆ ಅಂತರಸಂತೆ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದ ಸಂದರ್ಭದಲ್ಲಿ ಕೊಲೆಯಾಗಿರುವುದು ನೇರಳೆ ಗ್ರಾಮದ ಭಾನುಪ್ರಕಾಶ್ ಅಲಿಯಾಸ್ ಸಿದ್ದು ಎಂದು ತಿಳಿದು ಬಂದು ಮಚ್ಚಿನಿಂದ ಹೊಡೆದು ಸಾಯಿಸಿದ್ದಾರೆ. ತಕ್ಷಣ ಕಾರ್ಯ ಪ್ರವೃತ್ತರಾದ ಪೊಲೀಸರು ಘಟನೆಗೆ ಸಂಬಂಧಿಸಿ ಕೆಲವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದು, ಕೆಲವರನ್ನು ಬಂಧಿಸಿದ್ದಾರೆ ಎಂದು ತಿಳಿದು ಬಂದಿದೆ. ವಿಷಯ ತಿಳಿದ ಗ್ರಾಮಸ್ಥರು ಘಟನಾ ಸ್ಥಳಕ್ಕೆ ಗುಂಪು ಗುಂಪಾಗಿ ಆಗಮಿಸಿ ಜಮಾಯಿಸಿದ್ದರಿಂದ ಪರಿಸ್ಥಿತಿ ಉದ್ವಿಗ್ನಗೊಂಡಿತ್ತು.

ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ನಂದಿನಿ, ಹುಣಸೂರು ಉಪ ಪೊಲೀಸ್ ವರಿಷ್ಠಾಧಿಕಾರಿ ಮಹೇಶ್, ಇನ್ಸ್‌ಪೆಕ್ಟರ್ ಲಕ್ಷ್ಮೀ, ಸಬ್‌ಇನ್ಸ್‌ಪೆಕ್ಟರ್ ರವಿಶಂಕರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮೃತದೇಹವನ್ನು ಮೈಸೂರಿನ ಕೆ.ಆರ್. ಆಸ್ಪತ್ರೆ ಶವಗಾರಕ್ಕೆ ಕೊಂಡೊಯ್ದು ಮರಣೋತ್ತರ ಪರೀಕ್ಷೆ ನಡೆಸಿದ ನಂತರ ವಾರಸುದಾರರಿಗೆ ಒಪ್ಪಿಸಲಾಯಿತು.

ಘಟನೆಯಿಂದ ಗ್ರಾಮದಲ್ಲಿ ಬಿಗುವಿನ ವಾತಾವರಣವಿದ್ದು ಸ್ಥಳದಲ್ಲಿ ಪೊಲೀಸರು ಮೊಕ್ಕಾಂ ಹೂಡಿದ್ದಾರೆ.



ಬೆಟ್ಟದಪುರ ವ್ಯಾಪ್ತಿಯಲ್ಲಿ ಗುಡುಗು–ಸಿಡಿಲು ಸಹಿತ ಭಾರೀ ಮಳೆ ಸುರಿದಿದ್ದು, ಇದರಿಂದ ಕಳೆದ ಒಂದು ತಿಂಗಳಿಂದ ಮಳೆ ಇಲ್ಲದೆ ಆಕಾಶ ನೋಡುತ್ತಾ ಕುಳಿತ್ತಿದ್ದ ರೈತರು ಸಂತಸಗೊಂಡಿದ್ದಾರೆ.

ಪುಟ್ಟರಾಜು ನಿಧನ

ಹಿರೀಕ್ಯಾತನಹಳ್ಳಿ, ಆ.31– ಹುಣಸೂರು ತಾಲೂಕಿನ ಶೀರೇನಹಳ್ಳಿ ಗ್ರಾಮದ ಪುಟ್ಟರಾಜು (55) ಅನಾರೋಗ್ಯದಿಂದ ಗುರುವಾರ ಬೆಳಗಿನ ಜಾವ ನಿಧನರಾದರು.



ಇವರ ಅಂತ್ಯಕ್ರಿಯೆ ಗುರುವಾರ ಮಧ್ಯಾಹ್ನ 1 ಗಂಟೆಗೆ ಅವರ ತೋಟದಲ್ಲಿ ನಡೆಯಿತು.

ಮೃತರು ಗ್ರಾಮ ಪಂಚಾಯಿತಿ ಮಾಜಿ ಉಪಾಧ್ಯಕ್ಷೆ ಪತ್ನಿ ರತ್ನಮ್ಮ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಬೆದುರುಲಂಕ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಜೈಲರ್(ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಡ್ರೀಮ್ ಗರ್ಲ್–2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಬೇಬಿ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಜೈಲರ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಕಿಂಗ್ ಆಫ್ ಕೋತ (ತ)	4 ಪ್ರದರ್ಶನಗಳು
ಸಂಗಂ	
ಟೋಬಿ (ಕ)	4 ಪ್ರದರ್ಶನಗಳು
ಲಿಡೋ	
ಕೌಸಲ್ಯ ಸುಪ್ರಜಾ ರಾಮ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಗಾಂಡೀವಧಾರಿ ಅರ್ಜುನ (ತೆ)	4 ಪ್ರದರ್ಶನಗಳು
ಪ್ರಭಾ	
ನಮೋ ಭೂತಾತ್ಮ–2 (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕೌಸಲ್ಯ ಸುಪ್ರಜಾ ರಾಮ (ಕ): ಬೆ.10ಕ್ಕೆ, ಜೈಲರ್ (ತ): ಮ.12.50ಕ್ಕೆ, ಸಂ.4ಕ್ಕೆ, ರಾ.7.10ಕ್ಕೆ, ಕಿಂಗ್ ಆಫ್ ಕೋಥಾ (ಮ): ರಾ.10.25ಕ್ಕೆ.
ಸ್ಕ್ರೀನ್ 2	ರಾಖಿ ಔರ್ ರಾಣಿ ಕೀ ಪ್ರೇಮ್ ಕಹಾನಿ (ಹಿಂ): ಬೆ.9.50ಕ್ಕೆ, ಜೈಲರ್ (ಕ): ಮ.1ಕ್ಕೆ, ಗದರ್ 2 (ಹಿಂ): ಸಂ.4.10ಕ್ಕೆ, ಡ್ರೀಂ ಗರ್ಲ್ (ಹಿಂ): ರಾ.7.25ಕ್ಕೆ, ರಾ.10.05ಕ್ಕೆ.
ಸ್ಕ್ರೀನ್ 3	ರಾಮಚಂದ್ರ ಬಾಸ್ & ಕೋ (ಮ): ಬೆ.10ಕ್ಕೆ, ಗ್ರ್ಯಾನ್ ಟುರಿಸ್ಮೋ (ಇಂ): ಮ.1.30ಕ್ಕೆ, ರಾ.7.20ಕ್ಕೆ, ಗಾಂಡೀವಧಾರಿ ಅರ್ಜುನ (ತೆ): ಸಂ.4.30ಕ್ಕೆ, ಅಖೇಲಿ (ಹಿಂ): ರಾ.10ಕ್ಕೆ.
ಸ್ಕ್ರೀನ್ 4	ಟೋಬಿ (ಕ): ಬೆ.10ಕ್ಕೆ, ಮ.1ಕ್ಕೆ, ಸಂ.4.05ಕ್ಕೆ, ರಾ.7.10ಕ್ಕೆ, ರಾ.10.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಜೈಲರ್ (ಕ): ಬೆ.11.20ಕ್ಕೆ, ರಾ.9.50ಕ್ಕೆ, ಜೈಲರ್ (ತ): ಮ.2.50ಕ್ಕೆ, ಸಂ.6.20ಕ್ಕೆ.
ಸ್ಕ್ರೀನ್ 2	ಗೂಮರ್ (ಹಿಂ): ಬೆ.9.55ಕ್ಕೆ, ಓಎಂಜಿ 2 (ಹಿಂ): ಮ.12.55ಕ್ಕೆ, ರಾ.7.15ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಸಂ.4.10ಕ್ಕೆ, ಬ್ಲೂ ಬೀಟಲ್ (ಇಂ): ರಾ.10.30ಕ್ಕೆ.
ಸ್ಕ್ರೀನ್ 3	ಗದರ್ 2 (ಹಿಂ): ಬೆ.9.55ಕ್ಕೆ, ರಾಖಿ ಔರ್ ರಾಣಿ ಕೀ ಪ್ರೇಮ್ ಕಹಾನಿ (ಹಿಂ): ಮ.1.25ಕ್ಕೆ, ಬ್ಲೂ ಬೀಟಲ್ (ಇಂ): ಸಂ.4.55ಕ್ಕೆ, ಆಚಾರ್ & ಕೋ (ಕ): ರಾ.7.45ಕ್ಕೆ, ಗೂಮರ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 4	ಜೈಲರ್ (ತ): ಬೆ.10.30ಕ್ಕೆ, ಗದರ್ 2(ಹಿಂ): ಮ.2ಕ್ಕೆ, ಸಂ.6.10ಕ್ಕೆ, ಓಎಂಜಿ 2 (ಹಿಂ): ರಾ.9.40ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಈ ಪಟ್ಟಣಕ್ಕೆ ಏನಾಗಿದೆ (ಕ): ಬೆ.10.45ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಮ.1.15ಕ್ಕೆ, ಶೀಲಾ (ಕ): ಸಂ.4.15ಕ್ಕೆ, ಡಿಡಿ ರಿಟರ್ನ್ಸ್ (ತ): ಸಂ.6.30ಕ್ಕೆ, ರಾ.9ಕ್ಕೆ.
ಸ್ಕ್ರೀನ್ 2	ಕೌಸಲ್ಯ ಸುಪ್ರಜಾ ರಾಮ (ಕ): ಬೆ.1.15ಕ್ಕೆ, ರಾ.7ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ) ಸಂ.4.15ಕ್ಕೆ.
ಸ್ಕ್ರೀನ್ 3	ಕೌಸಲ್ಯ ಸುಪ್ರಜಾ ರಾಮ (ಕ): ಬೆ.10.30ಕ್ಕೆ, ಸಂ.4ಕ್ಕೆ, ಮೆಗ್ 2 ದಿ ಟ್ರೆಂಚ್ (3ಡಿ) (ಇಂ): ಮ.1.20ಕ್ಕೆ, ಸಂ.6.55ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 4	ಮೆಗ್ 2 ದಿ ಟ್ರೆಂಚ್ (3ಡಿ)(ಇಂ): ಬೆ.10.45ಕ್ಕೆ, ನಮೋ ಭೂತಾತ್ಮ (ಕ): ಮ.1.10ಕ್ಕೆ, ಮ.3.50ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಸಂ.6.30ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ರಾ.9.15ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಜೈಲರ್ (ತ): ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, **ಜೈಲರ್ (ಕ):** ಬೆ.8.25ಕ್ಕೆ, ಮ.3.10ಕ್ಕೆ, **ಓಎಂಜಿ 2 (ಹಿಂ):** ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, **ಗದರ್ 2 (ಹಿಂ):** ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, **ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ):** ರಾ.9.45ಕ್ಕೆ, **ಆಚಾರ್ & ಕೋ (ಕ):** ಮ.3.55ಕ್ಕೆ, **ಕೌಸಲ್ಯ ಸುಪ್ರಜಾ ರಾಮ (ಕ):** ಮ.3.25ಕ್ಕೆ, ರಾ.10.30ಕ್ಕೆ, **ನಮೋ ಭೂತಾತ್ಮ (ಕ):** ಬೆ.11.55ಕ್ಕೆ, **ರಾಖಿ ಔರ್ ರಾಣಿ (ಹಿಂ):** ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, **ಓಪನ್‌ಹೈಮರ್ (ಇಂ):** ಸಂ.6.35ಕ್ಕೆ, **ಭೋಳಾ ಶಂಕರ್ (ತೆ):** ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, **ಮೆಗ್ 2 (ಇಂ):** ಮ.12.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಏಪ್ರಿಲ್–ಜೂನ್‌ನಲ್ಲಿ ಜಿಡಿಪಿ ಶೇ.7.8 ರಷ್ಟು ಬೆಳವಣಿಗೆ; ಚೀನಾ ಹಿಂದಿಕ್ಕಿದ ಭಾರತ

ನವದೆಹಲಿ: 2023–24ರ ಏಪ್ರಿಲ್–ಜೂನ್ ಮೊದಲ ತ್ರೈಮಾಸಿಕದಲ್ಲಿ ಭಾರತದ ಶೇಕಡಾ 7.8 ರಷ್ಟು ಬೆಳವಣಿಗೆ ದಾಖಲಿಸಿದ್ದು, ಮುಖ್ಯವಾಗಿ ಕೃಷಿ ಮತ್ತು ಹಣಕಾಸು ಕ್ಷೇತ್ರಗಳ ಉತ್ತಮ ಕಾರ್ಯಕ್ಷಮತೆಯಿಂದಾಗಿ ವೇಗವಾಗಿ ಬೆಳವಣಿಗೆ ಹೊಂದುತ್ತಿರುವ ಪ್ರಮುಖ ಆರ್ಥಿಕತೆಯಾಗಿ ತನ್ನ ಸ್ಥಾನವನ್ನು ಉಳಿಸಿಕೊಂಡಿದೆ.

ಕೇಂದ್ರ ಸರ್ಕಾರ ಇಂದು ಬಿಡುಗಡೆ ಮಾಡಿದ ಅಂಕಿ–ಅಂಶಗಳ ಪ್ರಕಾರ, 2023ರ ಏಪ್ರಿಲ್‌ನಿಂದ ಜೂನ್‌ವರೆಗಿನ ತ್ರೈಮಾಸಿಕ ಅವಧಿಯಲ್ಲಿ ಭಾರತದ ಆರ್ಥಿಕತೆ ಶೇ. 7.8ರಷ್ಟು ಹೆಚ್ಚಿದೆ.

ಇನ್ನು ಹಿಂದಿನ ಕ್ವಾರ್ಟರ್‌ನಲ್ಲಿ, ಅಂದರೆ 2023ರ ಜನವರಿಯಿಂದ ಮಾರ್ಚ್‌ವರೆಗಿನ ಅವಧಿಯಲ್ಲಿ ಭಾರತದ ಜಿಡಿಪಿ ಶೇ. 6.1ರಷ್ಟು ಇತ್ತು. 2022–23ರ ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ಒಟ್ಟು ದೇಶೀಯ ಉತ್ಪನ್ನ (ಜಿಡಿಪಿ) 13.1 ರಷ್ಟು ವಿಸ್ತರಿಸಿದೆ.

ಏಪ್ರಿಲ್–ಜೂನ್ 2023 ರಲ್ಲಿ ಚೀನಾ ಕೇವಲ ಶೇ. 6.3 ಬೆಳವಣಿಗೆಯನ್ನು ದಾಖಲಿಸಿದ್ದು, ಭಾರತ ಚೀನಾವನ್ನು ಹಿಂದಿಕ್ಕಿ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿ ತನ್ನ ಸ್ಥಾನ ಉಳಿಸಿಕೊಂಡಿದೆ.

ರಾಷ್ಟ್ರೀಯ ಅಂಕಿಅಂಶ ಕಚೇರಿ ದತ್ತಾಂಶದ ಪ್ರಕಾರ, ಕೃಷಿ ವಲಯವು ಶೇ. 3.5 ರಷ್ಟು ಬೆಳವಣಿಗೆ ಕಂಡಿದೆ. 2022–23ರ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ಶೇ. 2.4 ರಷ್ಟು ಬೆಳವಣಿಗೆ ದಾಖಲಿಸಿತ್ತು. ಆದರೂ, ಪ್ರಸಕ್ತ ಹಣಕಾಸು ವರ್ಷದ ಆರಂಭಿಕ ತ್ರೈಮಾಸಿಕದಲ್ಲಿ ಉತ್ಪಾದನಾ ವಲಯದ ಬೆಳವಣಿಗೆಯ ವೇಗವು ಶೇಕಡಾ 4.7ಕ್ಕೆ ಕಡಿಮೆಯಾಗಿದೆ, ಕಳೆದ ವರ್ಷದ ಅವಧಿಯಲ್ಲಿ ಇದು ಶೇಕಡಾ 6.1 ರಷ್ಟಿತ್ತು.

'ಹಣಕಾಸು, ರಿಯಲ್ ಎಸ್ಟೇಟ್ ಮತ್ತು ವೃತ್ತಿಪರ ಸೇವೆಗಳ ಜಿವಿಎ ವಿಸ್ತರಣೆಯು ಶೇಕಡಾ 12.2 ರಷ್ಟಿದ್ದು, ಹಿಂದಿನ ವರ್ಷದ ತ್ರೈಮಾಸಿಕದಲ್ಲಿ ಶೇಕಡಾ 8.5 ರಷ್ಟಿತ್ತು.

ವಿಶ್ವೇಶ್ವರಯ್ಯ ಎಜುಕೇಷನಲ್ ಟ್ರಸ್ಟ್ (ರಿ)

ಬೋಗಾದಿ 2ನೇ ಹಂತ, ಮೈಸೂರು–570026

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀಯುತ ಜಿ.ಎಲ್.ನಾರಾಯಣ್

ಜನನ: 08–08–1931 ನಿಧನ: 30–08–2023

ಶ್ರೀಯುತರು ಕೊಳ್ಳೇಗಾಲ ತಾಲ್ಲೂಕಿನ ಕಾಮಗೆರೆ ಗ್ರಾಮದಲ್ಲಿ ಹುಟ್ಟಿ ಪರಿಶ್ರಮದಿಂದ ಇಂಜಿನಿಯರಿಂಗ್ ಪದವಿ ಪಡೆದು, ವಿಶ್ವಸಂಸ್ಥೆಯಲ್ಲಿ ಮುಖ್ಯ ಇಂಜಿನಿಯರ್ ಆಗಿ ಸೇವೆ ಸಲ್ಲಿಸಿರುತ್ತಾರೆ, ತಮ್ಮ ನಿವೃತ್ತಿ ಜೀವನವನ್ನು ಸಮಾಜಸೇವೆಯಲ್ಲಿ ತೊಡಗಿಸಿಕೊಂಡು. ಮೈಸೂರಿನ ನಮ್ಮ ವಿಶ್ವೇಶ್ವರಯ್ಯ ಎಜುಕೇಷನಲ್ ಟ್ರಸ್ಟ್(ರಿ)ನ ಸಂಸ್ಥಾಪಕ ಅಧ್ಯಕ್ಷರಾಗಿ ದೀರ್ಘಕಾಲ ಸೇವೆ ಸಲ್ಲಿಸಿ ದೈವಾಧೀನರಾಗಿದ್ದಾರೆ.

ಮೃತರ ಆತ್ಮಕ್ಕೆ ಶಾಂತಿ ಹಾಗೂ ಕುಟುಂಬವರ್ಗದವರಿಗೆ ಈ ದುಃಖವನ್ನು ಭರಿಸಲು ಭಗವಂತನು ಶಕ್ತಿಯನ್ನು ನೀಡಲಿ ಎಂದು ಪ್ರಾರ್ಥಿಸುತ್ತೇವೆ

ವಿಶ್ವೇಶ್ವರಯ್ಯ ಎಜುಕೇಷನಲ್ ಟ್ರಸ್ಟ್ (ರಿ)

ಆಡಳಿತ ಮಂಡಳಿ ಹಾಗೂ ಸಿಬ್ಬಂದಿವರ್ಗ

ಮೊದಲನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ

ದುಃಖತಪ್ತರು: ಶ್ರೀಮತಿ.ಕೆ. ಲೋಹಿತಾಶ್ವಿನಿ ನಾಯ್ಡು, ಅಕ್ಕಂದಿರು, ಭಾವಂದಿರು, ಅಣ್ಣ ಅತ್ತಿಗೆ ಹಾಗೂ ಕುಟುಂಬವರ್ಗದವರು

ಶ್ರೀ ಟಿ.ಪಿ.ರಮೇಶ್ (ನ್ಯಾಲ್ಟೂರ್)

ಬಿಜೆಪಿ ಮುಖಂಡರು

6ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 6 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ

ದುಃಖತಪ್ತರು: ಕುಟುಂಬದವರು

ಲೋಕೇಶ್

ನಗರಸಭಾ ಕಾರ್ಯಾಲಯ, ಹುಣಸೂರು

ಮೈಸೂರು ಜಿಲ್ಲೆ – 571105

ದೂರವಾಣಿ: 08222–252048 ಇ–ಮೇಲ್:itstaff_ulb_hunsur@yahoo.co.in

ಸಂಖ್ಯೆ:ಹುನಕಾ/ಜೆ.ಇ–2/ಎಸ್.ಎಫ್.ಸಿ–2023–24/ಟೆಂ–02/2023–24 ದಿನಾಂಕ: 28.08.2023

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ)

ಹುಣಸೂರು ನಗರಸಭಾ ವ್ಯಾಪ್ತಿಯಲ್ಲಿ 2023–24 ನೇ ಸಾಲಿನ ಎಸ್.ಎಫ್.ಸಿ. ಮುಕ್ತನಿಧಿ, ಎಸ್.ಸಿ.ಎಸ್‌ಪಿ, ಮತ್ತು ಟಿ.ಎಸ್.ಪಿ ಹಾಗೂ ಎಸ್.ಎಫ್.ಸಿ. ಕುಡಿಯುವ ನೀರು ಅನುದಾನದಡಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಲೋಕೋಪಯೋಗಿ ಇಲಾಖೆಯಲ್ಲಿ ಚಾಲ್ತಿ ಸಾಲಿಗೆ ನೊಂದಾಯಿತ ಗುತ್ತಿಗೆದಾರರಿಂದ **KW-1** ರ ನಿಯಮಗಳ ಅನ್ವಯ ಹಾಗೂ 1999 ಹಾಗೂ 2000 ರ ಪಾರದರ್ಶಕ ಕಾಯ್ದೆಗೆ ಒಳಪಟ್ಟು ಪ್ರತ್ಯೇಕವಾಗಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್‌ರನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಗುತ್ತಿಗೆದಾರರು **https://kppp.karnataka.gov.in/** ನಿಂದ ಟೆಂಡರ್ ಷರತ್ತು, ಇಎಂಡಿ ವಿವರಹಾಗೂ ದಸ್ತಾವೇಜನ್ನು ಡೌನ್ ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದು.

ಟೆಂಡರ್ ಆಕ್ಷೇಪಣೆಗಳನ್ನು ಸಲ್ಲಿಸುವ ಮತ್ತು ಟೆಂಡರ್ ಪಾರಂ ಡೌನ್ ಲೋಡ್ ಮಾಡಿಕೊಳ್ಳುವ ಹಾಗೂ ಭರ್ತಿ ಮಾಡಿದ ಟೆಂಡರ್‌ನ್ನು ಸಲ್ಲಿಸುವ ಕಡೆಯ **ದಿನಾಂಕ:14–09–2023 ಅಪರಾಹ್ನ 04.00 ಗಂಟೆ** ಹಾಗೂ ಟೆಂಡರ್ ತೆರೆಯುವ **ದಿನಾಂಕ: 15–09–2023 ಅಪರಾಹ್ನ 05.30 ಗಂಟೆಗೆ.** ಹೆಚ್ಚಿನ ಮಾಹಿತಿ, ಕಾಮಗಾರಿ ನಿಭಂದನೆ ಹಾಗೂ ಷರತ್ತುಗಳಿಗೆ ಕಛೇರಿಯ ವೇಳೆಯಲ್ಲಿ ಈ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

ಕ್ರ.ಸಂ	ಕಾಮಗಾರಿಗಳ ವಿವರ.	ಅಂದಾಜು ಮೊತ್ತ
1	DMA/2023-24/RD/WORK_INDENT3027	3.20
2	DMA/2023-24/OW/WORK_INDENT3034	3.70
3	DMA/2023-24/RD/WORK_INDENT3036 (ST)	4.35
4	DMA/2023-24/OW/WORK_INDENT3060	4.35
5	DMA/2023-24/OW/WORK_INDENT3061 (SC)	4.49
6	DMA/2023-24/OW/WORK_INDENT3067 (SC)	3.00
7	DMA/2023-24/RD/WORK_INDENT3069	2.10
8	DMA/2023-24/WS/WORK_INDENT3183	4.00

ಸಹಿ/– ಆಡಳಿತಾಧಿಕಾರಿಗಳು ಹಾಗೂ ಮಾನ್ಯ ಜಿಲ್ಲಾಧಿಕಾರಿಗಳು ಮೈಸೂರು ಜಿಲ್ಲೆ, ಮೈಸೂರು

ಸಹಿ/– ಪೌರಾಯುಕ್ತರು ನಗರಸಭೆ, ಹುಣಸೂರು

DIPR/MYS/KAVITA/272/2023-24

ಪುರಸಭಾ ಕಾರ್ಯಾಲಯ, ಪಿರಿಯಾಪಟ್ಟಣ ಮೈಸೂರು ಜಿಲ್ಲೆ –571107

ಈ–ಮೇಲ್: itstaff_ulb_periyapatna@yahoo.com Phone(O): 08223-273036

ಸಂ:ಪಿಪುಸ/ತಾಂತ್ರಿಕ/ಜೆಇ.2/ಟೆಂಡರ್–02/2023–24 ದಿನಾಂಕ: 29.08.2023

ಟೆಂಡರ್ ಪ್ರಕಟಣೆ

(ಕರ್ನಾಟಕ ಸರ್ಕಾರದ ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಈ ಮೂಲಕ ಪ್ರಕಟಿಸುವುದೇನೆಂದರೆ ಪಿರಿಯಾಪಟ್ಟಣ ಪುರಸಭಾ ವ್ಯಾಪ್ತಿಯಲ್ಲಿನ 2023–24ನೇ ಸಾಲಿನ ಎಸ್.ಎಫ್.ಸಿ. ಮುಕ್ತ ನಿಧಿ & ಶೇ.24.10ರ ಎಸ್.ಎಫ್.ಸಿ. ಮುಕ್ತ ನಿಧಿ & ಶೇ.7.25ರ ಎಸ್.ಎಫ್.ಸಿ. ಮುಕ್ತ ನಿಧಿ ಮತ್ತು ಪುರಸಭಾ ಅನುದಾನದ ಕಾಮಗಾರಿಗಳನ್ನು ನಿರ್ವಹಿಸಲು, ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟಿರುವ ಅರ್ಹ ಗುತ್ತಿಗೆದಾರರಿಂದ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ (ಕೆ.ಡಬ್ಲ್ಯೂ–1) ನಿಯಮಾವಳಿಯಂತೆ ಕನಿಷ್ಠ ದರಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು https://kppp.karnataka.gov.in ವೆಬ್‌ಸೈಟ್ ಮೂಲಕ ಪಡೆದುಕೊಂಡು ನಂತರ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದು.

ಟೆಂಡರ್ ಸಲ್ಲಿಸುವ ವಿವರ: 1) ಟೆಂಡರ್ ಫಾರಂಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿ: 01.09.2023 ರಿಂದ 15.09.2023ರ ವರೆಗೆ. **2)** ಟೆಂಡರ್ ಸ್ವೀಕರಿಸುವ ಕೊನೆಯ ದಿ: 15.09.2023ರ ಸಾಯಂಕಾಲ 04.00 ಗಂಟೆ **3)** ಟೆಂಡರ್‌ಗಳನ್ನು ತೆರೆಯುವ ದಿ: 19.09.2023ರ ಬೆಳಿಗ್ಗೆ 11.00 ಗಂಟೆ

ಕ್ರ.ಸಂ.	ಇಂಡೆಂಟ್ ನಂ.	ಅಂದಾಜು ಮೊತ್ತ ಲಕ್ಷಗಳಲ್ಲಿ	ವರ್ಗ
1	DMA/2023-24/RD/WORK_INDENT3145	3.00	ಪರಿಶಿಷ್ಟ ಜಾತಿ
2	DMA/2023-24/RD/WORK_INDENT3144	6.25	ಇತರೆ
3	DMA/2023-24/RD/WORK_INDENT3133	8.50	ಪರಿಶಿಷ್ಟ ಪಂಗಡ
4	DMA/2023-24/RD/WORK_INDENT3121	12.50	ಪರಿಶಿಷ್ಟ ಜಾತಿ
5	DMA/2023-24/RD/WORK_INDENT3118	15.60	ಇತರೆ
6	DMA/2023-24/OW/WORK_INDENT3116	5.10	ಇತರೆ
7	DMA/2023-24/RD/WORK_INDENT3113	5.70	ಇತರೆ

ಸೂಚನೆ: ಈ ಕಛೇರಿಯಿಂದ ನೀಡುವ ಇತರೆ ಎಲ್ಲಾ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು ಮತ್ತು ಹೆಚ್ಚಿನ ಮಾಹಿತಿ ಹಾಗೂ ಕಾಮಗಾರಿಗಳ ವಿವರಗಳಿಗೆ ಕಛೇರಿಯ ವೇಳೆಯಲ್ಲಿ ಈ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

ಸಹಿ/– (ಶ್ರೀಮತಿ ರುಚಿ ಬಿಂದಾಲ್ ಭಾ.ಆ.ಸೇ.) ಆಡಳಿತಾಧಿಕಾರಿಗಳು, ಪುರಸಭೆ, ಪಿರಿಯಾಪಟ್ಟಣ.

ಸಹಿ/– (ಕೊಟ್ಟುಕತ್ತಿರ ಮುತ್ತಪ್ಪ) ಮುಖ್ಯಾಧಿಕಾರಿಗಳು, ಪುರಸಭೆ, ಪಿರಿಯಾಪಟ್ಟಣ.

DIPR/DDMYS/KSMCA/265/2023-24

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಷನ್ ಲಿಮಿಟೆಡ್

(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯ ಮ್ಯಾಗ್ನಸೈಟ್ ಗಣಿಯಲ್ಲಿ ಕಾರ್ಯ ಗ್ರಾಮ, ಮಾದಾಪುರ ಅಂಚೆ, ಹುಲ್ಲಹಳ್ಳಿ ಹೋಬಳಿ, ನಂಜನಗೂಡು ತಾಲ್ಲೋಕು, ಮೈಸೂರು ಜಿಲ್ಲೆ – 571315

ದೂ.:08221–295056

ಸಂ: ಕೆಎಸ್‌ಎಂಸಿಎಲ್/ಕಾಮ್ಯಾಗ/ಯಾಂತ್ರಿಕ/ಹರಾಜು/2023–24/424

ದಿ: 01.09.2023

ಪ್ರಕಟಣೆ

ಸಂಸ್ಥೆಯ ಕಾರ್ಯ ಮ್ಯಾಗ್ನಸೈಟ್ ಗಣಿಯಲ್ಲಿ ವೇಸ್ಟ್ ಆಯಿಲ್ 1300 ltr ಇರುವಂತೆಯೇ ಮಾರಾಟಕ್ಕೆ ಲಭ್ಯವಿರುತ್ತದೆ. ಆಸಕ್ತಿಯುಳ್ಳ ಖರೀದಿದಾರರು GST ಹಾಗೂ ಪರಿಸರ ಇಲಾಖೆಯ ಅನುಮೋದನೆ ಪಡೆದಿರುವವರು ದಿ: 15.09.2023 ರ ಒಳಗೆ ತಮ್ಮ ದರಪಟ್ಟಿಯನ್ನು ಮುಚ್ಚಿದ ಲಕೋಟೆಯಲ್ಲಿ ಕಛೇರಿಗೆ ಸಲ್ಲಿಸತಕ್ಕದ್ದು.

ಸಹಿ/– ಉಪ ಪ್ರಧಾನ ವ್ಯವಸ್ಥಾಪಕರು (ಉ), ಕಾರ್ಯ ಮ್ಯಾಗ್ನಸೈಟ್ ಗಣಿ
